# ನಾಯೀಕತೆ

(ನಾಟಕ)

ಚಂದ್ರಶೇಖರ ಕಂಬಾರ

ಈ ಹೊತ್ತಗೆಯನ್ನು ಕನ್ನಡನುಡಿಯ ಸದಸ್ಯರಿಗೆ ಅಧ್ಯಯನ-ಪರಾಮರ್ಶೆಗೆ ಮಾತ್ರ ನೀಡಲಾಗಿದೆ.
ಹೊತ್ತಗೆಯನ್ನು ಕೊಂಡು ಓದಿ ಪ್ರೋತ್ಸಾಹಿಸಿ.

ಮಿಂಬಲೆಯಲ್ಲಿ ಕನ್ನಡ ಸಾಹಿತ್ಯಾಸಕ್ತರ ಕೂಟ
https://kannadanudi.wikidot.com

# ನಾಯೀಕತೆ : ನನ್ನ ಮಾತು

ನಾಟಕವೊಂದು ಒಂದು ಮುದ್ರಣ ಕಾಣುವುದೇ ಪುಣ್ಯ ಎನ್ನುವಂತಹ ಸ್ಥಿತಿಯಲ್ಲಿ ನನ್ನ ನಾಟಕಗಳು ಹಲವಾರು ಮುದ್ರಣ ಕಂಡಿರುವುದು ನನ್ನ ಭಾಗ್ಯ ಎಂದೇ ಭಾವಿಸುತ್ತೇನೆ.

ಈ ನಾಟಕ 'ಸಂಗೀತ' ಎಂಬ ಹೆಸರಿನಲ್ಲಿ ಚಲನಚಿತ್ರವಾಗಿಯೂ ಪ್ರಸಿದ್ಧವಾಗಿತ್ತು.

ಈಗಾಗಲೇ ಎರಡು ಬಾರಿ ಮುದ್ರಣವಾಗಿರುವ 'ನಾಯೀಕಥೆ' ಮೂರನೇ ಮುದ್ರಣ ಕಾಣುತ್ತಿದೆ. ಮೊದಲ ಮುದ್ರಣಕ್ಕೆ ಶ್ರೀ ಬರಗೂರು ರಾಮಚಂದ್ರಪ್ಪ ಅವರು ಮುನ್ನುಡಿ ಬರೆದಿದ್ದರು. ಅದೇ ಮುನ್ನುಡಿಯನ್ನು ಈ ಮುದ್ರಣಕ್ಕೂ ಉಳಿಸಿಕೊಳ್ಳಲಾಗಿದೆ. ಶ್ರೀ ಬರಗೂರು ರಾಮಚಂದ್ರರಪ್ಪ ಅವರಿಗೂ;

ಈ ನಾಟಕವನ್ನು ಮುದ್ರಿಸಿದ ಸ್ವ್ಯಾನ್ ಪ್ರಿಂಟರ್ಸ್ ಅವರಿಗೂ ಮತ್ತು ಪ್ರಕಟಿಸಿದ ಪ್ರಕಾಶ್ ಕಂಬತ್ತಳ್ಳಿ ದಂಪತಿಗಳಿಗೂ;

ನನ್ನ ನಾಟಕಗಳನ್ನು ಓದಿ, ಮೆಚ್ಚಿದ ಪ್ರೇಕ್ಷಕರಿಗೂ ಆಡಿದ ರಮಗ ತಂಡಗಳಿಗೂ;

ನನ್ನ ನಮನಗಳು ಸಲ್ಲುತ್ತವೆ.

**ಚಂದ್ರಶೇಖರ ಕಂಬಾರ**

# ನಾಯೀಕತೆ : ಮುನ್ನುಡಿ (ಮೊದಲ ಮುದ್ರಣಕ್ಕೆ ಬರೆದುದು)

ನನ್ನ ಮಿತ್ರರಾದ, ಕನ್ನಡದ ಖ್ಯಾತ ನಾಟಕಕಾರ ಹಾಗೂ ಕವಿ ಡಾ|| ಚಂದ್ರಶೇಖರ ಕಂಬಾರರ ಈ ನಾಟಕಕ್ಕೆ ಮುನ್ನುಡಿ ಬರೆಯುವುದು ನನಗೆ ಸಂತೋಷದ ವಿಷಯವೆಂದರೆ ಅದು ಔಪಚಾರಿಕವಲ್ಲ. ‘ನಾಯಿಕಥೆ’ ಎಂಬ ಈ ನಾಟಕವನ್ನು ಓದಿ ಮುಗಿಸಿದ ಮೇಲೆ ಅದು ಕೊಟ್ಟ ಅನುಭವದಲ್ಲಿ ನೇರ ಹಾಗೂ ಸಂದಿಗ್ಧ ದೂರ ನೆಲೆಗಳು ಇರುವುದೂ ನನ್ನ ಖುಷಿಗೆ ಕಾರಣವಾಗಿದೆ. ಜೊತೆಗೆ ಭಾಷೆ ಮತ್ತು ಬಂಧಗಳಲ್ಲಿ ವಿಶಿಷ್ಟರಾಗಿ ಕಾಣಿಸುತ್ತ, ಗ್ರಾಮೀಣ ಸಂಸ್ಕೃತಿಯ ಸ್ಮೃತಿ ಮತ್ತು ಸಂಘರ್ಷದ ಎಳೆಗಳಿಂದ ಕೃತಿ ಕಟ್ಟಿ ಹೊರಡುವ ಕುಶಲತೆ ತೋರಿಸುತ್ತ ಬಂದ ಕಂಬಾರರು ಒಂದು ರೀತಿಯಲ್ಲಿ ಕುತೂಹಲಕರ ಸಾಹಿತ್ಯವ್ಯಕ್ತಿ. ನವ್ಯಕಾವ್ಯದ ಸೆಲೆಯಲ್ಲಿ ಸೇರಿದಾಗಲೂ ತಮ್ಮ ಶೈಲಿಯ ವಿಶಿಷ್ಟತೆಯಿಂದ ವಿಭಿನ್ನರಾಗಿ ಕಂಡ ಕಂಬಾರರ ಕನ್ನಡ ಆಧುನಿಕ ಪ್ರಭಾವಗಳ ಕಲೆಯೊಳಗೆ ರೊಯ್ಯನೆ ಹರಿಯುವ ಗ್ರಾಮೀಣ ಸಂಸ್ಕೃತಿಯ ಕುರುಹೋ ಎಂಬಂತಿತ್ತು. ನವ್ಯ ಸಾಹಿತ್ಯ ಒಗ್ಗಿಸಿಕೊಂಡ ನಯ ನಾಜೂಕಿನ ಮಧ್ಯಮವರ್ಗದ ಸಂಸ್ಕೃತಿಯ ಸೆಳೆತ ಅವರ ನಾಟಕಗಳ ವಸ್ತುವಿನಲ್ಲಿದ್ದರೆ ಲಯ ಮತ್ತಿತರ ಮಜಲುಗಳಲ್ಲಿ ಕಾಣುವ ಮಣ್ಣಿನ ಮಿಡಿತಗಳ ದ್ವಂದ್ವ ಅವರ ಭಾಷಾಪ್ರಯೋಗದಲ್ಲಿ ಇರುತ್ತದೆ. ಇದು ಗ್ರಾಮೀಣ ಬದುಕಿನಿಂದ ಬರುವ ಕಲಾಕಾರರು ಎದುರಿಸುವ ಸಮಸ್ಯೆಯೂ ಹೌದು. ಇದನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ನಿವಾರಿಸಿಕೊಳ್ಳಲು ಪ್ರಯತ್ನಿಸಬಹುದು. ನಾರ್ಸಿಸಸ್, ಚಾಳೇಶದಂಥ ನಾಟಕಗಳನ್ನು ಬರೆದ ಕಂಬಾರರೇ ‘ಹೇಳತೇನ ಕೇಳ’ದಂಥ ಕಾವ್ಯಕೃತಿ ಹಾಗೂ ಜೋಕುಮಾರಸ್ವಾಮಿ, ಜೈಸಿದನಾಯಕ, ಸಂಗ್ಯಾಬಾಳ್ಯ ಅನಬೇಕೊ ನಾಡೋಳಗ ಮುಂತಾದ ಕೃತಿಗಳನ್ನು ಕೊಟ್ಟರೆಂಬುದನ್ನಿಲ್ಲಿ ಜ್ಞಾಪಿಸಿಕೊಳ್ಳಬಹುದು. ಅದೇನೆ ಇರಲಿ ನವ್ಯ ಸಾಹಿತ್ಯದ ಸಂದರ್ಭದಲ್ಲಿ ಭಾಷೆಯ ದೃಷ್ಟಿಯಿಂದ ಕಂಬಾರರನ್ನು ವಿಮರ್ಶಕರು ವಿಶಿಷ್ಟರೆಂದು ಗುರುತಿಸಿದ್ದಾರೆ. ನನಗೆ ಇದೇ ಅಂಶ ವಿಶಿಷ್ಟ ಎನ್ನಿಸುವುದು ಮಧ್ಯಮವರ್ಗದ ರೋಚಕ ಮನಸ್ಸಿನ ಫಲವಾದ ವಿಮರ್ಶಾ ಉದಾರಗಳ ಮಾದರಿಯಲ್ಲಲ್ಲ. ಶಿಷ್ಟ ಸಂಸ್ಕೃತಿಯ ಸ್ತರದಲ್ಲೇ ಸ್ಥಗಿತಗೊಳ್ಳಬಹುದಾದ ಭಾಷಾಬಳಕೆಯಿಂದ ಬಿಡುಗಡೆ ಹೊಮದಲು ಸಾಧ್ಯಮಾಡಿದ ಗ್ರಾಮೀಣ ಸತ್ವದ ಕಾರಣಕ್ಕಾಗಿ ಕಂಬಾರರ ಭಾಷೆ ನನಗೆ ಮುಖ್ಯವೆನ್ನಿಸುತ್ತದೆ.

ಕಂಬಾರರ ‘ನಾಯೀಕಥೆ’ಯಲ್ಲಿ ಅನಗತ್ಯ ಗೋಜಲು ಇಲ್ಲದಿರುವುದೊಂದು ವಿಶೇಷ. ಅತ್ಯಂತ ಸಮಕಾಲೀನ ಜ್ವಲಂತ ಸಮಸ್ಯೆಯೂ ಕಂಬಾರರ ಕೈಯ್ಯಲ್ಲಿ ಸೆಕ್ಸ್ ಸ್ಪರ್ಶವಿಲ್ಲದೆ ಹೊರಬರಲಾರದೇನೊ ಎಂಬಂಥ ಗುಮಾನಿ ಅನೇಕ ಪ್ರಗತಿಪರ ವಿಚಾರಶಿಲರಲ್ಲಿದದರೆ ಅದಕ್ಕೆ ಕಾರಣವಿದೆ. ಜೋಕುಮಾರ ಸ್ವಾಮಿ ಮತ್ತು ಜೈಸಿದನಾಯಕ ನಾಟಕಗಳ ವಸ್ತುವಿನಲ್ಲಿರುವ ಪ್ರಖರ ಸಾಮಾಜಿಕ ಸತ್ಯವನ್ನು ಯಾರಾದರೂ ಗುರುತಿಸಬಹುದು. ಆದರೆ ಅದು ಹೆಣ್ಣಿನೊಂದಿಗೆ ಹೆಣೆದುಕೊಳ್ಳುತ್ತ ಗೌಣವಾಗುವ ಅಥವಾ ಬೇರೆ ಮಗ್ಗುಲಾಗುವ ರೀತಿಯಿಂದ ಸಂದಿಗ್ಧ ಉಂಟಾದರೆ ಆಶ್ಚರ್ಯವಿಲ್ಲ. ಕಂಬಾರರು ಕೊಡುವ ಸಮೃದ್ಧ ಸಂಕೇತಗಳು ಹೊರಡಿಸುವ ಧ್ವನಿ ವಸ್ತುವಿನ ಮೂಲಸ್ತರವನ್ನು ಮರೆಸುವಷ್ಟು ಶಕ್ತವಾಗುವ ಸೋಜಿಗಕ್ಕೆ ಕಾರಣವನ್ನು ನವ್ಯ ಸಾಹಿತ್ಯದ ನಿಲುವುಗಳಲ್ಲೇ ಕಾಣಬಹುದು. ಕಲೆಯೊಂದು ಕಟ್ಟಿಕೊಳ್ಳುವ ಕೃತಿಬಂಧಕ್ಕೆ ಅದು ಕೊಟ್ಟ

ಪ್ರಾಶಸ್ತ್ಯವನ್ನು ನಿರ್ದಿಷ್ಟ ವಸ್ತು ಮತ್ತು ಧೋರಣೆಗಳಿಗೆ ಕೊಟ್ಟಿರಲಿಲ್ಲ. ಹೀಗಾಗಿ ಗ್ರಾಮೀನ ಬದುಕಿನ ವಾಸ್ತವ, ಜಾನಪದ ತಂತ್ರದ ಬಳಕೆಗಳಿದ್ದೂ ನವ್ಯದ ಛಾಪು ಕಾಣುವ ನಾಟಕಗಳನ್ನು ಕಂಬಾರರು ಕೊಟ್ಟರು. ಈ ದ್ವಂದ್ವವನ್ನು ನಾವು ಆಳದಲ್ಲಿ ಸಮಾಜದ ಕಟುವಾಸ್ತವದ ಎಳೆಗಳನ್ನುಳಿಸಿದ ಅನುಬವ ಮತ್ತು ನಿರ್ದಿಷ್ಟ ಸಾಹಿತ್ಯ ಚಳುವಳಿಯ ಪ್ರಜ್ಞೆಗಳ ಹೊಂದಾಣಿಕೆ ಹುಟ್ಟಿಸಿದ ಬಿರುಕೆಂದು ಭಾವಿಸಬಹುದು. ಆದರೆ 'ನಾಯಿಕಥೆ'ಯಲ್ಲಿ ಕಂಬಾರರು ಇದರಿಂದ ಹೊರಬಂದು ಸ್ಪಷ್ಟ ನೆಲೆಯಲ್ಲಿ ನಿಂತು ಸಮಕಾಲೀನ ಆಶಯವುಳ್ಳ ನಾಟಕವನ್ನು ಕೊಟ್ಟಿದ್ದಾರೆ. ಜಾನಪದ ತಂತ್ರದಿಂದ ಕೂಡಿದ ಈ ನಾಟಕ ಜನಪ್ರಿಯ ಮಾದರಿಯನ್ನು ರೂಪಿಸಿಕೊಂಡಿದೆ. 'ಜನಪ್ರಿಯ' ಎಂದ ತಕ್ಷಣ ಅದರ ದರ್ಜೆಯನ್ನು ಕುರಿತು ಗುಮಾನಿ ಪಡಬೇಕಿಲ್ಲ. ಹೆಚ್ಚು ಜನರೊಂದಿಗೆ ಸಂವಾದ ಸಾಧ್ಯವಾಗಿಸುವ ಹಾಗೂ ಸಮಾಜೀಕರಣಗೊಂಡ ಕೃತಿಯೆಂಬ ಅರ್ಥದಲ್ಲಿ ಈ ಮಾತನ್ನು ಬಳಸಲಾಗಿದೆ. ಇದೇ ಸಂದರ್ಭದಲ್ಲಿ 'Concept of popularity' ಯನ್ನು ಕುರಿತು ಬರ್ಟೋಲ್ಟ್ ಬ್ರೆಕ್ಟ್ ಕೊಡುವ ವಿವರಣೆಯನ್ನು ಉಲ್ಲೇಖಿಸಿದರೆ ಸೂಕ್ತವಾದೀತು : "Popular-means intelligible to the broad masses, taking over their own forms of Expression and Enriching them/adopting and consolidating their stand point/representing the most progressive section of the people in such a way that it can be take over the leadership."

ಕಂಬಾರರ ಉಳಿದ ನಾಟಕಗಳ ವಿಷಯ ಒತ್ತಟ್ಟಿಗಿರಲಿ, ಸರಳ, ಸ್ಪಷ್ಟ, ಶಕ್ತ ನಾಟಕವಾದ 'ನಾಯಿಕಥೆ'ಗೆ ಮೇಲಿನ ಮಾತುಗಳು ಹಿನ್ನೆಲೆ ಒದಗಿಸುತ್ತವೆ. ಈ ನಾಟಕ ಸಾಮಾನ್ಯ ಸಮುದಾಯಕ್ಕೆ ಸ್ಪಷ್ಟವಾಗುವ, ಅವರದೇ ವಸ್ತು ಮತ್ತು ರೂಪಗಳನ್ನು ಅಳವಡಿಸಿಕೊಂಡ, ನಿರ್ದಿಷ್ಟ ನಿಲುವನ್ನು ನಿರೂಪಿಸುವ ನಾಟಕ. ಮುಂದೆ ಈ ಮಾತನ್ನು ವಿವರಿಸಲು ಪ್ರಯತ್ನಿಸುತ್ತೇನೆ.

ನಾಟಕದ ಮೊದಲ ಹತ್ತು ಪುಟಗಳಲ್ಲಿ ವಸ್ತುವಿನ ಒಳಸುಳಿಗೆ ಸಂಬಂಧಿಸಿದ ಭೂಮಿಕೆ ಸಿದ್ಧವಾಗುತ್ತದೆ. ಕಥೆಗಾರನಿಗೆ ಪ್ರೀತಿ ಪ್ರೇಮದ ಮೇಲೆ ಕತೆ ಹೇಳುವ ಆಸೆ. ಅದರ ಅಖಂಡ ಶಕ್ತಿಯ ಬಗ್ಗೆ ಅವನಿಗೆ ನಂಬಿಕೆ. ಆದರೆ ಹಿಮ್ಮೇಳದವನಿಗೆ ಅದು ಹಳೇ ಕತೆ.. ಈಗಿನ ಸಮಾಜದಲ್ಲಿ ದುಡ್ಡೇ ಮುಖ್ಯ ಎಂಬುದು ಅವನ ವಾದ. ಈ ಘರ್ಷಣೆಯನ್ನು ಅವರ ಚಕಮಕಿಯಲ್ಲಿ ನಾಟಕಕಾರರು ಸ್ಪಷ್ಟಗೊಳಿಸಿದ್ದಾರೆ.

'ಹಗುರಲ್ಲವೊ ಪ್ರೀತಿ ಪ್ರೇಮಾ
ಏನ ಹೇಳಲಿ ಅದರ ಮಹಿಮಾ' ಎನ್ನುವ ಕಥೆಗಾರ-
'ಭೂಮಿ ತಿರಗತೈತಿ ಯಾತಕ
ಆ ರವಿಯ ಸುತ್ತ
ಪ್ರೀತಿ ಪ್ರೇಮದಿಂದ ಅಲ್ಲವೆ?' ಎಂದು ಹಾಡಲಿಕ್ಕೆ ಹೊರಟರೆ, ಹಿಮ್ಮೇಳದವನು
'ದುಡ್ಡಿದ್ದವ ದೊಡ್ಡವಲ್ಲವೆ?

ಹೇಳೆನ್ನ ಗುರುವೆ
ದುಡ್ಡಿದ್ದವ ದೊಡ್ಡವಲ್ಲವೆ? '

ಎಂದು ಶುರುಮಾಡಿ ವಾದ ಹೂಡುತ್ತಾನೆ. ಈ ವಾದ-ವಿವಾದಗಳ ಕಡೆಗೆ ಕಥೆಗಾರನೇ "ದುಡ್ಡೂ ದೊಡ್ಡದಿರಬೌದು. ಆದ್ದರಿಂದ ಈ ಹೊತ್ತಿನ ದಿವಸ, ನಾವು ಪ್ರೇಮ ಮತ್ತು ದುಡ್ಡು ಎರಡೂ ಇರುವಂಥಾ ಕತಿ ಹೇಳೋಣ" ಎಂಬ ಹೊಂದಾಣಿಕೆಗೆ ಬರುತ್ತಾನೆ. ಇದು ನಾಟಕದ ಥೀಮನ್ನು ಕುರಿತ ಮಾತೇ ಆಗಿದೆ. ನಾಟಕದಲ್ಲಿ ದುಡ್ಡು ಮತ್ತು ಪ್ರೇಮ ಪರಸ್ಪರ ಒಂದರೊಳಗೊಂದಾಗುವ ರೀತಿಯಿಂದಲೇ ಇದು ಕೇವಲ ಪ್ರೇಮದ ಕತೆಯಾಗಿಲ್ಲ. 'ಕಥೆಗಾರ'ನಿಗೆ ಪ್ರೀತಿ ಪ್ರೇಮದ ಕತೆ ಹೇಳಿದರೆ ಸಾಕೆಂಬ ಭಾವನೆಯಿದ್ದರೂ 'ನಾಟಕಕಾರ' ಕಂಬಾರರು ಕಂಡುಕೊಂಡಿರುವ ನಮ್ಮ 'ಕ್ರೌರ್ಯ' ಈ ನಾಟಕವನ್ನು 'ಆದರ್ಶ ಪ್ರೇಮ'ದ ಸುಂದರತೆಯಿಂದ ಪಾರುಮಾಡಿದೆ. 'ಕಥೆಗಾರ' ಕಡೆಯಲ್ಲಿ ಪ್ರೀತಿಪ್ರೇಮದ 'ಮಹಿಮೆ'ಯನ್ನು ಹೊಗಳಿ ಹಾಡಿದರೂ ಅದು ಸಾಧಿತವಾಗುವುದಕ್ಕೆ ಕಾರಣ ನಾಟಕಕ್ಕೆ ಒದಗಿದ ಒಡಲು ಸಮಕಾಲೀನ ಸತ್ವ ಪಡೆದದ್ದೇ ಆಗಿದೆ. ಪ್ರೇಮಕ್ಕೆ ಪ್ರತಿಭಟನೆಯ ಧ್ವನಿ ಕೊಡುತ್ತದೆ. ಕಥೆಗಾರ ಮತ್ತು ಹಿಮ್ಮೇಳದ ನಡುವೆ ನಡೆದ ವಾದ ವಿವಾದದಲ್ಲಿ ಯಾವುದಕ್ಕಿಂತ ಯಾವುದು ದೊಡ್ಡದೆಂಬ ಸರಳ ಪ್ರಶ್ನೆ ಮಥ್ರ ಅಡಗಿದೆ. ಆದ್ದರಿಂದಲೇ ಕಡೆಯಲ್ಲಿ ಕಥೆಗಾರ "ಪ್ರೀತಿಪ್ರೇಮ ಕಾಸಿಗಿಂತ ದೊಡ್ಡದಂತ, ದೊಡ್ಡ ದೊಡ್ಡವರೆಲ್ಲ ಸಣ್ಣಮಂದಿಗಿ ತೋರಿಸಿಕೊಟ್ಟರು" ಎಂದು ಬೀಗಲು ಸಾಧ್ಯವಾಗಿದೆ. ಆದರೆ ನಡುವೆ ಬರುವ ನಾಟಕದ ಭಾಗ ಇಷ್ಟು ಸರಳವಾಗಿಲ್ಲ. ಅದಕ್ಕಿಂತ ಇದು ದೊಡ್ಡದೆಂದು ಸಾಧಿಸುವ ಸಾಧನ ಮಾತ್ರವಾಗದೆ ಅದನ್ನು ಮೀರಿದ ಸಾಮಾಜಿಕ ಆಯಾಮವನ್ನು ಪಡೆಯುತ್ತದೆ.

ನಾಟಕದ ಭಾಗದಲ್ಲಿ ಬರುವ ಕತೆಯ ಸಂಕ್ಷಿಪ್ತ ವಿವರ ಹೀಗಿದೆ :

ಸೋಮಣ್ಣ ಒಬ್ಬ ಸೊಕ್ಕಿನ ಶ್ರೀಮಂತ. ಕಣ್ಣಿಗೆ ಬಿದ್ದ ಹೆಣ್ಣುಗಳನ್ನು ಕೂಡಲೇಬೇಕೆಂಬ ಹಟದ ಅಹಂಕಾರಿ. ದಾಸರ ಶಾರಿಯನ್ನು ಬುಟ್ಟಿಗೆ ಹಾಕಿಕೊಳ್ಳಲು ಈತ ನೀರಿನಂತೆ ಹಣ ಸುರಿಯಲು ಸಿದ್ಧನಾಗುತ್ತಾನೆ. ಆಕೆಯಿಂದ ನಿರಂತರ ವಿರೋಧವನ್ನು ಎದುರಿಸುತ್ತಾನೆ. ಜೊತೆಗೆ ನಿಷ್ಠಾವಂತ ಸೇವಕ 'ನಾಯೀಮಗ' ತನ್ನ 'ದಣಿ' ಸೋಮಣ್ಣನ ವಿರುದ್ಧ ತಿರುಗಿ ಬೀಳುತ್ತಾನೆ. ಶಾರಿ ಮತ್ತು ನಾಯೀಮಗ ಒಂದಾಗುತ್ತಾರೆ.

-ಇದಿಷ್ಟು ಕಥಾ ಹಂದರ ನಾಟಕವಾಗಿ ಹಬ್ಬುವ ಕ್ರಮದಲ್ಲಿ ಪ್ರತಿಭಟನೆಯ ದನಿ ಸ್ಫೋಟಗೊಂಡು ಬಾಯಿಲ್ಲದವನಾದ 'ನಾಯೀಮಗ' ತಾನು ಮನುಷ್ಯನೆಂದು ಸಾರುವ ಘಟ್ಟಕ್ಕೆ ಬರುತ್ತದೆ. ಇದು ಅತ್ಯಂತ ಮುಖ್ಯವಾದ ಬೆಳವಣಿಗೆ. ನಾಟಕದ ಪ್ರಾರಂಭದಲ್ಲೇ 'ನಾಯೀಮಗ'ನ ವಿವರ ಬರುತ್ತದೆ. ಕಥೆಗಾರನೇ ಹೇಳುವ ಪ್ರಕಾರ ಆತನ "ಬೆನ್ನಾಗ ಬಲ ಇರಲಿಲ್ಲ. ಸೆಟೆದೇನೆಂದರ ಎದಿ ಇರಲಿಲ್ಲ. ಯಾವತ್ತೂ ಬಗ್ಗಿಕೊಂಡು ಇರತಿದ್ದ. ಹಿಂಗಾಗಿ ಸಾವ್ಕಾರ ಸೋಮಣ್ಣನ ಪಾದಾ ಕಂಡಿದ್ನS ಹೊರತು ಮೋತೀ ಕಂಡಿರಲಿಲ್ಲ. ಹಡದವರಿರಲಿಲ್ಲ, ಮನೀ ಇಲ್ಲಾ, ಒಂದು ವಿಳಾಸ ಅಂತ ಇರಲಿಲ್ಲಾ. ಅಷ್ಟS ಅಲ್ಲ ಅವಗೊಂದು ಹೆಸರS ಇರಲಿಲ್ಲ" – ಈ ವಿವರಗಳಲ್ಲೇ ನಾಯೀಮಗ ಕೇವಲ ಒಬ್ಬ ವ್ಯಕ್ತಿಯಾಗದೆ, ಅಸಮಾನತೆಯ ಕ್ರೂರ ಸಮಾಜದಲ್ಲಿ ನಿರಂತರವಾಗಿ ನಡೆದುಕೊಂಡು ಬಂದ ಪರಮ ವಿಧೇಯತಾ ಮೌಲ್ಯದ ಕಡುನಿಷ್ಠ ಪ್ರತಿನಿಧಿಯಾಗಿದ್ದಾನೆ.

ಇಡೀ ನಾಟಕದಲ್ಲಿ ಈತನ ಮಾತುಗಳೂ ಕಡಿಮೆ. ಕೇವಲ ಆಜ್ಞಾಪಾಲಕನಾಗಿ 'ನಿಷ್ಠೆ'ಗೆ ತನ್ನನ್ನು ಮಾರಿಕೊಂಡವ ಈತ. ಈ ಸ್ಥಿತಿಯನ್ನು ಶ್ರೀಮಂತವರ್ಗ ಹೇಗೆ ವೈಭವಿಸಿ ವಂಚಿಸುತ್ತದೆಯೆಂಬುದಕ್ಕೆ ಸೋಮಣ್ಣನ ಈ ಮಾತುಗಳು ಸಾಕ್ಷಿ : "ಇದು ನನ್ನ ನಾಯಿ, ಕಚ್ಚಂದರ ಕಚ್ಚತೈತಿ, ಬೊಗಳಂದರ ಬೊಗಳುತೈತಿ. ಅಷ್ಟS ಅಲ್ಲ, ಒಮ್ಮೊಮ್ಮಿ ಹಾಡತೈತಿ.... ಎಂಥೆಂಥಾ ಬ್ಯಾಟೀನ ಹೆಂಗೆಂಗ ಹಾರಿ ಹಿಡಿದೈತಿ ಗೊತ್ತಾ? ಇಡೀ ತಗ್ಗಿನಾಗ ಇಂಥಾ ಜಾತಿವಂತ ನಾಯಿ ಹುಡುಕಿದರೂ ಸಿಕ್ಕೋದಿಲ್ಲ. ಇದು ಯಾವತ್ತೂ ಲೋಡ ಮಾಡಿದ ಬಂದೂಕಿನ್ಹಾಂಗ."

ನಾಯೀಮಗನ ಬಗೆಗಿನ ತಿರಸ್ಕಾರ ಮತ್ತು ನಿಷ್ಠೆಯ ವೈಭವೀಕರಣ-ಎರಡೂ ಸೇರಿರುವ ಈ ಮಾತುಗಳು ಊಳೀಗಮಾನ್ಯ ಪದ್ಧತಿಯ 'ಪ್ರಭು'ಗಳಿಗೆ ತೀರಾ ಸಹಜವೆಮಬುದನ್ನು ಇತಹಾಸವೇ ತೋರಿಸಿಕೊಟ್ಟಿದೆ. ಇವನದು ಇಂಥ 'ಖ್ಯಾತಿ'ಯಾದರೆ ಸೋಮಣ್ಣನದು 'ನೀರಿನಾಗಿನ ನೆರಳ ನೋಡಿ ಹಾರೋ ಹಕ್ಕಿ ಹೊಡದ- ಅಂತ ಖ್ಯಾತಿ.' ಹೀಗೆ ಸೋಮಣ್ಣ ಮತ್ತು ನಾಯೀಮಗ ಈ ಶ್ರೇಣೀಕೃತ ಸಮಾಜದ ವಿರುದ್ಧ ನೆಲೆಗಳಲ್ಲಿ ನಿಂತಿದ್ದಾರೆ. ಒಬ್ಬ ಒಡೆಯ, ಇನ್ನೊಬ್ಬ ಆಳು. ಆಳಿನ ಸ್ಥಿತಿಗೆ ಸರಿಯಾದ ಕಾರಣ ಕೊಡುವವಳು ಸೋಮಣ್ಣನ ಬಲತ್ಕಾರಕ್ಕೊಳಗಾಗಲು ಪ್ರತಿಭಟಿಸುವ ಶಾರಿ. ಅವಳ ಪ್ರಕಾರ ನಾಯೀಮಗ 'ಹೊಟ್ಟೆ ಸಲುವಾಗಿ ನಾಯಿ ಆಗ್ಯಾನ.' ಆಕೆ ಸಾವ್ಕಾರ್ ಸೋಮಣ್ಣನ ಮುಖಕ್ಕೆ ರಾಚಿದಂತೆ ಹೇಳುತ್ತಾಳೆ : "ನೀವೇನೊ ದೊಡ್ಡ ಶ್ರೀಮಂತರು. ಜಗತ್ತಿನಾಗ ಇದ್ದವರನ್ನೆಲ್ಲ ನಿಮ್ಮ ನೊಗಕ್ಕೆ ಹೂಡಬಲ್ಲಿರಿ. ಆದರ ನಾ ನಿಮ್ಮ ದನಾ ಆಗಾಕ ತಯಾರಿಲ್ಲ."- ಇಲ್ಲಿಯೇ ಈ ನಾಟಕ ಇನ್ನೊಂದು ಆಯಾಮ ಪಡೆಯುವುದು.

ಶೋಷಕ ಸಂಸ್ಕೃತಿಯ ಪ್ರಧಾನ ಲಕ್ಷಣವೆಂದರೆ ಕೆಲವರಿಗೆ ಪರಮ ಅಧಿಕಾರವನ್ನು ಕೊಟ್ಟರೆ ಅನೇಕರಿಗೆ ಪರಮ ವಿಧೇಯತೆಯನ್ನು ಉಪದೇಶಿಸುತ್ತದೆ. ಊಳಿಗಮಾನ್ಯ ಪದ್ಧತಿಯಲ್ಲಿ ಇದು ಮೌಲ್ಯವ್ಯವಸ್ಥೆಯಾಗಿ ರೂಪುಗೊಂಡಿದೆ. ನಾನು ದುಡಿಯುವ ಜನರಿಗೆ ಸಕಲ ಸವಲತ್ತುಗಳಿಂದ ವಂಚಿಸುವ ವಿಚಾರಧಾರೆಯನ್ನು ರೂಪಿಸಿದ್ದನ್ನು ಮತ್ತು ಯಾಜ್ಞವಲ್ಕ್ಯ ಮಹಿಳೆಯನ್ನು ಮಿಥ್ಯೆಯೆಂದು ಕರೆದದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಇವರಿಬ್ಬರೂ ಹೆಣ್ಣಿನ ಹಕ್ಕುಗಳ ಬಗ್ಗೆ ಮಾತಾಡಲಿಲ್ಲ. ಶೋಷಕ ಸಂಸ್ಕೃತಿಯಲ್ಲಿ ಶೂದ್ರರು (ದುಡಿಯುವ ಜನ) ಮತ್ತು ಹೆಣ್ಣು ಸಮಾನರೆಂದು ಪರಿಗಣಿಸಲ್ಪಟ್ಟಿದ್ದಾರೆ. ಈ ನಾಟಕದಲ್ಲಿ ದುಡಿಯುವ ಜನರ ಪ್ರತಿನಿಧಿಯಾಗುವ 'ನಾಯೀಮಗ' ಮತ್ತು ವಂಚನೆಯ ವೃತ್ತದಲ್ಲಿ ಸಿಕ್ಕಿ ಸಿಡಿಯುವ ಹೆಣ್ಣಾಗಿ 'ಶಾರಿ' ಬರುವುದರಿಂದ ನಾಟಕಕ್ಕೆ ಸಾಂಪ್ರದಾಯಿಕ ಸಂಸ್ಕೃತಿಯ ಸೂಕ್ಷ್ಮಗಳ ಅರಿವು ಒದಗಿ ಬಂದಿದೆ. ಇವರಿಬ್ಬರೂ ಪ್ರತಿಭಟಿಸುವ ಹಂತ ತಲುಪುವುದರಿಂದ ಸಾಂಪ್ರದಾಯಿಕ ಸಂಸ್ಕೃತಿಯನ್ನು ಸೀಳಿ ಹೊರಡುವ ಶಕ್ತಿಗಳಾಗಿ ನಮಗೆ ಮುಖ್ಯರಾಗುತ್ತಾರೆ. ಈ ಮೂಲಕ ನಾಟಕವೂ ಮುಖ್ಯವಾಗುತ್ತದೆ. ಶಾರಿಯನ್ನು ಹರಾಜು ಹಾಕುವ 'ಮೇಳ'ದ ಮಾತುಗಳು ಸಂಸ್ಕೃತಿಯ ಕ್ರೌರ್ಯಕ್ಕೆ ಉತ್ತಮ ಉದಾಹರಣೆ. ಹೀಗೆ ನಾಟಕ ಶೋಷಣೆಯ ಸುರಳಿಬಿಚ್ಚುತ್ತ ಸಾಗಿ ನಾಯೀಮಗ ಮತ್ತು ಶಾರಿಯ ಸ್ಫೋಟದಲ್ಲಿ ಸಾರ್ಥಕತೆ ಪಡೆಯುತ್ತದೆ. ವಿಚಿತ್ರವೆಂದರೆ 'ಕಥೆಗಾರ' ತನ್ನ ಪ್ರೀತಿಪ್ರೇಮದ ಮಹಿಮೆಗೆ ಶೋಷಕ ಸಂಸ್ಕೃತಿಯ ಸೂಕ್ಷ್ಮಗಳು ಕೇವಲ ಸಾಧನವೆಂಬಂತೆ ಬಳಸಿಕೊಳ್ಳಲು ಇಚ್ಛಿಸಿದರೂ ನಾಟಕದಲ್ಲಿ ಶೋಷಕ ಸಂಸ್ಕೃತಿಯ ಸೂಕ್ಷ್ಮಗಳ ಮಂಡನೆಗೆ ಪ್ರೀತಿಪ್ರೇಮವೇ ಸಾಧನ ಮಾತ್ರವಾಗುತ್ತದೆ. ನಾಟಕದೊಳಗಿನ ಕಥೆಗಾರನ ಆಶಯವನ್ನು ಮೀರಿ ನಾಟಕ ಬೆಳೆಯುವುದರಿಂದಲೇ ಇದಕ್ಕೆ ಮಹತ್ವ ಬಂದಿದೆ.

ಗೆಳೆಯ ಕಂಬಾರರ ಭಾಷೆಯ ತುರ್ತಿನ ಬಗ್ಗೆ ಮತ್ತೆ ಹೇಳಬೇಕಾಗಿಲ್ಲ. ಕೆಲವು ಕಡೆ ಬಳಸುವ ಭಾಷೆ ಮತ್ತು ಸಂವಾದ ನಾನು ಮೇಲೆ ವಿವರಿಸಿದ ಸೂಕ್ಷ್ಮಗಳಿಗೆ ಪೂರಕವಾಗಿ ಬರುವುದನ್ನು ಕಾಣಬಹುದು :

'ಸಾವ್ಕಾರ ಸೋಮಣ್ಣನವರು ಬಡವರ ಬೆಳಕಿನಾಗ ತಮ್ಮ ಅರಮನೀಗಿ ಹೋದರು'

'ಸಾವ್ಕಾರ್ರಿಗಿ ವಯಸ್ಸಾಗೋದಂದರೇನ್ರಿ!'

'ಏನ್ರೀ ಸಾವ್ಕಾರ ಹೀಗಂತೀರಿ? ಮನೀ ತುಂಬ ರೊಕ್ಕೇನು! ಊರ ತುಂಬ ಆಸ್ತಿಯೇನು! ಬೇಕಂದರ ಸರ್ಕಾರ ಕೊಳ್ಳತೀರಿ, ಮಾರತೀರಿ!'

'ಸೊಕ್ಕಿನಿಂದ ನಿಮ್ಮ ಕಣ್ಣು ನೆತ್ತ್ಯಾಗ ಹೋಗ್ಯಾವ ಸಾವ್ಕಾರರಽ. ಅದಕ್ಕ ಽ ನಿಮಗ ಮನಿಶೇರೆಲ್ಲಾ ನಾಯಿಹಾಂಗ ಕಾಣತಾರ.'

'ಬಡವರಿಗೆ ಉಳಿಗಾಲವಿಲ್ಲಾ ತನಗ ಭಯ ಇಲ್ಲಾಂತ ಹುಟ್ಟುವಾಗಲೇ ವರ ಪಡೆದಾತ. ಮರೆತವರನ್ನ ಮುರೀತಿದ್ದ; ನಂಬಿದವರಿಗಿ ತುಂಬಿ ತುಳುಕತಿದ್ದ.'

'ಸುಡುವ ಬೆಂಕಿಯ ಕುಡಿದು ಹೂವಿನ ನಗಿಯ ನಕ್ಕಾಕಿ.'

'ಎತ್ತಿನ ಕಣ್ಣು ನೆತ್ತ್ಯಾಗೇರಿ
ಕಾಣಲಿಲ್ಲ ಶಿವನ ದಾರಿ
ಎಳಿಸಸಿ ಕಾಲಾಗ್ಹಾಕಿ ತುಳದಾವಲ್ಲಾ |
ಹಾಡೋ ಹಕ್ಕಿ ಆದಾವಲ್ಲಾ ಕಂಗಾಲಾ| ಎಲಾ
ಏನ ಬಂತೊ ಎಂಥಾ ಕಾಲ ಹುಯ್ಯಲಾ | ಹಾ
ಬಿಸಿಗಾಳಿ ಮೂಡ್ಯಾವೋ ಶಿವನೆ
ಬಡವರ ಉಸಿರೊಳಗೊಽ'
-ಇತ್ಯಾದಿ.

ಇನ್ನು ಸಾವ್ಕಾರ ಸೋಮಣ್ಣನ 'ಸಾಹಸ'ವನ್ನಾಗಲಿ, ಶಾರಿಯ ಸೌಂದರ್ಯವನ್ನಾಗಲಿ ಜೀವ ತುಂಬಿ ಚಿತ್ರಿಸುವದರಲ್ಲಿ ಕಂಬಾರರು ಯಶಸ್ವೀ ಭಾಷೆ ಬಳಸುತ್ತಾರೆ.

ನಾಟಕದಲ್ಲಿ ನನಗೆ ಕಂಡ ಒಂದು ದೋಷವೆಂದರೆ ಕೆಲವು ಕಡೆ ಅತಿ ನಾಟಕೀಯತೆಯಲ್ಲಿ ಸನ್ನಿವೇಶಕ್ಕೆ ಲಘುತ್ವ

ಒದಗುವುದು. ಮೊದಲು ಬರುವ ಬಿಕ್ಷುಕನ ಸನ್ನವೇಶ ನಿರ್ದಿಷ್ಟ ವಿಷಯದ ಸ್ಪಷ್ಟನೆಗಾಗಿ ಬಂದಿರುವುದು ಸರಿಯಾದರೂ ಅತಿನಾಟಕೀಯವಾಗುವುದರಿಂದಲೊ ಏನೊ ವಸ್ತುವಿನ ಗಾಂಭೀರ್ಯಕ್ಕೆ ಒಗ್ಗುವುದಿಲ್ಲ. ದಾಸ ಮತ್ತು ಸಾವಂತ್ರಿಯ ಸಂವಾದಗಳ ಹಾಸ್ಯವೂ ಅಷ್ಟೆ. ಶಾರಿಯ ನಿಲುವನ್ನು ಮೆಚ್ಚಿಕೊಳ್ಳುವ ಮೇಳವೇ ಆಕೆಯ ಹರಾಜಿನ ಸಂದರ್ಭದಲ್ಲಿ 'ರಿಪೇರಿ ಚಾರ್ಜಿಲ್ಲ' ಎಂದು ಮುಂತಾಗಿ ಮಾತಾಡುವುದೂ ಅಷ್ಟೆ. ಇನ್ನು ಕಡೆಯಲ್ಲಿ ಸೋಮಣ್ಣನ ಹೆಂಡತಿ ಲಕ್ಷ್ಮಿ ಆಳು ಮಾರುತಿಯ ಜೊತೆ ಓಡಿಹೋದದ್ದು ಅನಿರೀಕ್ಷಿತ ಚಮತ್ಕಾರವೆನ್ನಿಸಿತು. ಇಂಥ ಬೆರಳೆಣಿಕೆಯ ಸಣ್ಣಪುಟ್ಟ ಅಂಶಗಳನ್ನು ಬಿಟ್ಟರೆ ಈ ನಾಟಕ ನಮ್ಮ ಸಂದರ್ಭದ ಗಟ್ಟಿ ನೆಲೆ ಪಡೆದ ಕೃತಿಯೆಂದು ಧಾರಳವಾಗಿ ಹೇಳಬಹುದು.

ಚಂದ್ರಶೇಖರ ಕಂಬಾರರು, ಬದುಕಿನ ಕಟುವಾಸ್ತವದ ವಿಶ್ಲೇಷಣೆಯ ಹಾದಿಯಲ್ಲಿ, ಚರಿತ್ರೆಯ ಗತಿಯಲ್ಲಿ ತನ್ನನ್ನು ಸ್ಥಾಪಿಸಿಕೊಳ್ಳುವ ಇಂಥ ನಾಟಕಗಳನ್ನು ಮತ್ತಷ್ಟು ಕೊಡಲೆಂಬುದು ನನ್ನ ಆಸೆ ಮತ್ತು ನಿರೀಕ್ಷೆ.

**- ಬರಗೂರು ರಾಮಚಂದ್ರಪ್ಪ**

# ನಾಯೀಕತೆ : ವಂದನೆಗಳು (ಮೊದಲ ಮುದ್ರಣಕ್ಕೆ ಬರೆದುದು)

ಬಹಳ ದಿನಗಳ ಹಿಂದೆ, ನಡೆದ ಒಂದು ಘಟನೆಯನ್ನು ನನ್ನ ಹೆಂಡತಿ ಸೌ|| ಸತ್ಯಭಾಮಾ ಹೇಳಿದಳು. ಹಿಂದಿನಿಂದ ಅದನ್ನು ನಾಟಕವಾಗಿಸಬೇಕೆಂದು ಹೊಂಚುತ್ತಲೇ ಇದ್ದೆ. ಅನೇಕ ಬಾರಿ ಅದನ್ನು ಮಿತ್ರರಾದ ಲಂಕೇಶ್ ಜೊತೆಗೆ ಚರ್ಚಿಸಿದ್ದೆ. ಈ ಮಧ್ಯೆ ಬಿಡುವಾಗಲಿಲ್ಲ. ಮರೆತೂಬಿಟ್ಟೆ. ಆಮೇಲೆ, ಎಂದೋ ಬರೆಯಬೇಕಿದ್ದ ಈ ನಾಟಕವನ್ನು ಕೊನೆಗೂ ಬರೆಯುವಂತೆ ಮಾಡಿದವರು ಶ್ರೀಮತಿ ಪ್ರೇಮಾ ಕಾರಂತ. ಅವರು ಇದನ್ನು ಗುಲ್ಬರ್ಗಾದಲ್ಲೂ, ಬೆಂಗಳೂರಿನಲ್ಲೂ ಆಡಿಸಿದರು. ಬಿ.ವಿ.ಕಾರಂತರು ಓದಿ ಕೆಲವು ಅಮೂಲ್ಯ ಸಲಹೆಗಳನ್ನು ಕೊಟ್ಟರು. ಇದೆಲ್ಲ ಒಟ್ಟಾಗಿ 'ನಾಯೀಕಥೆ'ಯಾಗಿ ಇದೀಗ ಹೊರಬರುತ್ತಿದೆ. ಈ ಎಲ್ಲ ನನ್ನ ಆತ್ಮೀಯರಿಗೆ ಪ್ರಥಮದಲ್ಲಿ ವಂದನೆಗಳನ್ನು ಸಲ್ಲಿಸುತ್ತೇನೆ.

ನನ್ನ ಗೆಳೆಯರಾದ ಬರಗೂರು ರಾಮಚಂದ್ರಪ್ಪನವರು ಇದಕ್ಕೊಂದು ಒಪ್ಪವಾದ ಮುನ್ನುಡಿ ಬರೆದುಕೊಟ್ಟಿದ್ದರೆ. ಅವರಿಗೂ, ಮುಖಚಿತ್ರ ಬರೆದು ಕೊಟ್ಟ ಚಂದ್ರಕಾಂತ ಕುಸನೂರ ಅವರಿಗೂ, 'ಸಂಗೀತಾ' ಎಂಬ ಹೆಸರಿನಲ್ಲಿ ಈ ನಾಟಕವನ್ನು ಚಲನಚಿತ್ರವಾಗಿಸಿದ ವ್ಹೀಲ್ ಪ್ರೊಡಕ್ಷನ್ಸ್ ಸ್ನೇಹಿತರಿಗೂ, ಡಾ|| ಹಾ.ಮಾ.ನಾಯಕರಿಗೂ ಹಾಗೂ ಪ್ರಕಾಶಪಡಿಸಿದ ಕೆ.ವಿ. ಸುಬ್ಬಣ್ಣನವರಿಗೂ ವಂದನೆಗಳು.

**- ಚಂದ್ರಶೇಖರ ಕಂಬಾರ**

ಮಾರ್ಚ್ ೧೯೮೧

<u>ಪಾತ್ರಗಳು</u>

ಕಥೆಗಾರ

ಮೇಳ : ಹಿಮ್ಮೇಳ ೧, ೨

ಬುದ್ಧಿಜೀವಿ

ಭಿಕ್ಷುಕ ಬಂಟ

ಸೋಮಣ್ಣ

ತಾಯಿ ಸಾವಂತ್ರಿ

ನಾಯೀಮಗ

ಮಾರುತಿ

ರಾಮಣ್ಣ

ಲಕ್ಷ್ಮಿ

ಆಳುಮಗ

ದಾಸ

ಶಾರಿ

ನಾಗ

ಗಣ್ಣಪದ

ಸೊಲ್ಲೀನ ಮೊದಲೀಗೆ ಸಾವಿರ ಶರಣೆಂಬೆ
ಸಾವಳಗಿ ಶಿವನಿಂಗಗೆ |

ಶ್ರೇಷ್ಠ ದೇವತೆಗಳಿಗೆ ಚಿತ್ತದಲಿ ನಮಿಸುವೆ
ಭೂಸನೂರಮಠದಯ್ಯಗೆ ||

ಸಾರಾಂಶ ವಚನಕ್ಕೆ ಸಹಕಾರಿಯಗೆಂಬೆ
ತಾಯವ್ವ ಸರಸೋತಿಗೆ |
ಸತ್ಯದ ಮಳೆಯಾಗಿ ಸುರಿಯಲಿ ನಮ ಹಾಡು
ಮತಿವಂತರೆದೆಯೊಳಗೆ ||

(ಮೇಳದವರು ಗಣ್ಣಪದ ಹಾಡಿದ ಮೇಲೆ ಕಥೆಗಾರ ಮುಂದೆ ಬಂದು ಕಥೆ ಹೇಳತೊಡಗುತ್ತಾನೆ.)

ಕಥೆಗಾರ : ಆದಿಯಲ್ಲಿ ಶಿವಾ, ಶಿವಲಿಂಗಾ, ಶಿವಲಿಂಗೇಶ್ವರಾ ಅಂದು, ಸಾವಿರದೊಂದು ನಮಸ್ಕಾರವ ಮಾಡಿ, ಶರಣು ಬಂದೇವು ಕರುಣದಿಂದ ಕಾಪಾಡು ತಂದೇ ಅಂದೇವ್ರಿ,-

ಮೇಳ : ಶರಣ್ರೇಯೆಪ, ಶರಣು.

ಕಥೆಗಾರ : ಧಾರವಾಡದಾಗ ಕುಂತು ಲೋಕಕ್ಕೆಲ್ಲಾ ಸಾಕಂಬೋ ತನಕ ಬೆಳಕನ್ನ ಕೊಡೋವಂಥಾ ಭೂಸನೂರ ಮಠದ ಸಂಗಯ್ಯಸ್ವಾಮಿಗೆ ಶರಣಂದೇವ್ರಿ,-

ಮೇಳ : ಶರಣ್ರೇಯೆಪ ಶರಣು.

ಕಥೆಗಾರ : ಆದಿ ಮೊದಲಾದ, ತುದಿ ಕಡೆಯದ ಮೂಲೆ ಮೂಲೆಯ ದೇವರಿಗೆಲ್ಲಾ ಶರಣು. ಕುಂತವರಿಗೆ ಶರಣು, ನಿಂತವರಿಗೆ ಶರಣು. ಬಡವರಿಗೆ ಸಣ್ಣ ಶರಣು, ಶ್ರೀಮಂತರಿಗೆ ದೊಡ್ಡ ಶರಣು ಮಾಡಿ, ಮುಂದಿನ ಕತಿ ಹೇಳತೇವ್ರಿ,- ನೋಡ್ರಿ ಶಿವಾ, ನಾವು ನಿಮಗೆ ಈ ದಿನ ಒಂದು ಪ್ರೇಮದ ಕತೀ ಹೇಳತೇವ್ರಿ. ಪ್ರೇಮ, ಪ್ರೀತಿ ಅಂದರ ಜಗತ್ತಿನಾಗ ಹೆಚ್ಚಿಂದೈತಿ. ಅದು ಎಷ್ಟ ಹೆಚ್ಚಿಂದೈತಿ ಅಂದರ ಇಡೀ ಪ್ರಪಂಚದಾಗ ಅದ ಽ ತುಂಬೇತಿ. ಪಡುವಣ ಸೀಮ್ಯಾಗ ಅದಕ್ಕ ಲವ್ ಅಂತಾರ. ಉತ್ತರ ದೇಶದಾಗ ಅದಕ್ಕ ಪ್ಯಾರ್ ಮೊಹಬ್ಬತ್ ಅಂತಾರ್ರಿ. ಅಚ್ಚ ಕನ್ನಡದಾಗ ಒಲವು ಅಂತಾರ್ರಿ. ಹಿಮಾಲಯ ದೊಡ್ಡದಂತಾರ. ಅದರ ಪ್ರೇಮ ಅದಕ್ಕಿಂತ ದೊಡ್ಡದೈತಿ. ಗಂಗಾನದಿ ಉದ್ದ ಅಂತಾರ, ಅದರ ಪ್ರೀತಿ ಅದಕ್ಕಿಂತ ದೊಡ್ಡದೈತಿ. ಗಂಗಾನದಿ ಉದ್ದ ಅಂತಾರ, ಅದರ ಪ್ರೀತಿ ಅದಕ್ಕಿಂತ ಉದ್ದ ಐತಿ. ಇದರಾಗೇನ ಸಂಶೆ ಐತಿ? ಯಾಕಯ್ಯ ಕಂದಾ ಹಾಂಗ ನಿಂತಿ?

ಹಿಮ್ಮೇಳ : ಏನ ಗುರುವೆ, ಎಂಥಾ ಕತಿ ಹೇಳತೇನಂದಿರಿ! ಅಂಥಾ ಸವಕಳಿ ಕತಿ ಯಾರು ಕೇಳತಾರ? ಇಂಥಾ ಸಭಿಕರ ಮುಂದ ಅಗ್ಗದೀ ಹೊಸಾ ಕತಿ ಹೇಳಬೇಕ್ರಪ.

ಕಥೆಗಾರ : ಹೊಸಾ ಕತಿ ಅಂದರ ಎಂಥದಪ?

ಹಿಮ್ಮೇಳ : ಹೊಸಾ ಕತಿ ಅಂದರ,-ಹಣ, ಕಾಸು, ಸಸ್ಪನ್ಸು, ಡಿಶ್ಕುಂ ಡಿಶ್ಕುಂ-ಇಂಥಾ ಕತಿ ಹೇಳಿದರ ಕೂತವರೆಲ್ಲಾ ಮೈತುಂಬ ಕಣ್ಣ ಕಿವಿ ಆಗಿ, ಕೂದಲಾ ನೆಟ್ಟಗ ಮಾಡಿಕೊಂಡ ಕೇಳತಾರ. ಅದಬಿಟ್ಟು ಪ್ರೇಮಾ ಪ್ರೀತಿ ಅಂದರ ಅದನ್ನೆಲ್ಲಾ ಸಿನಿಮಾದಾಗ ನೋಡಿ ನೋಡಿ ಬ್ಯಾಸತ್ತಿರತಾರ. ಹೋಗಲಿ ಜೀವಾ ಗಟ್ಟಿ ಮಾಡಿ ಕೇಳೋಣಂದರ ಇಂದ ಶಿವರಾತ್ರೀನೂ ಅಲ್ಲ.

ಕಥೆಗಾರ : ಹುಚ್ಚಾ, ಹಗರಲ್ಲವೋ ಪ್ರೀತಿ ಪ್ರೇಮಾ! ಏನ ಹೇಳಲಿ ಅದರ ಮಹಿಮಾ!

ಭೂಮಿ ತಿರಗತೈತಿ ಯಾತಕೆ
ಆ ರವಿಯ ಸುತ್ತ

ಪ್ರೀತಿ ಪ್ರೇಮದಿಂದ ಅಲ್ಲವೆ? ||

ಸುರಿಯತಾವು ಮಳೆಗಳ್ಯಾತಕೆ
ಈ ನೆಲದ ಮ್ಯಾಲೆ
ಪ್ರೀತಿ ಪ್ರೇಮದಿಂದ ಅಲ್ಲವೆ?||

ಹುಟ್ಟತಾವು ಹಸುರು ಯಾತಕೆ
ಹೂ ನಗುವುದ್ಯಾಕೆ
ಪ್ರೀತಿ ಪ್ರೇಮದಿಂದ ಅಲ್ಲವೆ? ||

ಹಿಮ್ಮೇಳ : ನೋಡ ಗುರುವೆ, ಮಳಿ ಎದುರಿಂದಾಗತೈತಿ, ಭೂಮಿ ಯಾಕ ತಿರಗತೈತಿ, ಇವಕ್ಕೆಲ್ಲಾ ಬ್ಯಾರೇ ಬ್ಯಾರೇ ಸೈಂಟಿಫಿಕ್ ಆಧಾರ ಅದಾವ. ಅವನ್ನ ಬಿಟ್ಟು ಪ್ರೇಮ, ಪ್ರೀತಿನS ಆಧಾರಂದರ ನಂಬೂದ ಹೆಂಗ? ಬ್ಯಾರೇ ಇನ್ನೇನಾದರೂ ಇದ್ದರ ಹೇಳ್ರಿ, ಇದನ್ನ ನಾ ಒಪ್ಪೋದಿಲ್ಲ.

ಕಥೆಗಾರ : ಕಂದಾ, ಪ್ರೇಮದಿಂದ ಕುರೂಪಿ ಆಗತಾನ. ಇರಿವಿ ಆನಿ ಆಗತದ ಮಂಗ್ಯಾ ಮನಿಶ್ಯಾ ಆಗತಾನ! ಮನಿಶ್ಯಾ ದೇವರಾಗತನ! ಸಣ್ಣಾವ ದೊಡ್ಡಾವಾಗತಾನ!

ಹಿಮ್ಮೇಳ : ಗುರುವೇ, ಮಂಗ್ಯಾನಂಥಾವ ಮನಿಶಾ ಆಗೋದು ದುಡ್ಡಿನಿಂದ! ನಾನೂ ಹಾಡಲೇನು?-

ದುಡ್ಡಿದ್ದವ ದೊಡ್ಡವಲ್ಲವೆ?
ಹೇಳೆನ್ನ ಗುರುವೆ
ದುಡ್ಡಿದ್ದವ ದೊಡ್ಡವಲ್ಲವೆ? ||

ಕಾಸಿದ್ದರ ಕೈಲಸಲ್ಲವೇ
ಹೇಳೆನ್ನ ಗುರುವೆ
ಕಾಸಿದ್ದರ ಕೈಲಾಸವಲ್ಲವೆ? ||

ಕಥೆಗಾರ : ಕಂದಾ, ಹಂಗೆಲ್ಲಾ ವಾದ ಮಾಡಬಾರದು. ಪ್ರೇಮ ಬಾಳ ದೊಡ್ಡದು.

ಹಿಮ್ಮೇಳ : ನೀ ಏನS ಹೇಳ ಗುರುವೆ, ದುಡ್ಡೇ ದೊಡ್ಡದು.

ಕಥೆಗಾರ : ಪ್ರೇಮ ದೊಡ್ಡದಂತೀನಿ.

ಹಿಮ್ಮೇಳ : ದುಡ್ಡು ದೊಡ್ಡದಂತೀನಿ.

ಕಥೆಗಾರ : ಪ್ರೇಮ.

ಹಿಮ್ಮೇಳ : ದುಡ್ಡು.

ಕಥೆಗಾರ : ಆಯ್ತುಪ, ನನ್ನೊಳಗಿಂದ ಪ್ರೇಮ ಮಾತಾಡ್ತಾ ಇದೆ. ನಿನ್ನೊಳಗಿಂದ ದುಡ್ಡು ಮಾತಾಡ್ತಾ ಇದೆ. ಈಗ ನಮ್ಮ ಜಗಳ ಬಗಿಹರಿಸೋರ್ಯಾರು ?

ಹಿಮ್ಮೇಳ : ಇಲ್ಲೊಬ್ಬ ಬುದ್ಧಿಜೀವಿ ಇದ್ದಾನ. ಕರೀಲೇನ್ರಿ ?

ಕಥೆಗಾರ : ಕರತಾರಪ.
(ಹಿಮ್ಮೇಳ ಹೋಗಿ ಮೇಳದಲ್ಲಿ ನಿಂತಿದ್ದ ಒಬ್ಬನನ್ನು ಕರೆತರುವನು. ಆತ ಕೂದಲು ಚೆದುರಿ, ಚಷ್ಮಾ ಹಾಕಿಕೊಂಡು ಸಿಗರೇಟು ಸೇದುತ್ತಿದ್ದಾನೆ. ಬಗಲಲ್ಲಿ ಒಂದು ಹಡಪ ತೂಗು ಹಾಕಿಕೊಂಡಿದ್ದಾನೆ.)

ಹಿಮ್ಮೇಳ : ಅಪಾ ಬುದ್ಧಿಜೀವಿ, ಗುರುಶಿಷ್ಯರಿಗೆ ಜಗಳ ಬಂದೈತಿ. ಅವರು ಪ್ರೇಮ ದೊಡ್ಡದು ಅಂತಾರ. ನಾ ದುಡ್ಡು ದೊಡ್ಡದು ಅಂತೀನಿ. ನೀನಾದರೂ ಹೇಳೊ ನಮ್ಮಪ್ಪ, ಯಾವುದು ದೊಡ್ಡದು ?

ಬುದ್ಧಿಜೀವಿ : ಅಯ್ಯಾ, ಕೆಲವರು ಪ್ರೇಮ ದೊಡ್ಡದಂತಾರ, ಕೆಲವರು ದುಡ್ಡು ದೊಡ್ಡದಂತಾರ. ನನ್ನ ಅಭಿಪ್ರಾಯದಲ್ಲಿ ಇಬ್ಬರೂ ಸರಿ.

ಹಿಮ್ಮೇಳ : ಹೆಂಗಂದಿರಿ ?

ಬುದ್ಧಿಜೀವಿ : ದುಡ್ಡು ಇದ್ದರೆ ದುಡ್ಡೇ ದೊಡ್ಡದು. ಅದಿಲ್ಲಾ ಪ್ರೇಮ ದೊಡ್ಡದು. ನೀವೇನಂತೀರಿ ?

ಹಿಮ್ಮೇಳ : ತಾವು ಹೋಗಬಹುದು ಅಂತೀನಿ.
(ಬುದ್ಧಿಜೀವಿ ಹೋಗಿ ಮೇಳದಲ್ಲಿ ಸೇರಿಕೊಳ್ಳುವನು.)

ಗುರುವೆ, ಅವ ಅಡ್ಡಗ್ವಾಡೀ ಮ್ಯಾಲ ದೀಪಾ ಹಚ್ಚಿದ. ಈಗ ಹೆಂಗ ಮಾಡೋಣು ? ಅಕಾ ಅಲ್ಲೊಬ್ಬ ಸಜ್ಜನ ನಿಂತಾನ ತಡೀರಿ. ಏ s ಬಾರೋ ಇಲ್ಲಿ.

(ಮೇಳದಲ್ಲಿ ಒಬ್ಬ ದಟ್ಟ ದರಿದ್ರ ಭಿಕ್ಷುಕ. ಚಿಂದಿ ಬಟ್ಟೆಯಿಟ್ಟು ಹಸಿದು ಬೆನ್ನು ಬಾಗಿ ಕೋಲೂರಿ ನಿಂತಿದ್ದಾನೆ. ಹಿಮ್ಮೇಳ ಕರೆದೊಡನೆ ನಮ್ರನಾಗಿ ಬರುತ್ತಾನೆ.)

ಗುರುವೆ, ಬಂದ ನಿಂತಾನ. ಅದೇನ ಕೇಳ್ತೀರೋ ಕೇಳ್ರಿ.

ಕಥೆಗಾರ : ಅಪಾ, ಪ್ರೇಮ ದೊಡ್ಡದಲ್ಲೇನೊ ?

ಭಿಕ್ಷುಕ : ಹಂಗಂದರೇನ್ರಿ ?

ಕಥೆಗಾರ : ಪ್ರೀತಿ ದೊಡ್ಡದಲ್ಲೇನೊ ?

ಭಿಕ್ಷುಕ : ಹಂಗಂದರೇನ್ರಿ ?

ಕಥೆಗಾರ : ಛೇ ?

ಹಿಮ್ಮೇಳ : ಇನ್ನ ನಾ ಕೇಳಲೇನ್ರಿ ?

(ಕಿಸೆಯಿಂದ ಐದು ರೂಪಾಯಿಯ ನೋಟು ತೆಗೆದು ತೋರಿಸುತ್ತ)

ಅಯ್ಯಾ, ಈ ನೋಟ ದೊಡ್ಡದೊ ಪ್ರೇಮ ಪ್ರೀತಿ ದೊಡ್ಡದೊ ?

ಭಿಕ್ಷುಕ : ನೋಟ ದೊಡ್ಡದರಿ.

(ಎನ್ನುತ್ತ ಆಸೆಬುರುಕತನದಿಂದ ಹಿಮ್ಮೇಳನ ಹತ್ತಿರ ಹೋಗುವನು. ಹಿಮ್ಮೇಳದವನ ನೋಟಿನ ಕೈ ಎಲ್ಲೆಲ್ಲಿ ಆಡುತ್ತದೋ ಅಲ್ಲಲ್ಲಿ ಹೋಗುವನು. ಕೊನೆಗೆ ಹಿಮ್ಮೇಳ ಅವನಿಗೆ ಆ ನೋಟು ಕೊಡುವನು. ನೋಟು ಸಿಕ್ಕೊಡನೆ ಆ ಭಿಕ್ಷುಕ ಮೈ ತುಂಬಿದಂತೆ ನಡಗುತ್ತ ಸೆಟೆದು ಹೆಮ್ಮೆ ಸೊಕ್ಕುಗಳಿಂದ ಬೀಗಿ ನಿಲ್ಲುವನು.)

ಭಿಕ್ಷುಕ : ಯಾವನೋ ಅವನು ? ಪ್ರೇಮ ದೊಡ್ಡದು ಅಂದವನು ?

ಹಿಮ್ಮೇಳ : ಇವರೆ, ಇವರೆ.
(ಎಂದು ಕಥೆಗಾರನನ್ನು ತೋರಿಸುವನು. ಭಿಕ್ಷುಕ ಕಥೆಗಾರನನ್ನೇ ದುರುಗಟ್ಟಿ ನೋಡುತ್ತ)

ಭಿಕ್ಷುಕ : ಬೋಳೀಮಗನೆ....

ಹಿಮ್ಮೇಳ : ಎಲೀ ಇವನ!

ಭಿಕ್ಷುಕ : (ಹಿಮ್ಮೇಳದವನಿಗೆ) ಅಯೋಗ್ಯ ನನ ಮಗನೆ.

ಮೇಳ : (ಆಶ್ಚರ್ಯದಿಂದ) ಛೇ ಛೇ!

ಭಿಕ್ಷುಕ : (ಮೇಳಕ್ಕೆ) ನಾಯೀಮಕ್ಕಳ್ರಾ...
(ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಅವನು ಹಾಗೇ ಒದರುತ್ತ ನಿಂತಾಗ ಹಿಮ್ಮೇಳ ಹಿಂದಿನಿಂದ ಹೋಗಿ ಅವನನ್ನು ತೆಕ್ಕೆ ಹಾಯುತ್ತಾನೆ. ಬೇರೆ ಮೇಳದವರು ಅವನ ಬಳಿಯಿದ್ದ ನೋಟು ಕಸಿಯುತ್ತಾರೆ. ಭಿಕ್ಷುಕ ಈಗ ಮತ್ತೆ ಮೊದಲಿನಂತೆ ವಿನಯಶಾಲಿಯಾಗುತ್ತಾನೆ.)

ಭಿಕ್ಷುಕ : ಹೌಂದರಿ. ಪ್ರೇಮವೇ ದೊಡ್ಡದು. ಪ್ರೀತೀನೇ ದೊಡ್ಡದು.
(ಎನ್ನುತ್ತ ಹೋಗಿ ಮೇಳದಲ್ಲಿ ಸೇರಿಕೊಳ್ಳುತ್ತಾನೆ.)

ಹಿಮ್ಮೇಳ : ನೋಡಿದ್ಯಾ ಗುರುವೇ ?

ಕಥೆಗಾರ : ಆಯ್ತಪ. ದುಡ್ಡೂ ದೊಡ್ಡದಿರಬೌದು. ಆದ್ದರಿಂದ ಈ ಹೊತ್ತಿನ ದಿವಸ, ನಾವು ಪ್ರೇಮ ಮತ್ತು ದುಡ್ಡು ಎರಡೂ ಇರುವಂಥಾ ಕತೀ ಹೇಳೋಣ. ಆದೀತೋ ?

ಹಿಮ್ಮೇಳ : ಹಿಂಗ ಬರ್ರಿ ಹಾದಿಗೆ. ಇನ್ನ ಅದೇನ ಹೇಳ್ತಿರೋ ಹೇಳ್ರಿ,-

ಮೇಳ : ಶರಣು ಗುರುವೆ ಶರಣು ಬಂದೆವೋ
ನಿನ್ನಡಿಗೆ ಬಾಗಿ
ಹಾಡಿಗೊದಗು ಶಿವನೆ ಎಂದೆವೋ||

ಕರಗಳೆತ್ತಿ ಕೈಯ ಮುಗಿದೆವೋ
ಸಂಗಯ್ಯ ಸ್ವಾಮಿ
ಬರದ ಹಾಡಿಗೊದಗು ಎಂದೆವೋ||

ಕಥೆಗಾರ : ಕತಿ ಹೇಳತೇವು ಕೇಳ್ರಿ ಶಿವಾ,-

ನಿಮ್ಮ ಎದುರಿಗೆ ಒಂದು ಪಟ್ಟಣ ಕಾಣತೈತಿ.

ಕಂದಾ ಅದ್ಯಾವ ಪಟ್ಟಣ?

ಹಿಮ್ಮೇಳ : ಬೆಂಕಿ ಪಟ್ಣ.

ಕಥೆಗಾರ : ಕಂದಾ ಹಂಗೆಲ್ಲಾ ನಿಂದಕದ ಮತಾಡಬಾರದು. ಅದು ಶಿವಾಪುರ. ಶಿವಾ ಪಟ್ಟಣದಲ್ಲಿ ಕರ್ತೃ ಸಾವ್ಕಾರ ಸೋಮಣ್ಣನ ಒಡೆತನ. ನಾಕು ರಾಜ್ಯ, ಎಂಟು ದಿಕ್ಕಿನಾಗಿರಲಿಲ್ಲ, ಅಂಥಾ ರಾಜರೇಖೆ ಇದ್ದಂಥಾ ಶ್ರೀಮಂತ. ಸಾಲಿಗೆ ಸಾವಿರ ಕಂಬ, ಮೂಲೆಗೆ ಮುನ್ನೂರು ಕಂಬಗಳಿರುವಂಥಾ ನೂರಂಕಣದ ಅರಮನೆ. ಮಹಡೀ ಮ್ಯಾಲ ಮಹಡಿ ಉಂಟು, ಮ್ಯಾಲ ಚಿನ್ನದ ಕಳಸ ಉಂಟು. ಮುತ್ತಿನ ಮುಂಬಾಗಿಲು, ರತ್ನದ ತೊಲೆಗಂಬ, ಹವಳದ ಹರಿಗೋಡೆ ಆ ಅರಮನೆಗೆ. ಊಟಾ ಮಾಡಾಕ ಚಿನ್ನದ ತಟ್ಟೆ, ಬೆಳ್ಳೀ ಗಿಂಡಿ. ತುಪ್ಪಾ ಅನ್ನಾ ಉಂಡು ಸುಪ್ಪತ್ತಿಗೆ ಮ್ಯಾಲಿರುವಂಥಾ ಸೋಮಣ್ಣನಿಗೆ ನೂರಾರು ಬಿರುದು : ಸಾವ್ಕಾರ, ಧನಿ, ಒಡೆಯಾ, ಶ್ರೀಮಂತ ಅಂತ. ಬಡವರಿಗೆ ಉಳಿಗಾಲಿವಿಲ್ಲಾ ತನಗ ಭಯ ಇಲ್ಲಾಂತ ಹುಟ್ಟುವಾಗಲೇ ವರ ಪಡೆದಾತ. ಮರೆತವರನ್ನ ಮುರೀತಿದ್ದ; ನಂಬಿದವರಿಗಿ ತುಂಬಿ ತುಳುಕತಿದ್ದ. ಅವ ನೋಡ್ರಿ ಶಿವಾ, ಭಾಳ ಚಂದ ಇದ್ದಾ,-

ಹಿಮ್ಮೇಳ : ಯಾಕಂದರ ಅವ ಶ್ರೀಮಂತ ಇದ್ದಾ.

ಕಥೆಗಾರ : ಊರಮಂದಿ ಹೆತ್ತಹೆಣ್ಣ ಮಕ್ಕಳ್ನ ಅವನ ಹೆಸರಿಗೆ ಮೀಸಲಿಡುತ್ತಿದ್ದರು,-

ಹಿಮ್ಮೇಳ : ಯಾಕಂದರ ಅವನ ಹಂತ್ಯಾಕ ರೊಕ್ಕ ಇತ್ತು.

ಕಥೆಗಾರ : ಜೀತಾ ನಿಂತು ಬಿತ್ತಿದ ಬೆಳೆ ಮೀಸಲಾ ಇಡತಿದ್ದರು,-

ಹಿಮ್ಮೇಳ : ಯಾಕಂದರ ಅವನ ಹಂತ್ಯಾಕ ನಾಯಿಗಳಿದ್ದುವು.

ಕಥೆಗಾರ : ನೋಡ್ರಿ ಶಿವಾ, ಅವನ ಹಂತ್ಯಾಕೊಬ್ಬ ಆಳಮಗ ಇದ್ದಾ,-

ಹಿಮ್ಮೇಳ : ಅಂದರ ಸರ್ವಂಟ್, ಸರ್ವಂಟಿದ್ದಾ,

ಕಥೆಗಾರ : ಉಣ್ಣಾಕ ಅನ್ನ ಇರಲಿಲ್ಲ, ಉಡಾಕ ಬಟ್ಟೆ ಇರಲಿಲ್ಲ, ಬಡವ.

ಹಿಮ್ಮೇಳ : ಥೂ ಅವನ ಹಟ್ಟಿ ಹಾಳಾಗಲಿ.

ಕಥೆಗಾರ : ಹುಟ್ಟಿದಾಗಿಂದ ಮುಖ ತೊಳೆದವನಲ್ಲ, ಮೈ ತುಂಬ ಮೂರು ಕೋಟಿ ನೊಣ ಮುತ್ತಿಕೊಂಡು ಗತಗತ ನಾರತಿದ್ದ.

ಹಿಮ್ಮೇಳ : ಥೂ ಅವನ ಇರೋ ಕೊಟ್ಟಿಗಿ ಹಾಳಾಗಲಿ.

ಕಥೆಗಾರ : ಬೆನ್ನಾಗ ಬಲ ಇರಲಿಲ್ಲ, ಸೆಟದೇನಂದರ ಎದಿ ಇರಲಿಲ್ಲ. ಯಾವತ್ತೂ ಬಗ್ಗಿಕೊಂಡ ಽ ಇರತಿದ್ದ. ಹಿಂಗಾಗಿ ಸಾಪ್ಕಾರ ಸೋಮಣ್ಣನ ಪಾದಾ ಕಂಡಿದ್ನ ಽ ಹೊರತು ಮೋತೀ ಕಂಡಿರಲಿಲ್ಲ. ಹಡದವರಿರಲಿಲ್ಲ, ಮನೀ ಇಲ್ಲ, ಒಂದ ವಿಳಾಸ ಅಂತ ಇರಲಿಲ್ಲಾ, ಅಷ್ಟ ಅಲ್ಲ, ಅವಗೊಂದ ಹೆಸರ ಽ ಇರಲಿಲ್ಲ. ಅದಕ್ಕ ಽ ಸಾಪ್ಕಾರ ಸೋಮಣ್ಣನವರು ದಯಮಾಡಿ ಅವನಿಗೊಂದು ಹೆಸರ ಇಟ್ಟಿದ್ದರು, ಅದೇನಪಾ ಅಂದರ,-

ಹಿಮ್ಮೇಳ : ನಾಯೀ ಮಗಾ.

ಕಥೆಗಾರ : ಯಾಕಂದರ ಅವ ನಾಯೀ ಹಾಂಗ ಸ್ವಾಮಿನಿಷ್ಠ ಇದ್ದ. ಇಂಥಾ ನಾಯೀಕಥೀ ಹೇಳತೇವು ಕೇಳ್ರಿ ಶಿವಾ,-

ಒಂದು ದಿನಾ ಸಾಪ್ಕಾರ ಸೋಮಣ್ಣನವರ ಮಾತೋಶ್ರೀ ಅವರು ಮಗನಿಗೆ ಹೇಳ್ತಾರ,-
(ಸೋಮಣ್ಣನ ಮನೆ, ತಾಯಿ ಹಾಸಿಗೆಯಲ್ಲಿ ಮಲಗಿದ್ದಾಳೆ. ಇನ್ನೊಂದು ಬದಿಗೆ ಸೋಮಣ್ಣ ಕನ್ನಡಿ ನೋಡಿಕೊಳ್ಳುತ್ತ ಶೃಂಗಾರವಾಗುತ್ತಿದ್ದಾನೆ.)

ತಾಯಿ : ಮಗನೇ ಸೋಮಣ್ಣಾ,

ಸೋಮಣ್ಣ : ಯಾಕೆವ್ವಾ?

ತಾಯಿ : ಮಗನೇ ನಿನ್ನ ವಾರಿಗೆಯ ಹೆಂಡತಿ ತೌರಿಗೆ ಹೋಗಿ ನಾಕೆಂಟ ತಿಂಗಳಾಯ್ತಲ್ಲಪ.

ಸೋಮಣ್ಣ : ಹೌಂದಲ್ಲವ.

ತಾಯಿ : ನಾ ಮುದುಕಿ. ಕಾಲಾಗ ಶಕ್ತಿ ಇಲ್ಲ. ಕಣ್ಣ ಕಾಣ್ಸಾಣೆಲ್ಲ. ನನ್ನ ಉಪಚಾರ ಮಾಡಾಕಾದರೂ ನಿನ್ನ ಹೇಂತಿ ಬೇಕಲ್ಲಪ.

ಸೋಮಣ್ಣ : ಹೌಂದಲ್ಲಪ.

ತಾಯಿ : ವಯಸ್ಸಾದರೂ ನಿನ್ನ ಭಾನಗಡಿಯೇನೂ ಕಡಿಮ್ಯಾಗಲಿಲ್ಲ. ನಿನ್ನ ಪಾಪ ದಿನದಿನಕ್ಕ....

ಸೋಮಣ್ಣ : ನನ್ನ ಪಾಪ ಒಂದನೂರಾ ಎಂಟಸಲ ಎಣಿಸೀದಿ ಬೇ.

ತಾಯಿ : ನೂರಾ ಒಂಬತ್ತನೇ ಬಾರೀ ಕೇಳು, ಹೋಗಿ ನಿನ್ನ ಹೆಂತೀನ ಕರತಾರಪ.

ಸೋಮಣ್ಣ : (ಮನೆಯಾಚಿಗಿರುವ ನಾಯೀಮಗನಿಗೆ)

ಏ ನಾಯೀಮಗನ ಽ ಗಾಡಿಗಿ ಸವಾರಿ ಬಿಗದೇನೊ ?

ನಾಯೀಮಗ : (ಹೊರಗಿನಿಂದ) ಹೂನ್ರಿ.

ಸೋಮಣ್ಣ : ನಾ ಬರ್ತೀನಿಬೇ.

ತಾಯಿ : ನನ್ನ ಮಾತ ನಿವಾರಿಸಿ ಹೋಗಬ್ಯಾಡ.

ಸೋಮಣ್ಣ : ಹೇಂತೀ ಊರಿಗಿ ಹೋಗಿ ಕರಕೊಂಬಾ ಅನ್ನುವಾಕೀನೂ ನೀನ ಽ. ಹೊಂಟ ನಿಂತರ ಅಡ್ಡಬಾಯಿ ಹಾಕವಾಕೀನೂ ನೀನ ಽ. ಈಗೇನು ಹೋಗಂತೀಯೊ, ಬ್ಯಾಡಂತೀಯೊ ? ಏ ನಾಯೇ, ಎತ್ತಿಗಿ ಹುರಿಗೆಜ್ಜಿ ಕಟ್ಟಿದೇನೊ ?

ನಾಯೀಮಗ : (ಹೊರಗಿನಿಂದ) ಹೂನ್ರಿ.

ತಾಯಿ : ನಿನ್ನ ಪಾಪದ ಕೊಡ ತುಂಬಿ ಬಂದೈತೋ ಮಗನ.

ಸೋಮಣ್ಣ : ಆಯ್ತು, ನೀ ಎಣಿಸಿದಾಗೊಮ್ಮಿ ಪಾಪದ ಅಂಕಿ ಹೆಚ್ಚುಕಮ್ಮಿ ಆಗತದ. ಬರೋಬ್ಬರಿ ಎಣಿಸು. ಬೇಕಾದರ ನಾನ s ಹೇಳಿರತೀನಿs ಇಲ್ಲೀತನಕ ನಿನ್ನ ಲೆಕ್ಕದ ಪ್ರಕಾರ ನಾ ಮಾಡಿದ ಪಾಪ ತೊಂಬತ್ತೊಂಬತ್ತು. ಹೋಗಿ ಬರೋದರೊಳಗ ನಾಕೆಂಟು ಸೇರಿಸಬ್ಯಾಡ. ನಿನಗ ಬರೋಬರಿ ಲೆಕ್ಕಾ ಇಡಾಕ ಬರೂದ s ಇಲ್ಲ. ಏ, ನಾಯೀಮಗನ s,-

ನಾಯೀಮಗ : (ಹೊರಗಿನಿಂದ) ಓರಿ,

ತಾಯಿ : ಸೋಮು....

ಸೋಮಣ್ಣ : ಮತ್ತೇನಬೆ? ಒಂದನೂರು ಪೂರಾ ಆಯ್ತೇನು? ಜೋರಿನಿಂದ ಉಸಿರಾಡಿದರೂ ಪಾಪ ಅಂತಿ.

ತಾಯಿ : ಹೌಂದು, ಇಂತ ಹರೀವತ್ತ ಚೆಲಿವೀ ಗಂಡ ಬಂದಿದ್ದ.

ಸೋಮಣ್ಣ : ಹೌಂದ? ಯಾರವ?

ತಾಯಿ : ನೀ ಇತ್ತೀಚೆ ಕೆಡಿಸಿದ್ದರಿಂದ ಬಾವೀ ಬಿದ್ದ ಸತ್ತಳಲ್ಲ. ಆಕೀ ಗಂಡ.

ಸೋಮಣ್ಣ : ಛೇ ಛೇ ಏನಂತ ಮಾತಾಡ್ತೀಬೆ?

ತಾಯಿ : ಇನ್ನೊಬ್ಬರ ಜೀವದ ಜೋಡಿ ಆಟ ಆಡಬಾರದೋ ಮಗನ s. ಬಡವರ s ಇರಲಿ, ಅವರಿಗೂ ಜೀವಾ ಇರತೈತಿ. ಮಾಡೋ ಕಾರಭಾರ ಮಾಡಿದಿ, ಚೆಲಿವಿ ಸತ್ತಹೋದ್ಲು. ಆಕೀ ಗಂಡ ಅರೀದವರ್ಹಾಂಗ ತನ್ನ ಪಾಡಿಗಿ ತಾ ತಣ್ಣಗಿದ್ದರೂ ಚಾಕರಿ ಬಿಡಿಸಿ ಹೊರಗ ಹಾಕಿದಿ. ತಿಳೀಬಾರದ? ಇಷ್ಟ ಮಂದಿ ಜೀತದವರಿಗಿ ಅನ್ನಾ ಹಾಕತಿ, ಅವಗೂ ಹಾಕಿದರ ನೀ ಆಳೋ ರಾಜ್ಯ ಹಾಳಾಗೋದಿಲ್ಲ. ನಿನ್ನ ಪುಂಡಾಟವನ್ನ ಪಾಪ, ಅವನೇನೂ ಮನಸ್ಸಿಗಿ ಹಚ್ಚಿಕೊಂಡಿಲ್ಲ. ಚಾಕರಿಗೆ ಇಟ್ಟಕ. ನಾ ಮಾತ ಕೊಟ್ಟೇನಿ. ನನ್ನ ಮಾತ ಉಳಸಾಕಾದರೂ ಅವನ ಗಂಜೀ ಆಧಾರ ತಪ್ಪಿಸಬ್ಯಾಡ.

ಸೋಮಣ್ಣ : ಚೆಲಿವಿ ಯಾಕ ಸತ್ತಳೋ ಏನ ಕತಿಯೊ! ಎಲ್ಲಾದಕ್ಕೂ ನಾನ s ಜವಾಬ್ದಾರಂತೀಯಲ್ಲಬೆ? ನೀ ಇಂಥಾದ್ದರಾಗೆಲ್ಲ ತಲೀ ಹಾಕಬ್ಯಾಡ. ದನಿ ತಗದ ಅತ್ತರ ಎಂಥವರು ಕಣ್ಣೀರ ಒರಸ್ತಾರಂತ ಗೊತ್ತದ ಅವರಿಗೆ. ಏ ನಾಯೀಮಗನ s...
(ಹೊರಗಿನಿಂದ ನಾಯೀಮಗ ಬರುವನು.)

ನಾಯೀಮಗನ ಽ, ನಾ ಇಲ್ಲಿ ಸಾಯ್ತಾ ಇದೀನಿ, ನೀ ಅಲ್ಲಿ ಆಕಳಸ್ತಾ ನಿಂತೀದಿಯೇನೊ?
(ನಾಯೀಮಗನನ್ನು ಒದೆಯುವನು.)

ತಾಯಿ : ಯಾರದೋ ಸಿಟ್ಟ ಯಾರದೋ ಮ್ಯಾಲ ಹಾಕಬ್ಯಾಡ. ಈಗೇನು, ಅವನ್ನ ಚಾಕರಿ ಇಟ್ಟಕೊಳ್ತೀಯೋ ಇಲ್ಲೊ?

ಸೋಮಣ್ಣ : ಯಾಕ? ನಾ ಮಾಡಿದ ಪಾಪ ಯಾವತ್ತೂ ನನ್ನ ಕಣ್ಣ ಮುಂದ ಽ ಇರಲೆಂತ?

ತಾಯಿ : ಈಗ ಆ ಹುಡುಗ್ಗ ಏನ್ಹೇಳಲಿ?

ಸೋಮಣ್ಣ : ಸಾಯನ್ನು.

ತಾಯಿ : ಹಾಂಗಿದ್ದರ ಹೇಂತಿನ ಕೊಂದಿ. ಗಂಡನ್ನೂ ನೀನ ಽ ಕೊಂದಬಿಡು.

ಸೋಮಣ್ಣ : ಸಾಯೋದಕ್ಕ ಸಾವಿರ ಹಾದಿ ಅದಾವ. ಅದರಾಗ ಸಮೀಪದ್ದೊಂದ ಆರಿಸಿಕೊಂಡು ಸಾಯನ್ನು.

ತಾಯಿ : ತಿಳದೂ ತಿಳದೂ ಇಂಥಾ ಮಾತಾಡ್ತಿ.. ಇವೆಲ್ಲಾ ನಿನ್ನ ವಿನಾಶ ಕಾಲದಾಗ ಆಡೋ ಮಾತೋ ಮಗನ ಽ!
(ಕಣ್ಣೀರು ಹಾಕುವಳು. ಸೋಮಣ್ಣ ಬೇಸರದಿಂದ ಹೊರಡುವನು. ಎದುರಿಗೆ ಮಾರೋತಿ ಬರುವನು. ನೋಡಿ ಅಪಶಕುನವೆಂಬಂತೆ ಸೋಮಣ್ಣ ಅಲ್ಲೇ ನಿಲ್ಲುವನು.)

ಸೋಮಣ್ಣ : ಯಾವ ಬೋಳೀಮಗನೊ ಇವನು?

ನಾಯೀಮಗ : ಇವನೇ ಚೆಲಿವೀ ಗಂಡ, ಮಾರೋತಿ.

ಸೋಮಣ್ಣ : ಆಯ್ತಬೇ, ನೀ ಹೇಳ್ತೀಯಂತ ಇವನ್ನ ಚಾಕರಿ ಇಟ್ಟುಕೊಳ್ತೀನಿ, ಆಯ್ತ? ಮನ್ಯಾಗಿನ ದನಕರಾ ನೋಡಿಕೊಂಡಿರೊ. ನಾಯೀಮಗ ಽ ನಡಿಯೊ. (ಹೊರಡುವರು. ಮೇಳದವರು ಹಾಡುತ್ತ ಬಂದು ಹಿಂದಿನ ದೃಶ್ಯವನ್ನು ಮುಚ್ಚುವರು.)

ಮೇಳ : ಸೋಮಣ್ಣಂಬೊ ಸಾವ್ಕಾರ
ಚಕ್ಕಡಿ ಏರಿ ಹೊಂಟದಾರ
ಬೆರಗಿನಿಂದ ಮಂದಿ ಹಾದಿ ಬಿಟ್ಟಾರಲ್ಲಾ |

ಕವಿಗಾರೆಲ್ಲಾ ಹಾಡಿ ಹೊಗಳಿ ಹರಸ್ಯಾರಲ್ಲಾ | ಭಲೆ
ಸೂಸಗಾಳಿ ಬೀಸ್ಯಾವಲ್ಲ ಖುಶಿಯಾಲಾ | ಹಾ
ಬಿಸಿಗಾಳಿ ಮೂಡ್ಯಾವೋ ಶಿವನೆ |
ಬಡವರ ಉಸಿರೊಳಗೊ ||

ಎತ್ತಿನ ಕಣ್ಣು ನೆತ್ಯಾಗೇರಿ
ಕಾಣಲಿಲ್ಲ ಶಿವನೆ ದಾರಿ
ಎಳಿಸಸಿ ಕಾಲಾಗ್ಹಾಕಿ ತುಳದಾವಲ್ಲಾ |
ಹಾಡೋ ಹಕ್ಕಿ ಆದಾವಲ್ಲ ಕಂಗಾಲಾ | ಎಲಾ
ಏನ ಬಂತೊ ಎಂಥಾ ಕಾಲ ಹುಯ್ಯಾಲಾ | ಹಾ
ಬಿಸಿಗಾಳಿ ಮೂಡ್ಯಾವೋ ಶಿವನೆ
ಬಡವರ ಉಸಿರೊಳಗೊ ||

ಕಥೆಗಾರ : ನೋಡ್ರಿ ಶಿವಾ, ಈ ಪ್ರಕಾರ ಸಾವ್ಕಾರ ಸೋಮಣ್ಣನವರು ಸಕಲ ಸೌಭಾಗ್ಯ ಸಮೇತ ತಮ್ಮ ಸೌಭಾಗ್ಯವತೀನ ಕರಕೊಂಬಾರಾಕ ಹೊಂಟಿರೋ ವ್ಯಾಳ್ಯಾದಲ್ಲಿ, ದಾರ್ಯಾಗ ಒಂದ ಹಳ್ಳಿ ಸಿಕ್ಕಿತು. ಅಲ್ಲಿ ಎಡಗೈ ದಾಸರು ಆಟಾ ಹೂಡ್ಯಾರ್ರಿ.

ಹಿಮ್ಮೇಳ : ಅಲ್ಲ ಗುರುವೆ, ಆ ಮ್ಯಾಳದಾಗಿನ ದಾಸಿ ಭಾಳ ಚಂದ ಅದಾಳಂತ, ಖರೆ ಏನ್ರಿ ?

ಕಥೆಗಾರ : ಕಂದಾ, ಆಕೀ ಚೆಲಿವಿಕಿ ಹೆಂಗ ಹೊಗಳಲಿ ? ಸೋಳಾ ವರ್ಷದಾಕಿ, ಬತ್ತೀಸ ಲಕ್ಷಣಾದಾಕಿ, ಕೋಕಿಲಧಾಂಗ ಹಾಡುವಾಕಿ, ನವಿಲಿನ್ಹಾಂಗ ಕುಣೀವಾಕಿ, ನಿಂಬೀ ಹಣ್ಣಿನ್ಹಾಂಗ ಬಾಗಿದಾಕಿ. ಆಹಾ ಕಣ್ಣಿನ ನೋಟ, ಅಬಬಬಾ, -ಕಂದಾ ಮಸದ ಕತ್ತಿ! ಹಾಕಿ ಎಳದರ ಹೊಟ್ಯಾಗಿನ ಕರಳ ಕಿತ್ತ ಹೊರಗ ಬರಬೇಕು ! (ಹೀಗೆ ಹೇಳುತ್ತ ಮೇಳದವರು ಮರೆಯಾಗುತ್ತಾರೆ. ಕೂಡಿದ ಪ್ರೇಕ್ಷಕರಲ್ಲಿ ಹಗಲು ವೇಷ ಹಾಕುವ ಎಡಗೈ ದಾಸರು ತಮ್ಮ ಬಯಲಾಟ ಪ್ರದರ್ಶಿಸುತ್ತಿದ್ದಾರೆ. ಅಷ್ಟರಲ್ಲಿ ಸೋಮಣ್ಣನ ಚಕ್ಕಡಿ ಅಲ್ಲಿಗೆ ಬರುತ್ತದೆ. ಸೋಮಣ್ಣ ಚಕ್ಕಡಿಯಿಂದಿಳಿದು ಬಯಲಾಟ ನೋಡತೊಡಗುತ್ತಾನೆ.)

ನಾಯಕಿ : ಸಂಗೀತಾ ಸಂಗೀತಾ
ಸಂಗೀತಾ ಎಂಬೋದು ನಮ್ಮ ಹೆಸರ
ಕೇಳಯ್ಯ ಹೇಳೂವೆ ಮಜಕೂರ ||

ನಟುವಾನ : ಉನ್ನತ ಹರುಷದಿಂದ ಚೆನ್ನಾಗ ಕುಣಿಯುತ್ತ ಬಂದ ಚೆನ್ನಿಗಳೇ, ನಿನ್ನ ನಾಮಾಂಕಿತವೇನು ? ನಿನ್ನ ಮಹಿಮೆ ಎಂಥಾದ್ದು ? ಚಂದದಿಂದ ಹೇಳುವಂಥವಳಾಗು.

ನಾಯಕಿ : ಮನ್ನಣೆಯಿಂದ ಎನ್ನ ಸನ್ನಿಧಿಯಲ್ಲಿ ನಿಂತು ಕೇಳುವ ಸೂತ್ರಧಾರನೇ, ಹುಟ್ಟಿದ ಹುಳು ಮೊದಲು, ಮನುಷ್ಯ ಕಡೆಯಾಗಿ, ಎಲ್ಲರ ಒಡಲಲ್ಲಿ ಗಡಿಬಿಡಿ ಹುಟ್ಟಿಸಿ ಅವರ ಎದೆ ಬಡಿದುಕೊಳ್ಳುವ ಹಾಗೆ ಮಾಡುವಂಥಾ ಪ್ರೇಮ ನಾನು! ಹೇಡಿಯಾದವನು ಕೂಡ ನನ್ನ ಕಂಡರೆ ಸಾಕು, ಉಬ್ಬುಬ್ಬಿ ವೀರ ಬೊಬ್ಬೆ ಹಾಕಿ, ಅಬ್ಬರಿಸಿ ಆರ್ಭಟಿಸಿ ಶತ್ರುಗಳನ್ನು ಗೆಲ್ಲುವಂತೆ ಮಾಡುವಂಥ ಶಕ್ತಿ ಪ್ರೀತಿ ನಾನು! ನನ್ನಿಂದ ಕುರೂಪಿ ಸುರೂಪಿ ಆಗತಾನ. ಮನಿಶ್ಯಾ ದೇವರಾಗತಾನ. ಅಯ್ಯಾ ನಟ್ಟುವಾನಾ, ಹೆಣ್ಣು ಗಂಡೆನ್ನದೆ ಎಲ್ಲರ ಮನಸ್ಸಿನಲ್ಲಿ ಶ್ರಮವಿಲ್ಲದೆ ಕ್ರಮದಿಂದ ಕಾರುಬಾರು ಮಾಡುವಂಥಾ ದೇವಿ ನಾನು! ನನಗ  ಬಂದು ಸಂಗೀತಾ, ಸಂಗೀತಾ, ಸಂಗೀತಾ-ಅಂತಾರ ನೋಡು.

ನಟುವಾನ : ಏನವಾ ನಿನ್ನ ಹೆಸರು ಸಂಗೀತಾ ಅಂತ ನನಗಾದರು ತಿಳೀತು, ಕುಂತ ಸಭಾಕಾದರೂ ತಿಳಿದ ಬಂತ. ಇನ್ನು ನಿನ್ನ ಮಹಿಮಾ ಏನೈತಿ-

ಅದನ್ನಷ್ಟು ತಿಳಿಸುವಂಥವಳಾಗು.

ನಾಯಕಿ : ಅಯ್ಯಾ ನಟುವಾನ, ನನ್ನ ಹಾಡು ಕೇಳಿ ಮುದುಕರು ಪ್ರಾಯದ ಹುಡುಗರಾಗುತ್ತಾರೆ.

ನಟುವಾನ : ಇಷ್ಟೇನೊ? ತಡಿ ತಡಿ. ಲೇ ಉಳ್ಳಾಗಡ್ಡಿ,
(ಮೇಳದಿಂದ ಅವನ ಹೆಂಡತಿ ದಾಸಿ ಬರುವಳು.)

ದಾಸಿ : ಏನ ಸ್ವಾಮಿ?

ನಟುವಾನು : ಅವ್ವಾ ಸಂಗೀತಾ, ಇಕಾ ಇಲ್ಲಿದ್ದಾಳಲ್ಲಾ, ಉಳ್ಳಾಗಡ್ಡಿ, ಇವಳ ಬಳಿ ಬೇಕಾದಂಥಾ ಪ್ರಾಯದ ಹುಡುಗನ್ನ ಕಳಿಸು, ಒಂದೇ ಗಂಟೆಯಲ್ಲಿ ಮುದುಕನನ್ನಾಗಿ ಮಾಡಿಬಿಡುತ್ತಾಳೆ!
(ಪ್ರೇಕ್ಷಕರು ಚಪ್ಪಾಳೆ ತಟ್ಟಿ ನಗುತ್ತಾರೆ. ಇಲ್ಲಿಗೆ ಸೋಗು ಮುಗಿಸಿ ದಾಸ ಅಂದರೆ ನಟುವಯ್ಯ ಕಾಣಿಕೆ ಇಸಿದುಕೊಳ್ಳತೊಡುಗುತ್ತಾನೆ. ಜನ ಚದುರತೊಡಗುತ್ತಾರೆ. ಸೋಮಣ್ಣ ಮೊದಲ ನೋಟಕ್ಕೇ ನಾಯಕಿಯ ಸೌಂದರ್ಯದಿಂದ ಪರವಶನಾಗಿದ್ದಾನೆ.)

ಸೋಮಣ್ಣ : ಸಂಗೀತಾ! ಸಂಗೀತಾ! ಮಗನ ಽ...

ನಾಯೀಮಗ : ಏಪಾ.

ಸೋಮಣ್ಣ : ಇದ್ಯಾವುದೋ ವಿಸ್ಕಿ ಹೆಸರ ಇದ್ಧಾಂಗ ಐತೆಲ್ಲೊ!

ನಾಯೀಮಗ : ಎಪಾ!

ಸೋಮಣ್ಣ : ಏನ ಹೆಸರ! ಏನ ರೂಪ! ಸಣ್ಣ ನಡ ಏನ! ಖಿಲಖಿಲ ನಗಿಯೇನ! ಮಗನ s ಹೊಕ್ಕಳೋ ಹೊಕ್ಕಳು!

ನಾಯೀಮಗ : ಎಪೋ!

ಸೋಮಣ್ಣ : ಎದಿ ಬಾಗಲಾ ತಗದ ಒಳಗ ಹೊಕ್ಕಳು!

ನಾಯೀಮಗ : ಎಪೊ.

ಸೋಮಣ್ಣ : ಏನವಳ ಸೊಲ್ಲ, ಅಚ್ಚಿನ ಬೆಲ್ಲ! ಹಚ್ಚಿದಳೋ ಮಗನ ಹಚ್ಚಿದಳು!

ನಾಯೀಮಗ : ಎಪಾ!

ಸೋಮಣ್ಣ : ಹುಚ್ಚ ಹಚ್ಚಿದಳೊ! ಕಾಮನ ಬಾಣಾ, ಹತ್ಯಾವೋ ಬೆನ್ನಾ, ನಾಯೀಮಗನೂ ಮಾಡಲಿನ್ನೇನಾ?

ನಾಯೀಮಗ : ಹೆಸರ ಭಾಳ ಚಂದ ಇದ್ದರ ನಿಮ್ಮ ನಾಯೀಗೂ ಅದ s ಹೆಸರ ಇಟ್ಟರಾಯ್ತು ಬಿಡರೀಯೆಪ.

ಸೋಮಣ್ಣ : ಎಲಾ ಮಗನ s ಬಾರೋ ಇಲ್ಲಿ.

ನಾಯೀಮಗನ ಕೈ ತಗೊಂಡು ಎನ್ನ (ಎದೆಯ ಮೇಲಿಟ್ಟುಕೊಂಡು)

ಜೋರಿನಿಂದ ಸಂಗೀತ ಅನ್ನು. ನನ್ನ ಎದಿ ಹೆಂಗ ಬಡಕೋತದ ನೋಡು. ಅನ್ನೊ ಸಂಗೀತಾ ಅಂತ.

ನಾಯೀಮಗ : ಸಂಗೀತಾ,-

ಸೋಮಣ್ಣ : ಹೌಂದ? ಎಂದಿ ಹೆಂಗ ಹಾರತೈತಿ!

ನಾಯೀಮಗ : ಹೌಂದ್ರಿ ಡಬ್‌ಡಬ್ ಅಂತೈತಿ!

ಸೋಮಣ್ಣ : ಈಗಿಂದೀಗ ಹೋಗು. ಅಕಾ, ಆ ಮುದುಕ ರೊಕ್ಕಾ ಇಸಕೊಳ್ಳಾಕ ಹತ್ಯಾನಲ್ಲ, ಅವನ್ನ ಕರಕೊಂಬಾ.
(ನಾಯೀಮಗ ಹೋಗಿ ದಾಸನನ್ನು ಕರೆತರುವನು. ಅಲ್ಲೀತನಕ ಇವನು ಎದೆಯ ಮೇಲೆ ಕೈ ಇಟ್ಟುಕೊಂಡು ಸಂಗೀತಾ ಸಂಗೀತಾ ಎಂದು ಹೇಳುತ್ತಿರುವನು.)

ದಾಸ : ನಮಸ್ಕಾರರೀ ಸಾವ್ಕಾರ, ಶ್ರೀಮಂತರ.

ಸೋಮಣ್ಣ : ಏ ದಾಸ, ದಿನಾ ನಿನ್ನ ಆಟಕ್ಕ ಎಷ್ಟು ರೂಪಾಯಿ ಸಿಗತದನೊ?

ದಾಸ : ನಾಕೆಂಟ ಸಿಗಬೇಕಾದರ ಕಣ್ಣೀರ ಕಪಾಳಿಗಿ ಬರತಾವರಿ. ಏನೊ, ನಿಮ್ಮಂಥವರು ಸಿಕ್ಕ ದಿವಸ ಹತ್ತೋ ಹದಿನೈದೋ ಸಿಗತಾವರಿ.

ಸೋಮಣ್ಣ : ದಿನಕ್ಕ ನೂರ್ರೂಪಾಯಿ ಕೊಡತೀನಿ. ಬರ್ತಿಯೇನು?

ದಾಸ : (ನಂಬದೆ) ಬಡವರ ಜೋಡೀ ನೀವೂ ಚ್ಯಾಷ್ಟೀ ಮಾಡ್ತಿರ್ರೇನ್ರಿ ಸಾವ್ಕಾರ್ರ?

ಸೋಮಣ್ಣ : ನಂಬಿಕಿಲ್ಲೇನು? ತಗೊ ನೂರು.
(ನೂರರ ನೋಟು ಕೊಡುವನು. ದಾಸ ತುಂಬ ಉತ್ಸಾಹಿತನಾಗುತ್ತಾನೆ.)

ದಾಸ : ಏ ಸಾವಂತ್ರೀಬಾಯಿ, ಸಾವ್ಕಾರ್ರು ನೂರ್ರೂಪಾಯಿ ಕೊಟ್ಟರು!

ಸಾವಂತ್ರಿ : (ಓಡಿಬಂದು) ತೋರಿಸು.

ದಾಸ : (ತೋರಿಸುತ್ತ) ದಿನಾ ನೂರ ಕೊಡತಾರಂತ.

ಸಾವಂತ್ರಿ : ಖರೆ ಏನ್ರಿ ಸಾವ್ಕಾರ್ರ?

ಸೋಮಣ್ಣ : ಒಂದು ತಿಂಗಳ ರೊಕ್ಕಾ ಈಗs ಕೊಡಂದೇನು?

ಸಾವಂತ್ರಿ : ಬ್ಯಾಡ್ರೀಯೆಪ, ಸತ್ತಗಿತ್ತಾನು.

ಸೋಮಣ್ಣ : ಅದರ ಒಂದ ಕರಾರು. ದಿನಾ ನನ್ನ ಮನ್ಯಾಗS ಇರಬೇಕು. ನನ್ನ ಮುಂದS ಆಟ ಆಡಬೇಕು. ತಯಾರಿದ್ದೀಯೇನು ?

ದಾಸ : ಹೂನ್ರಿ !

ಸೋಮಣ್ಣ : ಹೋಗಿ ಸಂಗೀತಾಗ ನಾ ನೂರ್ರೂಪಾಯಿ ಕೊಟ್ಟದ್ದ ಹೇಳು.

ದಾಸ : ಆಕೀ ಹೆಸರು ಸಂಗೀತಾ ಅಲ್ಲರಿ, ಶಾರಿ.

ಸೋಮಣ್ಣ : ಇಂದಿನಿಂದ ಆಕೀ ಹೆಸರು ಸಂಗೀತಾ!

ಸಾವಂತ್ರಿ : ಆಕೀ ಹೆಸರು ಅದಲ್ಲರಿ.

ದಾಸ : ಸುಮ್ಮನ ಬಾಯ್ಮುಚ್ಚಕೊಳ್ಳೇ. ಆ ಹೆಸರಿನಾಗ ಒಂದ ಬುಟ್ಟಿ ಲಾಭ ತುಂಬ್ಯಾವ, ಮರೀಬ್ಯಾಡ. ಹೌಂದ್ರೀಯೆಪ ಆಕೀ ಹೆಸರು ಸಂಗೀತಾ.

ಸೋಮಣ್ಣ : ಮಗಳೇನು ?

ಸಾವಂತ್ರಿ : ಹೂನ್ರಿ.

ದಾಸ : ಮಗಳಲ್ಲರೀ ನನ್ನ ತಿಜೋರಿ! ಇನ್ನS ಮದಿವ್ಯಾಗಿಲ್ಲ.

ಸಾವಂತ್ರಿ : ಮದಿವ್ಯಾದರೂ ನಮ್ಮಲ್ಲಿ ಏನಡ್ಡೀಯಿಲ್ಲರಿ.

ದಾಸ : ಯಾಕಿಲ್ಲ ? ಅಡ್ಡಿ ಐತಿ! ಆದರ ನಿಮಗೇನೂ ಅಡ್ಡಿಯಿಲ್ಲರಿ.

ಸಾವಂತ್ರಿ : ನನ್ನ ಮಗಳ ಸಲುವಾಗಿ ಎಷ್ಟಮಂದಿ ಸಾವ್ಕಾರ ಶ್ರೀಮಂತರು ನಿಟ್ಟುಸಿರು ಬಿಟ್ಟಾರ್ರೀ! ಆದರ...

ದಾಸ : ನಿಟ್ಟುಸಿರೂ ಬಿಡತಾರ, ಉಸರೂ ಬಿಡತಾರ, -ನನ್ನ ಪರವಾನಿಗಿ ಬೇಕಲ್ಲ! ನಿಮಗ ನನ್ನ ಪರವಾನಿಗಿ ಐತ್ರಿ!

ಸೋಮಣ್ಣ : ಹೊರಡೋಣಲ್ಲ ?

ದಾಸ : ಹೂನ್ರಿ, ಹೋಗS ಸಾವಂತ್ರಿ, ಸಂಗೀತಾನ್ನ ಕರಕೊಂಬಾ ಹೋಗು.
(ಸಾವಂತ್ರಿ ಹೋಗುವಳು.)

ಸಂಗೀತಾನನ್ನ ಬೆಳೆಸಾಕ ಎಷ್ಟ ಖರ್ಚು ಮಾಡೇನಿ! ಹಾಡಾಕ, ಕುಣ್ಯಾಕ ಕಲಸಬೇಕಾದರ, ಛೇ ಛೇ, ಖರೆ ಹೇಳತೇನ್ರಿ ಸಾವ್ಕಾರ್ರ S ಆ ಭಗವದ್ಗೀತಾ ಅಂತಾರಲ್ಲರೀ, ಅದರಲ್ಲಿರೋ ಹಂಗS ಈಕೀನ ಬೆಳಸಿದೇನ ನೋಡ್ರಿ.

ಸೋಮಣ್ಣ : ಭಗವದ್ಗೀತಾದಾಗ ಹೆಂಗಸನ್ನ ಹೆಂಗ ಬೆಳಸಬೇಕಂತ ಬರದ್ದಾರೇನು ?

ದಾಸ : ಬರದಿಲ್ಲರಿ ?

ಸೋಮಣ್ಣ : ಅದರಾಗ ಕುವರೀ ಹೆಂಗ ಬೆಳಸಬೇಕಂತ ಬರಧಾಂಗಿತ್ತು.

ದಾಸ : ಹೌಂದ ಹೌಂದರಿ, ಹಾಂಗS ಬೆಳಸೀನ್ನೋಡ್ರಿ!
(ಅಷ್ಟರಲ್ಲಿ ಸಂಗೀತಾ, ಸಾವಂತ್ರೀ ಹಾಗೂ ಮೇಳದ ಇನ್ನೊಬ್ಬ ನಾಗ ಎಲ್ಲರೂ ಆಟದ ಸಾಮಾನು ಸಮೇತ ಬರುವರು.)

ಸೋಮಣ್ಣ : ಏ ನಾಯೀಮಗನS ಚಕ್ಕಡೀ ಹೂಡು. ತಿರುಗಿ ಊರಿಗಿ ನಡಿ.

ನಾಯೀಮಗ : ನಿಮ್ಮ ಹೆಂಡತಿ ಊರಿಗೆ....

ಸೋಮಣ್ಣ : ಹೇಳಿದಷ್ಟ ಕೇಳು.
(ಹಾಡುತ್ತ ಬಂದ ಮೇಳ ಅವರನ್ನು ಮುಚ್ಚುತ್ತದೆ.)

ಮೇಳ : ಚಿತ್ತ ಚಂಚಲಾದವಯ್ಯ
ಚಿತ್ತಜಾನ ಉಪಟಳಕ್ಕ
ಗೊತ್ತ ಮರೆತು ತಿರುಗಿ ಹೊಂಟರೋ |

ಕಾಲತುದಿಯ ಮ್ಯಾಲ ನಿಂತು
ಹುಬ್ಬಗೈಯ ಹಚ್ಚಿಕೊಂಡು
ತೌರಿನಲ್ಲಿ ಮಡದಿ ನಿಂತಳೊ || ಹಾ ರಾಮ ರಾಮ
ನಿಂತಳೋ ನಿಂತಳೋ ಮಡದಿ ನಿಂತಳೊ ||

ಪ್ರೀತಿ ಎಂದರ್ಯಾಕೆ ನಕ್ಕಿ
ಹೊತ್ತಿ ಉರಿವ ಎದಿಯ ಬೆಂಕಿ
ಬೆಳಕಿನಾಗ ಏನ ಕಂಡಿಯೋ |
ಏನ ಬಯಸಿ ಏನ ಪಡದಿ
ಬಂದರ್ಯಾರು ಯಾರ ಕರಿದಿ
ಹಣ್ಣ ಹರಿದರ್ಯಾರು ತಿಂದರೋ | ಹಾ ರಾಮ ರಾಮ
ತಿಂದರೋ ತಿಂದರೋ ಹಣ್ಣ ತಿಂದರೋ ||

ಕಥೆಗಾರ : ಇನ್ನ ಮುಂದ ಕಲಿಯುಗದಾಗಿ ಕೌತುಕ ಹೇಳತೇವು, ಕೇಳಬೇಕ್ರಿ ಕುಂತ ಶಾಣೇರು : ಸಾವ್ಕಾರ ಸೋಮಣ್ಣನವರು ತಮ್ಮ ಅರ್ಧಾಂಗಿನ್ನ ಅಲ್ಲೇ ಬಿಟ್ಟು. ಶಾರೀನ್ನ ಕರಕೊಂಡು ಶಿವಾಪಟ್ಟಣಕ್ಕ ಬಂದರು. ಶಿವಾ ಬರೂದರೊಳಗ ಕತ್ತಲಾಗಿ ರಸ್ತಾದಾಗ ದೀಪ ಇರಲಿಲ್ಲ.

ಹಿಮ್ಮೇಳ : ಕರಂಟ ಹೋಗಿತ್ತೇನ್ರಿ ?

ಕಥೆಗಾರ : ಹೌಂದಪ.

ಹಿಮ್ಮೇಳ : ಕತ್ತಲಾಗ ಭಾಳ ಗದ್ದಲ ಆಗತಾವ್ರಿ, ಹಿಂದ ನ್ಯೂಯಾರ್ಕದಾಗ...

ಕಥೆಗಾರ : ಅಲ್ಲೇನಾತಾಪ ?

ಹಿಮ್ಮೇಳ ಹಿಂಗS ಒಮ್ಮಿ ಕರಂಟ ಹೋಗಿತ್ತರಿ. ಇಡೀ ಊರಾಗ ಕತ್ತಲಂದರ ಕತ್ತಲಿ! ಬೆರಳ ಚುಚ್ಚಿದರ ನೆಡಬೇಕು, ಅಂಥಾ ಕತ್ತಲಿ!

ಕಥೆಗಾರ : ಆಯ್ತಪ, ಆಮೇಲೇನಾಯ್ತು ?

ಹಿಮ್ಮೇಳ : ಆಮ್ಯಾಲಂದರ...ಕರಂಟ ಬಂತರಿ.

ಕಥೆಗಾರ : ಇಷ್ಟS ನ?

ಹಿಮ್ಮೇಳ : ಛೇ ಛೇ, ಇಷ್ಟS ಆಗಿದ್ದರ ನಾ ಯಾಕ ಹೇಳೇನ್ರಿ? ಕರಂಟ ಬಂದ ಮ್ಯಾಲ ನೋಡಿದರ ಬಿಳೀ ಹೆಂಗಸರೆಲ್ಲಾ ಕರೀ ನೀಗ್ರೊ ಮಂದೀನ್ನ ತಬ್ಬಿಕೊಂಡಿದ್ದರಂತ!

ಕಥೆಗಾರ : ಮುಗೀತೇನಪಾ ನಿಂದು?

ಹಿಮ್ಮೇಳ ಖರೇನರಿ. ನಿಮ್ಮಾಣಿ, ಪೇಪರದಾಗ ಬಂದಿತ್ತು.

ಕಥೆಗಾರ : ಆಯ್ತುಪ, ಶಿವಾಪಟ್ಟಣದಾಗ ಹಂಗಾಗಲಿಲ್ಲ. ಬಡವರ ಗುಡಸಲದಾಗ ಎಣ್ಣೀ ದೀಪಿತ್ತು. ಅದರ ಬೆಳಕು ಗುಡಿಸಲಾ ಮೀರಿ ರಸ್ತಾದಾಗ ಚೆಲ್ಲವರಿದಿತ್ತು. ಬರೋಬರಿ ದಾರಿ ಬೇಕ? ತಗೊ ಬಡವರ ಬೆಳಕು. ಬ್ಯಾಡಂತೀಯ? ಕಣ್ಣ ಮುಚ್ಚಿಕೊಂಡ ಅಡ್ಡ ಹಾದೀ ಹಿಡಿ. ಏನಂತಿ?

ಹಿಮ್ಮೇಳ : ಮುಂದಿನ ಕತಿ ಹೇಳ್ರಿ.

ಕಥೆಗಾರ : ನೋಡ್ರಿ ಶಿವಾ, ಸಾವ್ಕಾರ ಸೋಮಣ್ಣನವರು ಬಡವರ ಬೆಳಕಿನಾಗ ತಮ್ಮ ಅರಮನೀಗಿ ಹೋದರು. ಅಲ್ಲಿ ಅವರ ಮಾತೋಶ್ರೀ ಅವರು ಸೊಸೀ ಬಂದಳಂತ ಖುಶಿಯಾಗಿ ಎದ್ದ ಬಂದರ ದೇಶದಾಗ ಹೆಸರಾದ ದಾಸಿ ಬಂದಿದ್ದಳು! ಆಕೀನ್ನ ಕಂಡು ಮಾತೋಶ್ರೀಯವರು ಹೇಸಿಕೊಂಡ ಹೇಳಿದರು : ಊರಿಗಿ ದೊಡ್ಡೋನು ಕೇರಿಗಿ ದೊಡ್ಡೋನು ಇಂಥಾ ಸಣ್ಣ ಕೆಲಸಾ ಮಾಡ್ತಾರೇನೋ ಮಗನೆ ತಕ್ಕಂಥ ಮಡದೀ ಬಿಟ್ಟು ಇದೆಲ್ಲೀ ಬೆಡಗೀನ ತಂದ್ಯೊ ಮಗನೆ? ಈ ವಯ್ಯಾರಿ ಫಿಲಫಿಲನೆ ಬರುವಾಗ ಸಾಲುದೀಪಗಳ್ಯಾರ್ಯಾವು, ಈಕಿನ್ಯಾಕ ಕರತಂದ್ಯೋ ಮಗನೆ? ನಮ್ಮ ಮನ್ಯಾಗ ಈಕಿ ಬ್ಯಾಡಂತ ಹೇಳಿ ತಮ್ಮ ಅರಮನಿ ಬಾಗಿಲಾ ಮುಚ್ಚಿಕೊಂಡರು. ಆಗ ನಮ್ಮ ಕಥಾನಾಯಕರು ದಾಸರ ತಂಡವನ್ನ ಒಯ್ದು ತೋಟದಲ್ಲಿರುವಂಥಾ ಇನ್ನೊಂದು ಅರಮನೆಯಲ್ಲಿಟ್ಟರು.

ಮೇಳ : ತೋಟದ ಮನೆಗೊಯ್ದು ಇಟ್ಟರೋ"
ಈ ದಾಸರನ್ನ
ತೋಟದ ಮನೆಯಲ್ಲಿ ಇಟ್ಟರೋ ||
(ಹಾಡುತ್ತ ಮೇಳ ಸರಿಯುತ್ತದೆ. ತೋಟದ ಮನೆಯಲ್ಲಿಯ ಒಂದು ದೊಡ್ಡ ಹಾಲು, ಸುಸಜ್ಜಿತವಾದುದು, ಕಾಣಿಸುತ್ತದೆ. ದಾಸರ ತಂಡದವರು ಊಟ ಮಾಡಿ ಒಬ್ಬೊಬ್ಬರೇ ಹಾಲಿಗೆ ಬರತ್ತಾರೆ. ದಾಸ ಬಂದು, ಅಲ್ಲಿದ್ದ ಎಲ್ಲಾ ಕುರ್ಚಿಗಳ ಮೇಲೆ

ಒಂದೊಂದು ಬಾರಿ ಕೂತು ಮತ್ತೊಂದಕ್ಕೆ ಹಾರುತ್ತಿದ್ದಾನೆ. ಅವನ ಹೆಂಡತಿ ಸಾವಂತ್ರೀಬಾಯಿ ಬಂದು ಇವನಾಟ ನೋಡುತ್ತಾ ನಿಲ್ಲುತ್ತಾಳೆ.)

ಸಾವಂತ್ರಿ : ಕುರ್ಚೀದಿಂದ ಕುರ್ಚೀಕ ಅದ್ಯಾಕ ಹಾಂಗ ಹಾರತೀಯೋ ಕೋತಿಮೂಳಾ?

ದಾಸ : ಸಾವಂತ್ರೀಬಾಯಿ, ಊಟಕ್ಕ ಹೋಗೋ ಮುನ್ನ ಒಂದ ಕುರ್ಚೀದಾಗ ಕುಂತಿದ್ದೆ,ಅದ್ಯಾವುದೂ ಅಂತ ತಿಳೀವೊಲ್ದು. ಅಂಥಾಂಗ ನಾ ಎದರಾಗ ಕುಂತಿದ್ದೆ? (ಇನ್ನೊಂದು ಕುರ್ಚೀಗೆ ಹಾರಿ, ಕೂತು ಕುಂಡಿಯಿಂದ ತಿಕ್ಕಿ ನೋಡುವನು.)

ಹಾ! ಇದ ಽ ಆಹಾಹಾ ಏ ಕುರ್ಚಿ! ಏನ ಊಟ! ಸಾವಂತ್ರೀಬಾಯಿ,

(ಸಿಗರೇಟು ತೆಗೆಯುತ್ತ)

ನನ್ನನ್ನ ಮಾಡಿಕೊಂಡದ್ದರಿಂದ ಏನೇನ ಕಂಡಿ! ನನ್ನಲ್ಲದ ಽ ಇನ್ಯಾರನ್ನಾದರೂ ಮದಿವ್ಯಾಗಿದ್ದರ ಇಂಥಾ ಅರಮನ್ಯಾಗ ಕಾಲ ಹಾಕಾಕಾದರೂ ಆಗಿತಿತ್ತ? ನಿನಗಿಂಥಾ ಊಟ ಸಿಗತಿತ್ತ?, ಅದೂ ಹೊಟ್ಟೆತುಂಬ!

ಸಾವಂತ್ರಿ : ಸಿಗರೇಟು ಎಲ್ಲಿ ಕದ್ದಿ?

ದಾಸ : ಇಂಥಾ ದೊಡ್ಡ ಮನೀಗಿ ಬಂದರೂ ನಿನ್ನ ಸಣ್ಣ ಬುದ್ಧೀ ಬಿಡಬಾರದ?

ಸಾವಂತ್ರಿ : ಸಿಗರೇಟ ಎಲ್ಲಿ ಕದ್ದಿ ಅಂದರ?

ದಾಸ : ಸಾವ್ಕಾರ ಕೊಟ್ಟರು.

ಸಾವಂತ್ರಿ : ಕೊಟ್ಟರ ಒಂದ ಕೊಟ್ಟಿರತಾರ. ಇಡೀ ಪಾಕೀಟ ತಂದೀದಿ?

ದಾಸ : ಸಾವಂತ್ರೀಬಾಯೀ ನಾ ಕದ್ದಿಲ್ಲ. ನಮ್ಮಂಥಾ ಕಲಾವಿದರು ಒಂದು ಸಿಗರೇಟ ಪಾಕೀಟ ಕದ್ದರೂ ತಪ್ಪಿಲ್ಲ. ನಿನಗೂ ಗೊತ್ತೈತಿ; ನನಗೀಗ ದಿನಕ್ಕ ನೂರೂಪಾಯಿ ವರಮಾನ.

ಸಾವಂತ್ರಿ : ನನಗೊಂದ ಕೊಡು.

ದಾಸ : ಬೀಡೀ ತಗೊ.
(ಸಿಗರೇಟು ಪಾಕೀಟು ಮುಚ್ಚಿಕೊಂಡು ಜೇಬಿನಿಂದ ಬೀಡಿ ತೆಗೆದುಕೊಡುವನು.)

ಸಾವಂತ್ರಿ : ನೂರ್ರೂಪಾಯದಾಗ ನನಗೆಷ್ಟು? ನಾಗ್ಯಾಗೆಷ್ಟು? ಶಾರಿಗೆಷ್ಟು?

ದಾಸ : ನಿಂದಷ್ಟS ಮಾತಾಡು. ದಿನಕ್ಕ ಹತ್ತುರೂಪಾಯಿ, ಒಂದ ಕಟ್ಟ ಬೀಡಿ, ಬೇಕಾದರ ಆ ನಿನ್ನ ಮಿಂಡ ಇದ್ದಾನಲ್ಲಾ, ಅವನಿಗೊಂದ ಹತ್ತ ಕೊಡೋಣಂತ. ದಿನಕ್ಕ ಹತ್ತಂದರ ಭಾಳಾತು. ನಾಟಕದ ಕಂಪನ್ಯಾಗೂ ಇಷ್ಟ ಕೊಡೋದಿಲ್ಲ.

ಸಾವಂತ್ರಿ : ದಿನಕ್ಕ ಹತ್ತಂದರ ನನಗ ಆಗೋದಿಲ್ಲಾ ಅಂದೆ.

ದಾಸ : ಏನ ದಿನಮಾನಪ! ಕೂತ ಉಣ್ಣಾಕ ದಿನಾ ಹತ್ತುರೂಪಾಯಿ ಸಾಲದಿಲ್ಲಂತ! ಸಾವಂತ್ರೀಬಾಯೀ, ಸಾವ್ಕಾರ ನಿನ್ನನ್ನಿಲ್ಲಿ ಕರಸಿದ್ದು ನಿನ್ನ ಆಟ ನೋಡಿ ಜೊಲ್ಲ ಸುರಸಾಕಲ್ಲ, ಸಂಗೀತಾ, ಅರ್ಥಾತ್ ನಿನ್ನ ಮಗಳ ಮೈ ಹಾಸಿಕೊಳ್ಳಾಕ!

ಸಾವಂತ್ರಿ : ನನಗ ಹತ್ತು, ನಾಗ್ಯಾಗ ಹತ್ತುಕೊಟ್ಟ ಉಳದದ್ದ ನೀ ಇಟ್ಟಕೊಳ್ಳಾವಾ?

ದಾಸ : ಈ ಮ್ಯಾಳದ ಯಜಮಾನ ಯಾರು? ನಾನು!

ಸಾವಂತ್ರಿ : ಹಾಂಗಿದ್ದರ ನಾಗ್ಯಾಗ ನೀನ ಹೇಳಿಕೊ.

ದಾಸ : (ಅಣಗಿಸುತ್ತ)
'ಹಾಂಗಿದ್ದರ ನಾಗ್ಯಾಗ ನೀನS ಹೇಳಿಕೊ'- ಅಂದರ? ಏಯ್ ಯಾವೋನS ನಿನ್ನ ಗಂಡ? ಯಾವೋನS ಸಂಗೋತಾ ತಂದಿ?

ಸಾವಂತ್ರಿ : ಕಾಯ್ದೇ ಪ್ರಕಾರ ನೀನS ಖರೆ. ಆದರ ನಾಗ್ಯಾ ನಿನ್ನ ನಡ ಮುರಿಯೋವಾಗ ಇದ್ಯಾವುದೂ ಅಡ್ಡ ಬರೋದಿಲ್ಲ.

ದಾಸ : ನೋಡ ಸಾವಂತ್ರೀಬಾಯಿ, ನಿನಗ ಕಿವಿ ಅದಾವ, ಮತ್ತ ನಾ ಹೇಳಿದ್ದ ನಿನಗ ಕೇಳಸಾಕS ಬೇಕು, ಕೇಳು : ನಿಂದೂ ಆ ನಿನ್ನ ಮಿಂಡಂದೂ ಆಟ ಇಂದಿಗಿ ಅನೇಕ ದಿನದಿಂದ ಕಣ್ಣಮುಚ್ಚಿ ನೋಡ್ತಾ ಬಂದೀನಿ. ಏನೊ, ಈ ಮ್ಯಾಳ ನಾಕ ದಿನ ಉಳೀಲಿ, ಕಲಾ ಸೇವಾ ಮಾಡಲಿ ಅಂತ, ಹಾಸಿಗ್ಯಾಗಿನ ಹೇಂತೀನ ಕೊಟ್ಟೆ. ಇನ್ನೇನ ಕೊಡಬೇಕಂತ ಅವಗ?

ಸಾವಂತ್ರಿ : ಶಾರಿಗೆಷ್ಟು?

ದಾಸ : ಶಾರಿ ಅಲ್ಲ, ಸಂಗೀತಾ ಅನ್ನು. ಆಕಿ ನನ್ನ ಮಗಳು, ನಾ ನೋಡಿಕೊಳ್ತೀನಿ. ಹೋಗಿ ಸಂಗೀತಾಗ ತಲಿ ಬಾಚಿಕೊ ಅಂತ ಹೇಳು, ಸಾವ್ಕಾರ ಬರೋ ಯಾಳೇ ಆತು.

ಸಾವಂತ್ರಿ : ನೀನS ಹೇಳಿಕೊ, ಅಕಾ ಬಂದಳು.
(ಶಾರಿ ಬರುತ್ತಾಳೆ. ದಾಸ ಸಾವಂತ್ರೀಬಾಯಿಯ ಕಿವಿಯಲ್ಲಿ)

ದಾಸ : ಮರೀಬ್ಯಾಡ, ನಾ ನಿನ್ನ ಗಂಡ. ನಿನ್ನ ಬಿಟ್ಟ ನಾ ಎಲ್ಲಿ ಓಡಿ ಹೋಗೋದಿಲ್ಲ. ಬಂದದ್ದರಾಗ ಹಂಚಿಕೊಳ್ಳೋಣಂತ. ಹಾ ಸಂಗೀತಾ, ಲಗು ತಯರಾಗಿರಿ. (ಹೋಗುವನು.)

ಸಾವಂತ್ರಿ : ಬಾ ಮಗಳS, ನನ್ನ ಕಣ್ಣ ನಂಬಾಕS ಆಗವೊಲ್ದು. ಕಣ್ಣ ಮುಚ್ಚಿ ಕಣ್ಣ ತಗ್ಯೂದರಾಗ ಎಲ್ಲಿಂದ ಎಲ್ಲಿಗಿ ಬಂದಿವಿ! ನಶೀಬಂದರ ಹಿಂಗS. ಇದ ಹುಲಂಡ್ಯಾಗ ಸಾವ್ಕಾರಗ ಹೇಳಿ ನನಗೊಂದ ಸೀರೀ ಕೊಡಸಬಾರದ?

ಶಾರಿ : ಸಾವ್ಕಾರಗ ಯಾಕ, ಅಪ್ಪಗ ಹೇಳಲ್ಲ. ದಿನಾ ನೂರ್ರೂಪಾಯಿ ತಗೋತಾನ.

ಸಾವಂತ್ರಿ : ಅದಕ್ಕS ನಿನಗ ಬುದ್ಧಿ ಕಮ್ಮಿ ಅನ್ನೋದು. ದಿನಕ್ಕ ನಿನಗೆಷ್ಟ ಕೊಡತಾನಂತ?

ಶಾರಿ : ನನಗ್ಯಾಕ ಕೊಡತಾನ?

ಸಾವಂತ್ರಿ : ಎಂಥಾ ಹುಚ್ಚಿ! ದಿನಾ ನಮಗ ಹತ್ತತ್ತ ಕೊಟ್ಟ ಬಾಕೀದೆಲ್ಲಾ ತಾನ ಇಟ್ಟಕೊಳ್ತಾನಂತ. ನೋಡಿಕೊಂಡ ಗಪ್ಪS ಇರತಿ?

ಶಾರಿ : ನನಗ ರೊಕ್ಕದ ಮಾತ ತಿಳಿಯಾಣೆಲ್ಲವಾ.

ಸಾವಂತ್ರಿ : ತಿಳಿಯಾಣೆಲ್ಲಂದರ ಹೆಂಗ? ಸಾವ್ಕಾರ ರೊಕ್ಕ ಕೊಡೂದS ನಿನ್ನ ಸಲುವಾಗಿ.

ಶಾರಿ : ನನ್ನ ಸಲುವಾಗಿ ಯಾಕ ಕೊಡತಾರ? ಎಲ್ಲಾರು ಆಟ ಮಾಡತೀವಿ, ಎಲ್ಲಾರಿಗೂ ಕೊಡತಾರ.

ಸಾವಂತ್ರಿ : ಇಂದ ಎಷ್ಟ ಚಂದ ಕಾಣ್ತೇಯೇ ಸಂಗೀತಾ, ಥೇಟ ಸಿನಿಮಾದಾಗಿನ ಗೊಂಬೀ ಹಾಂಗS ಕಾಣ್ತಿ ನೋಡು.

ಶಾರಿ : ಸಂಗೀತಾ? ನಮಗ ಬ್ಯಾರೇ ಹೆಸರಲೆ ಕರೀಬ್ಯಾಡವಾ. ನಿನಗೂ ಸಾವ್ಕಾರನ್ಹಾಂಗ ಹುಚ್ಚ ಹತ್ತಿತೇನ?

ಸಾವಂತ್ರಿ : ನಿನಮ್ಯಾಲ ಇಂದೆಷ್ಟು ಅಕ್ಕರತಿ ಬರಾಕ ಹತ್ತೇತಂದರ, ಹಿಡಕೊಂಡ ಲಟಲಟ ಮುದ್ದು ಕೊಡೋ ಹಾಂಗ ಆಗತೈತಿ, ಬಾ ಒಂದ ಮುದ್ದ ಕೊಡತೇನ.

ಶಾರಿ : ತಗಿ ತಗಿ ನಮಗ, ಇಂಥಾ ನಾಟಕ ಸರಿ ಬರಾಣಿಲ್ಲ.

ಸಾವಂತ್ರಿ : (ತಬ್ಬಿಕೊಂಡು) ನನಗೊಂಬೇ, ಗೊಂಬೇ!

ಶಾರಿ : ಬಿಡS ಎವ್ವಾ, ತಗಿ ನಾ ಇನ್ನS ಸೀರೀ ಉಟ್ಟ ತಯಾರಾಗಬೇಕು.

ಸಾವಂತ್ರಿ : ಆದೀಯಂತ ಬಾ. ಮೊದಲನೇ ರಾತ್ರಿ ತಾಯಾದಾಕಿ ಮಗಳಿಗಿ ಬುದ್ದಿ ರೀತಿ ಹೇಳೋದಿರತೈತಿ.

ಶಾರಿ : ಮೊದಲನೇ ರಾತ್ರಿ ಅನ್ನಾಕ ನಂದೇನ ಮದಿವ್ಯಾಗೇತಿ?

ಸಾವಂತ್ರಿ : ನಮ್ಮಂಥವರಿಗಿ ಮದಿವ್ಯಾದರೂ ಅಷ್ಟS, ಆಗದಿದ್ದರೂ ಅಷ್ಟ. ನನ್ನS ನೋಡಲ್ಲ, ಮದಿವ್ಯಾಗೇ ಎಷ್ಟಮಂದಿ ಗಂಡಸರನ್ನ ನಿಭಾಯಿಸಿದೆ. ಲೋಕಾನೋಡೇನಂತ ಅನುಭೋಗದಿಂದ ಹೇಳ್ತಿನವಾ : ಗಂಡಸರ ಸೊಭಾವ ನಿನಗ ಗೊತ್ತS ಇಲ್ಲ. ಭಾಳ ಚಂಚಲ ಮನಸ್ಸು. ಅವರಿಗೆ ಒಂದ ಮಗ್ಗಲಾ ತೋರಿಸಿದರ ಇನ್ನೊಂದ ಮಗ್ಗಲಾ ತೋರಿಸಬಾರದು. ಮದಿವೀ ಹೇಂತಿ ಆದರ ಅದೊಂದ ನಮೂನಿ. ನಮ್ಮಂಥ ಅಡಬಿಟ್ಟೇವು ಇರ್ತೀವಲ್ಲ, ನಿದ್ದ್ಯಾಗೂ ಎಚ್ಚರ ಇರಬೇಕು. ಅವರ ಮೈ ಯಾವತ್ತೂ ನಿನಗಾಗಿ ಹಸಿದಿರೋ ಹಾಂಗ ನೋಡಿಕೋಬೇಕು. ಒಮ್ಮಿ ಅವರ ಹೊಟ್ಟಿ ತುಂಬಿತೋ, ಎಂಜಲೆಲಿ ಹಾಂಗ ಬಿಸಾಡಿ ಹೋಗತಾರ. ಒಂದಿಲ್ಲೊಂದ ದಿನ ಬಿಸಾಡವರS ಅಂತಿಟ್ಟಕ. ಅದಕ್ಕೂ ತಯಾರಿರಬೇಕು. ಮಗಳS. ಅದಕ್ಕS ದಿನಾ ನಿನ್ನ ಕಣ್ಣು ಅವರ ಮೋತೀ ಮ್ಯಾಲಿರಬೇಕು, ಕೈ ಕಿಸೇದಾಗ ಇರಬೇಕು. ಶಾಣೇತನ ಅಂದರ ಅದು.
(ಮೇಲಿನ ಮಾತು ನಡೆದಾಗ ಶಾರಿ ಆಘಾತ ಹೊಂದಿದವಳಾಗುತ್ತ ಭಯಗೊಳ್ಳುತ್ತಾಳೆ. ಸಾವಂತ್ರಿಗೆ ಇದ್ಯಾವುದರ ಕಡೆ ಗಮನವಿಲ್ಲ.)

ಶಾರಿ : ನಾವಿಲ್ಲಿ ಬಯಲಾಟ ಮಾಡಾಕ ಬಂದಿದೀವ? ಇಲ್ಲಾ ಸೂಳಿತನ ಮಾಡಾಕ ಬಂದಿದೀವ?

ಸಾವಂತ್ರಿ : ಎರಡೂ ಮಾಡು, ಯಾರ ಬ್ಯಾಡಂತಾರ? ಸಿಕ್ಕಾನ ಬಾ ಅಂತ ಮೊದಲನೇ ರಾತ್ರೀನS ಅವನ ಮ್ಯಾಲ ಹತ್ತಬ್ಯಾಡ.

ಶಾರಿ : ನಾ ಅವನ ಸೂಳಿ ಆಗಬೇಕ?

ಸಾವಂತ್ರಿ : ಅಂಯ್ ಶಿವನ! ಇನ್ನೇನ ನಾ ಆಗಬೇಕ? ನಿನ್ನ ಮ್ಯಾಲ ಮನಸ್ಸ ಮಾಡ್ಯಾನ, ನಿನ್ನ ನಶೀಬಂತ ತಿಳಕೊ. ಎಷ್ಟ ದಿಲ್‍ದಾರಿದ್ದಾನ! ಇಂದ ರಾತ್ರಿ ಆ ಸಾವ್ಕಾರಗ ಹೇಳಿ ಒಂದ ಸೀರೀ ಕೊಡಸು. ಈ ಹರಕ ಪಡಿಕ್ಯಾಗಿದ್ದರ ಆ ನಾಗ್ಯಾ ನನ್ನ ಕಡೆ ನೋಡೂದ ಇಲ್ಲ. ಬ್ಯಾಡಂದರ ಹಿಂಗ ಮಾಡು : ಹೆಂಗೂ ನಿನಗ ಇಂದೊಂದು ಸೀರೀ ಕೊಡತಾನಲ್ಲ, ಅದನ್ನ ನನಗ ಕೊಡು. ನೀ ಬ್ಯಾರೇ ಇನ್ನೊಂದ ಈಸಿಕೊ. ಗಾಳಿ ಬೀಸಿದಾಗ ಽ ತೂರಿಕೋಬೇಕು. ಮಗಳ ಽ, ಮೈಯಾಗಿನ ನೆಣ ಆರೋ ಮುನ್ನ ಗುಂಜಿ ತೂಕ ಬಂಗಾರ ಮಾಡಿಕೊ.

ಶಾರಿ : ನಾ ಸೂಳಿ ಆಗಬೇಕ?

ಸಾವಂತ್ರಿ : ಅಯ್ ಹೊಯ್ಕ! ದಾಸರ ಕುಲದಾಗ ಸೂಳಿ ಅಂದರೂ ಒಂದ ಽ, ಗರತಿ ಅಂದರೂ ಒಂದ ಽ. ಇಂಥಾವ ಸಿಕ್ಕಾನಂತ ಕುಣಿಯೋದ ಬಿಟ್ಟೇದಿ, 'ಸೂಳ್ಯಾಗಬೇಕ, ಸೂಳ್ಯಾಗಬೇಕ?' ಅಂತ ಕೇಳಿಕೊಂಡ ಕುಂತೀದಿ! ಇಂಥಾ ಸಾವ್ಕಾರ ನಿನಗ ಸಿಗದ ಽ ನನಗ ಸಿಕ್ಕಿದ್ದರ ತೋರಸ್ತಿದ್ದೆ.
(ದಾಸ ಬರುವನು)

ದಾಸ : ಸಾವಂತ್ರೀಬಾಯಿ, ಸಾವ್ಕಾರ ಬಂದಾರ, ಮಾತಾಡಬೇಕಂತ ಬಾ, ಸಂಗೀತಾ ಇನ್ನೂ ಶಿಂಗಾರಾಗಲಿಲ್ಲೇನು? ಲಗು ಆಗು.

ಸಾವಂತ್ರಿ : ಬರ್ತೀನೆವ್ವಾ. ಸೀರೀ ಮರೀಬ್ಯಾಡ, ಎಷ್ಟಂದರೂ ನಾ ನಿನ್ನ ಹಡದವ್ವ ನೋಡು. ಬರ್ತೀನ್ನಡಿಯೋ ದಾಸ....
(ದಾಸ ಹೋಗುವನು)

ದಿನಾ ನೂರ್ರೂಪಾಯಿ ಕೊಡ್ತಾರಲ್ಲ ಸಾವ್ಕಾರ್ರು, ಅವನ್ನ ನೀನ ಽ ಈಸಿಕೊ. ದಾಸನ ಕೈಯಾಗ ಕೊಡಬ್ಯಾಡ. ಬೇಕಂದರ ನನ್ನ ಕೈಯಾಗ ಕೊಡು, ನಾ ಇಟಕೊಂಡಿರತೀನಿ.

ಶಾರಿ : ಮೊದಲಿಲ್ಲಿಂದ ಹೊಂಟ್ಹೋಗು ಅಂದೆ.

ಸಾವಂತ್ರಿ : ಅಯ್ ಶಿವನ! ಬೇಕಾದಾಗ ನಿನಗ ಽ ತಿರಿಗಿ ಕೊಡ್ತೀನೆವ್ವಾ. ದಾಸನ್ಹಾಂಗ ನಾ ಬೇಕಾಬಿಟ್ಟಿ ಖರ್ಚಿಕಳ? ಇದನ್ನ ಬೇಕಾದರ ನಾಳಿ ಮಾತಾಡೋಣಂತ. ಸೀರೀ ಮರೀಬ್ಯಾಡ. ನನ್ನ ಟ್ರಂಕಿನಾಗ ನಾರೂ ಎಣ್ಣಿ ಐತಿ, ಹಚ್ಚಿಕೊ.
(ಸಾವಂತ್ರಿ ಹೋಗುವಳು. ಆಘಾತ ಹೊಂದಿದ ಶಾರಿ ಏನೂ ಮಾಡಲೂ ತೋಚದೆ ಹಾಗೇ ನಿಂತಿರುವಳು. ಮೇಳ ಹಾಡುತ್ತ ಬರುವದು.)

ಮೇಳ : ನೀನು ನಕ್ಕರು ಅತ್ತರೂ
ದನಿನ ಬಂತು ಗಂಟಲಿಗೆ
ಬಾಯಿಗೆ | ಬಂತು ನಾಲಿsಗೆ |
ಹಸಿರು ಆಡಿತು ಹಾಳು ಸುರಿಯುವ
ಉಸಿಕೆನೆದೆಯೊಳಗೆ | ಸಂಗೀತಾ||

ದೊಡ್ಡದೇವರ ಹಾಡ ಹೇಳಿದಿ ಗುಟ್ಟ ತಿಳಿದಾಕಿ
ಬಂಡೆಯ | ಗುಟ್ಟ ಬಲ್ಲಾಕಿ |
ಸುಡುವ ಬೆಂಕಿಯ ಕುಡಿದು
ಹೂವಿನ ನಗಿಯ ನಕ್ಕಾಕಿ | ಸಂಗೀತಾ||

ನಮ್ಮ ಬಿಟ್ಟಿ ದೂರ ಹೊಂಟಿ
ಹಾಡುವೆವು ಹೆಂಗ
ನಾವು | ಹಾಡುವೆವು ಹೆಂಗ |

ನಾಲಿಗಿಲ್ಲದ ಗಂಟಿ ನಾದ
ಮಾಡುವುದು ಹೆಂಗ | ಸಂಗೀತಾ ||

ಹಿಮ್ಮೇಳ ೧ : ಕೇಳ್ರೆಪೋ ಕೇಳ್ರಿ. ಹರಾಜೈತಿ ಹರಾಜು! ನೀವು ಹಿಂದ ಕಂಡಿಲ್ಲ ಮುಂದ ಕಾಣಾನಿಲ್ಲ, ಅಂಥಾ ವಸ್ತು. ತಪಸ್ಸ ಮಾಡಿದರೂ ಸಿಕ್ಕಲಾರದಂಥಾ ಅಪರೂಪದ ವಸ್ತು ಹರಾಜಿಗೈತಿ! ಬೇಕಾದವರು, ಬ್ಯಾಡಾದವರು, ನೋಡವರು, ಕೊಂಬವರು-ಎಲ್ಲಾರೂ ಬರ್ರೆಪೋ ಬರ್ರಿ.

ಹಿಮ್ಮೇಳ ೨ : ಏನಪಾ ಅದೇನ ಹರಾಜಿಗೈತಿ? ದನಾನೋ ಮನೀನೊ?

ಹಿಮ್ಮೇಳ ೧ : ದನಾ ಆದರ ನೂರು ಮಾತು. ಮನಿ ಆದರ ಸಾವಿರದ ಮಾತು. ಇಕಾ ನೋಡಪಾ....
(ಆಘಾತದಲ್ಲಿ ಹಾಗೇ ನಿಂತ ಶಾರಿಯನ್ನು ತೋರಿಸಿ)

ಬೇಕಂದರ ಕುಣೀತಾಳ, ಬ್ಯಾಡಂದರ ಹಾಸಿಗ್ಯಾಗತಾಳ, ಸೋಳಾ ವರ್ಷ, ಬತ್ತೀಸ ಲಕ್ಷಣ. ಹತ್ತ ವರ್ಷ ಗ್ಯಾರಂಟಿ. ರಿಪೇರಿ ಚಾರ್ಜಿಲ್ಲ ಬೇಡ್ರೆಪೋ ಬೇಡ್ರಿ...

ಹಿಮ್ಮೇಳ ೨ : ನೂರ್ರೂಪಾಯಿ.
(ಈ ಮಧ್ಯೆ ನಾಯೀಮಗ ಬಂದು ಬೆರಗಿನಿಂದ ಅವಳನ್ನೇ ನೋಡುತ್ತ ಪ್ರದಕ್ಷಿಸುತ್ತಾನೆ)

ಹಿಮ್ಮೇಳ ೧ : ಯಾವನಪ ಇವನು ನೂರ್ರೂಪಾಯಿಗಿ ಕೇಳತಾನ! ಇದೇನ ಕುರಿ ಏನಲೆ? ನೋಡೋ ನೋಡೊ ಸ್ವರ್ಗದ ರಂಭಾ ಊರ್ವಶಿ ಮೇನಕಾ ಇವರ್ನೆಲ್ಲಾ ಈಕೀ ಮುಂದ ನಿವಾಳಿಸಿ ಒಗೀಬೇಕು. ಮೂಗಿಗೆ ಮುನ್ನೂರು, ಕಣ್ಣಿಗಿ ನಾನ್ನೂರು, ಮೋತಿಗೆ ಹತ್ತಾರ ನೂರು, ಎದಿಗಿ ಎಂಟು ನೂರು, ಸೊಂಟಕ ಸಾವಿರ..... ಹಿಂಗ ಬರೀ ಒಂದೊಂದಕS ಲೆಕ್ಕಾ ಹಾಕಿದರೂ ಸಾವಿರಾರ ರೂಪಾಯಿ ಆಗತಾವ. ಈ ಹುಚ್ಚ ನೂರಂತಾನ, ಹೋಗಲೇ ಹೋಗು.

ಶಾರಿ : (ಕಿರಿಚಿ) ನಾ ಸೂಳಿ ಆಗೋದಿಲ್ಲ.!

ಕಥೆಗಾರ : ಏನಂದಿವಾ ತಾಯಿ?

ಶಾರಿ : ನಾ ಸೂಳಿ ಆಗೋದಿಲ್ಲಾ ಅಂದೆ!

ಕಥೆಗಾರ : ಕೇಳಿದೇನಪಾ ಕಂದ?

ಹಿಮ್ಮೇಳ : (ಥೂ ಹಚ್ಯಾ ಎನ್ನುತ್ತ ನಾಯೀಮಗನನ್ನು ಓಡಿಸಿ)

ಏನ ಗುರುವೆ?

ಕಥೆಗಾರ : ಸಂಗೀತಾ ಸೂಳಿ ಆಗೋದಿಲ್ಲಂತ!
(ಮೇಳದವರು ತಂತಮ್ಮಲ್ಲೇ ಮಾತಾಡಿಕೊಂಡು ಮೆಚ್ಚುತ್ತಾರೆ. ಕೂಡಲೇ ಅವಳ ಸುತ್ತ ಹಾಡುತ್ತ ಕುಣಿಯುವರು.)

ಮೇಳ : ನೂರು ಬಾರಿ ಶರಣು ಬಂದೆವೇ
ಹೊ ತಾಯಿ ನಿನಗೆ
ಬಾಗೀ ಜೀ ಹಸಾದವೆಂದೆವೇ ||

ನಂಬಿದವರಿಗಿಂಬು ಕೊಡವ್ವಾ
ಹೊ ತಾಯಿ ನೀನು

ಮೀರಿದವರ ಮುರಿದು ಬಿಡವ್ವಾ ||
(ಹಾಡುತ್ತ ಮರೆಯಾಗುವರು. ಶಾರಿ ತಕ್ಷಣ ಅರಿವಿಗೆ ಬರುವಳು.)

ಶಾರಿ : ನಾಗಣ್ಣಾ, ನಾಗಣ್ಣಾ...
(ಗಡಿಬಿಡಿಯಿಂದ ತನ್ನ ಸಾಮಾನುಗಳನ್ನು ತಂದು ಟ್ರಂಕಿನಲ್ಲಿ ತುಂಬತೊಡಗುವಳು. ನಾಗಣ್ಣ ಬರುವನು.)

ನಾಗ : ಏನ ಶಾರೀ ?

ಶಾರಿ : ನಾ ಹೊಂಟೇನಿ, ಬೇಕಾದರ ನೀನೂ ಬಾ.

ನಾಗ : ಯಾಕ? ಯಾರೇನಾದರೂ ಅಂದರೇನು ?

ಶಾರಿ : ನಾ ಸೂಳಿ ಆಗಾಕ ಒಲ್ಲೆ ಅಂದೆ.

ನಾಗ : ಅಂದರ?

ಶಾರಿ : ದಿನಕ್ಕ ನೂರ್ರೂಪಾಯಿ ಕೊಟ್ಟು ಸಾವ್ಕಾರ ಇಲ್ಲಿಗಿ ಕರಿಸಿದ್ದು ನಮ್ಮ ಬಯಲಾಟ ನೋಡಾಕ ಅಲ್ಲಂತ. ನಾ ಸಾವ್ಕಾರನ ಸೂಳಿ ಆಗಬೇಕಂತ. ನಾ ಸೂಳಿ ಆಗಾಕ ತಯಾರಿಲ್ಲ. ಅದಕ್ಕ ಽ ಹೊಂಟೇನಿ.

ನಾಗ : ಹಂಗಂತ ಯಾರು ಹೇಳಿದರು ?

ಶಾರಿ : ನನ್ನ ಪೂಜ್ಯ ಮಾತೋಶ್ರೀಯವರು ಮತ್ತು ತೀರ್ಥರೂಪರು.

ನಾಗ : ಹಲ್ಕಟ್ಟ ಸೂಳೀಮಕ್ಕಳ್ನ ತಂದು...

ಶಾರಿ : ನೀ ಬರ್ತೀಯೋ ಇಲ್ಲೊ ?

ನಾಗ : ಅವರ ಕೈಕಾಲಾದರೂ ಮುರದ ಹೋಗೋಣ ತಡಿ.

ಶಾರಿ : ಬೇಕಾದರ ನೀ ಮುರದ ಆಮ್ಯಾಲ ಬಾ, ನಾ ಹೊಂಟೆ.

ನಾಗ : ಎಲ್ಲಿದ್ದಾನ ಆ ಬೋಳೀಮಗ? (ದಾಸನನ್ನು ಹುಡಿಕಿಕೊಂಡು ಹೋಗುವನು. ದಾಸ ಇನ್ನೊಂದು ಕಡೆಯಿಂದ ಬರುವನು.)

ದಾಸ : ಸಂಗೀತಾ ಏನ ನಡದೈತಿಲ್ಲಿ? ಸಾವಂತ್ರಿ ಏನಾದರು ಅಂದಗಿಂದಳೇನು? ಭಾಳ ಕೆಟ್ಟ ಹೆಂಗಸದು. ನೀನS ನೋಡೀಯಲ್ಲ – ಅವಳೂ ಅವಳ ಮಿಂಡನೂ ಕೂಡಿ ನನ್ನನ್ನ ಎಷ್ಟ ಕಾಡಸ್ತಾರಂತ? ನೀ ಮನಸ ಗಟ್ಟಿ ಮಾಡಬೇಕವಾ. ನೀ ಒಬ್ಬಾಕಿ ನನ್ನ ಕಡೆ ಇದ್ದರ ಇವರ್ನ ಕೋತೀಹಾಂಗ ಕುಣಿಸ್ಯಾಡತೀನಿ, ನೋಡತಿರು. ಇಂದ ರಾತ್ರಿ ನೀ ಸಾವ್ಕಾರಗ ಹೇಳಿಬಿಡು : ನಮ್ಮಪ್ಪ ಭಾಳ ಚೆಲೋ ಮನಶ. ಏನS ರೊಕ್ಕಾ ಕೊಡೋದಿದ್ದರೂ ಅವನ ಕೈಯಾಗS ಕೊಡ್ರೀ ಅಂತ. ತಿಳಿತಿಲ್ಲ?

ಶಾರಿ : ತಿಳೀತು.

ದಾಸ : ಮತ್ತ ಯಾಕ ಟ್ರಂಕ ತುಂಬಾಕ ಹತ್ತೀದಿ? ಯಾವುದಾದರೂ ಸೀರಿ ಸಿಗವೊಲ್ದೇನು? ಇನ್ನS ತಲೀ ಸುದ್ದಾ ಬಾಚಿಕೊಂಡಿಲ್ಲ. ಸಾವ್ಕಾರಾಗಲೇ ಬಂದ ಕುಂತಾರ?

ಶಾರಿ : (ತಾಳ್ಮೆಗೆಟ್ಟು) ನಾಗಣ್ಣ ನಿನ್ನ ಹುಡಿಕ್ಕೊಂಡ ಹೋಗ್ಯಾನ. ನಿನ್ನ ಕೈಕಾಲ ಸಮ ಉಳೀಬೇಕಾದರ ಇಲ್ಲಿಂದ ಮೊದಲು ತೊಲಗು.
(ಶಾರಿ ತನ್ನ ಸಾಮಾನು ರೆಡಿಮಾಡುವ ಅವಸರದಲ್ಲಿ ಏನೋ ಮರೆತದ್ದು ನೆನಪಾಗಿ ಅದನ್ನು ತರಲು ಒಳಗೆ ಹೋಗುವಳು. ಸಾವಂತ್ರಿ ಬರುವಳು.)

ದಾಸ : ಏನಾರ ಗಡಿಬಿಡಿ ನಡೀತೇನು? ನಾಗ್ಯಾ ನನ್ನ ಕಾಲ ಮುರೀತಾನಂತ?

ಸಾವಂತ್ರಿ : ನನಗ ಸಿಕ್ಕೇ ಇಲ್ಲ. ಹೇಳ್ಯಾಳೇನೋ ಬಣ್ಣಾ ಹಚ್ಚಿ....

ದಾಸ : ನನ್ನ ಮಗಳು, ನಾ ಬೇಕಾದ್ದ ಮಾಡತೀನಿ. ಕೇಳಾಕ ಇವ ಯಾರು? ಏ ಉಳ್ಳಾಗಡ್ಡಿ ನಿನಗೂ ಗೊತ್ತಿರಲಿ, -ನನ್ನಂಥಾ ಕಲಾವಿದರಿಗೆ ಸಿಟ್ಟು ಬಂದರ... ಆಮ್ಯಾಲ ತಡಿಯೋದ ಕಷ್ಟ. ಹೋಗಿ ನಿನ್ನ ಮಿಂಡಗ ಹೇಳು.

ಸಾವಂತ್ರಿ : ನೀ ಹೇಳು. ಹೆದರ್ತೀಯೇನು?

ದಾಸ : ನಾ ಹೆದರ್ತೀನಿ? ಏಯ್ ಈ ಮ್ಯಾಳದ ಯಜಮಾನ ಯಾರು? ಯಾರೂ ಅಂತೀನಿ.

ಸಾವಂತ್ರಿ : ನೀನS ಹೌಂದು. ಅದಕS ನೀನ ಹೇಳು, ಹುಷಾರಲೆ ಹೇಳಪ್ಪ. ಯಾಕಂದರ ಇಂದ ಹಸೀಖಾರ ತಿಂದಾನ.

ದಾಸ : ಹಸೀಖಾರ ಅಲ್ಲ ಹಸೀ ಕುರಿ ತಿಂದಿದ್ದರೂ ಹೇಳತೀನS. ನನಗೇನಂಜಿಕಿ? ಇಕಾ ಹೊಂಟೆ.
(ಧಿಮಾಕಿನಿಂದ ಬಾಗಿಲತನಕ ಹೋಗಿ ಅಲ್ಲಿ ಏನೋ ನೆನಪಾಗಿ ಮತ್ತೆ ಸಣ್ಣಗೆ ಕುರಿಯಾಗಿ ಹಿಂದಿರುಗುವನು.)

ದಾಸ : ಕುಡದ್ದಾನೇನು?

ಸಾವಂತ್ರಿ : ಪೂರಾ ಒಂದ ಬಾಟ್ಲಿ.

ದಾಸ : ಸಿಟ್ಟಿನಾಗಿದ್ದನೇನು?

ಸಾವಂತ್ರಿ : ಗಂಟಲದಾಗ ಗುರುಗುರು ಅಂತಿದ್ದ.

ದಾಸ : ರಾಮಾ ರಾಮಾ! ಹೋಗೀ ಹೋಗೀ ಹಾದೀ ಬೀದ್ಯಾಗಿನ ನೆರಳಿಗಿ ಅಂಜಬೇಕಾಯ್ತಲ್ಲ! ಎಷ್ಟ ದಿವಸದಿಂದ ಇವನಾಟಾ ನೋಡ್ತಾ ಇದ್ದೀನಿ...

ಸಾವಂತ್ರಿ : ಅಕಾ ಬಂದ, ಹೇಳಿಕೊ.
(ನಾಗ ಬಂದು ದಾಸನನ್ನು ನೋಡಿ ಹಲ್ಲು ಕಚ್ಚುತ್ತ ನಿಲ್ಲುವನು, ದಾಸ ಅಧೀರನಾಗಿ ಹೆಂಡತಿಯ ಹಿಂದೆ ಹೋಗಿ ನಿಂತು)

ದಾಸ : ಬಾ ನಾಗಣ್ಣಾ, ಏನೋ ಮಾತಾಡಬೇಕಿತ್ತು. ಹಂಗ್ಯಾಕ ಹಲ್ಲ ಕಚ್ಚತೀಯೋ, ಥಂಡಿ ಹತ್ತೇತೇನ? ಹೆ ಹೆ ಹೆ...

ನಾಗ : (ಕೋಪದಿಂದ) ಬಾ ಈ ಕಡೆ.

ದಾಸ : ಇಲ್ಲಿದ್ದೀನಿ, ಅದೇನ ಹೇಳಲ್ಲ. ನೋಡೊ, ಒಬ್ಬ ಕಲಾವಿದ ಇನ್ನೊಬ್ಬ ಕಲಾವಿದಗ ಕಿಮ್ಮತ್ತ ಕೊಡಬೇಕಪಾ, -ಕಾ ನಾ ಕೊಡ್ತಾ ಇದ್ದೀನ್ನೋಡು...

ನಾಗ : ಸಾವ್ಕಾರ ಯಾಕ ಬಂದಾನ?

ದಾಸ : ಸಾವ್ಕಾರ? ಹೌಂದಲ್ಲ? ಬಯಲಾಟ ನೋಡಾಕ. ಸಾವಂತ್ರೀ ಬಾಯಿ ನೀ ಹೇಳಿಲ್ಲೇನು? ದಿನಕ್ಕ ನೂರ್ರೂಪಾಯಿ ಕೊಡತಾರ. ನಿನಗೂ ಹತ್ತು ರೂಪಾಯಿ ಕೊಡತೀನಿ. ಸಾವಂತ್ರೀಬಾಯಿ ನೀ ಹೇಳು, ನಾ ಬರ್ತೀನಿ.

(ಎನ್ನುತ್ತ ಪಾರಾಗುವಷ್ಟರಲ್ಲಿ ನಾಗ ದಾಸನ ಕತ್ತಿನ ಅಂಗೀ ಹಿಡಿದು ಅಲುಗುತ್ತಾನೆ.)

ನಾಗ : ಖರೆ ಒದರ್ತೀಯೋ ?

ದಾಸ : (ಒದ್ದಾಡುತ್ತ)
ಛೇ ಛೇ ನಾಗಣ್ಣಾ ಸಾವ್ಕಾರ ಬಂದಗಿಂದಾರ ಬಿಡೊ. ನಾ ಸಿಟ್ಟಿಗೆದ್ದರ ಭಾಳ ಕೆಟ್ಟ ಮತ್ತ.
(ಸಾವಂತ್ರಿ ಬಿಡಿಸ ಹೋಗುವಳು.)

ಸಾವಂತ್ರಿ : ಏ ನಾಗ, ದೊಡ್ಡ ಸಾವ್ಕಾರ ಸಿಕ್ಕಾರ, ಮಗಳ ಮುಂದಿನ ಬಾಳ್ವೆ ನೋಡಬೇಕೊ ಬ್ಯಾಡೊ ? ಮೈಯಾಗ ಅಸರಂತ ನೆಣ ಇರತೈತಿ ? ನಾ ಎಲ್ಲಾ ನಿನಗ ಹೇಳ್ತೀನಿ, ಬಿಡವನ್ನ.

ದಾಸ : ನಾಗಣ್ಣಾ ನನಗೂ ಸಿಟ್ಟ ಬರತೈತಿ ಮತ್ತ, ಬಿಡೋ ಏ, ಅಯ್ಯೋ ಸಂಗೀತಾ... (ಶಾರಿ ಬರುವಳು. ಅದೇ ಸಮಯಕ್ಕೆ ಸರಿಯಾಗಿ ಸೋಮಣ್ಣ, ನಾಯೀಮಗ ಬರುವರು.)

ಸೋಮಣ್ಣ : ಏನು ಆಗಲೇ ಆಟ ಸುರು ಮಾಡಿದೀರಿ.

ದಾಸ : ಸಾವ್ಕಾರ್ರು ಬಂದರು, ಬಿಡೊ.
(ಬಿಡುವನು. ದಾಸ ಸಾವರಿಸಿಕೊಳ್ಳುವನು.)

ಡಾಕ್ಟರು ಸಿಟ್ಟಿಗೇಳಬ್ಯಾಡ ಅಂದಾರಂತ ಸುಮ್ಮಕಿದೀನಿ. ಇಲ್ಲದಿದ್ದರ...

ಸೋಮಣ್ಣ : ಇವ ಯಾರು ?

ದಾಸ : ನಮ್ಮ ಮ್ಯಾಳದಾಗ ಅದಾನ್ರಿ. ಸಾವ್ಕಾರ್ರಿಗಿ ನಮಸ್ಕಾರ ಮಾಡೊ.

ಸೋಮಣ್ಣ : ಜಗಳಾ ಯಾಕ ಮಾಡತಾನ ?

ಸಾವಂತ್ರಿ : ಥಂಡಿ ಹತ್ತಿದಾಗೊಮ್ಮಿ ಹಿಂಗS ಮಾಡತಾನ್ರಿ.
(ನಾಗ ಈಗ ನೇರವಾಗಿ ಸೋಮಣ್ಣನ ಎದುರಿಗೇ ಬರುವನು.)

ನಾಗ : ನಮ್ಮನ್ಯಾಕ ಕರತಂದರಿ ?

ಸೋಮಣ್ಣ : ಯಾಕ, ದಾಸ ಹೇಳಿಲ್ಲೇನು ?

ನಾಗ : ನಮ್ಮ ಹುಡುಗಿ ನಿಮ್ಮ ಸೂಳಿ ಆಗಬೇಕು, ಹೌಂದಲ್ಲ ?

ಸೋಮಣ್ಣ : ಹುಚ್ಚಗಿಚ್ಚ ಹತ್ತೇತೇನ್ಲೆ ? ದಿನಕ್ಕ ನೂರ್ರೂಪಾಯಿ ಕೊಡತೀನಿ ಪುಕ್ಕಟ ಅಲ್ಲ. (ತಕ್ಷಣ ನಾಗ ಸೋಮಣ್ಣನ ಮೇಲೆ ಏರಿ ಹೋಗಿ ಕತ್ತು ಹಿಡಿಯುವನು. ಸೋಮಣ್ಣ 'ಏನೊ ಏ ಏ ನಾಯೀಮಗನ' ಎನ್ನುತ್ತ ಬಿಡಿಸಿಕೊಳ್ಳಲು ಹೆಣಗುತ್ತಿರುವಂತೆ ನಾಯೀಮಗ ಹಾರಿ ನಾಗನಿಗೆ ಒಂದೇಟು ಬಿಗಿಯುವನು. ಅದು ತುಂಬ ಜೋರಾಗಿದ್ದುದರಿಂದ ನಾಗ ಹಾಗೇ ತತ್ತರಿಸಿ ಬೀಳುವನು. ಸೋಮಣ್ಣ ಸಾವರಿಸಿಕೊಂಡು ಏನೂ ಆಗಿಲ್ಲವೆಂಬಂತೆ ನಟಿಸುವನು. ತತ್ತರಿಸಿ ಬಿದ್ದ ನಾಗ ಮೆಲ್ಲನೆ ಎದ್ದು "ನಾ ಈ ಮ್ಯಾಳದಾಗ ಇರಾಣೆಲ್ಲ. ಇನ್ನ ಇಲ್ಲಿ ನಾ ಇರಾಣೆಲ್ಲ" ಎನ್ನುತ್ತ ಹೋಗಿ ಬಿಡುವನು. 'ನಾಗೂ ನಾಗೂ' ಎಂದು ಸಾವಂತ್ರಿ ಬೆನ್ನು ಹತ್ತುವಳು. ಇದನೆಲ್ಲ ಮೂಕಳಾಗಿ ನೋಡುತ್ತಿದ್ದ ಶಾರಿ ಎಲ್ಲವನ್ನು ತೀರ್ಮಾನಿಸಿದಂತೆ ಸೋಮಣ್ಣನ ಎದುರು ಬರುವಳು.)

ಶಾರಿ : ಸಾವ್ಕಾರ, ಇನ್ನ ವಿಚಾರ ಮಾಡಬೇಕಾದ್ದೇನೂ ಉಳಿದಿಲ್ಲ. ನಿಮ್ಮ ಸೂಳಿ ಆಗಾಕ ನಾ ತಯಾರಿಲ್ಲ. ನಾವು ದಾಸರು, ಬಡವರು. ನೀವೇನೋ ದೊಡ್ಡ ಕಲಾಪ್ರೇಮಿಗಳು ಅಂತ ಬಂದಿವಿ. ನೀವು ಖರೇನ ಽ ಕಲಾಪ್ರೇಮಿ ಆಗಿದ್ದರ ನಿಮ್ಮ ಮುಂದ ಹಗಲೀರಾತ್ರಿ ಕುಣೀತಿದ್ದೆ. ಆದರ ನಿಮ್ಮ ಗುಲಾಬೀ ಮಾತಿನ ಹಿಂದ ಮುಳ್ಳ ತುಂಬ್ಯಾವ. ನೀವೇನೋ ದೊಡ್ಡ ಶ್ರೀಮಂತರು. ಜಗತ್ತಿನಾಗ ಇದ್ದವರನ್ನೆಲ್ಲಾ ನಿಮ್ಮ ನೊಗಕ್ಕ ಹೂಡಬಲ್ಲಿರಿ. ಆದರ ನಾ ನಿಮ್ಮ ದನಾ ಆಗಾಕ ತಯಾರಿಲ್ಲ. ನಮ್ಮಪ್ಪಗ ಇಂದ ರೊಕ್ಕ ಕೊಟ್ಟೀರಲ್ಲಾ,-
(ಎನ್ನುತ್ತ ರಭಸದಿಂದ ದಾಸನ ಬಳಿಗೆ ಹೋಗುವಳು. ಇವೆಲ್ಲ ಅನಿರೀಕ್ಷಿತಗಳನ್ನು ಬೆರಗಿನಿಂದ ನೋಡುತ್ತ ನಿಂತ ಅವನ ಜೇಬಿನಲ್ಲಿ ಕೈ ಹಾಕಿ ನೂರರ ನೋಟು ಹೊರತೆಗೆದು ಸೋಮಣ್ಣನಿಗೆ ಕೊಡಹೋಗುವಳು. ಆತ ಸುಮ್ಮನೆ ನಿಲ್ಲುವನು. ಅವನ ಮೇಲೆ ಎಸೆದು ಹೊರಟಾಗ ಸೋಮಣ್ಣ ಎಲ್ಲರ ಗಮನ ಸೆಳೆಯುವಂತೆ ದೊಡ್ಡದಾಗಿ ನಗುವನು. ಶಾರಿ ತಿರುಗಿ ನಿಲ್ಲುವಳು.)

ಸೋಮಣ್ಣ : ನಾ ಅಂದರ ನಿಮ್ಮ ಆಟದಾಗಿನ ರಾಕ್ಷಸ ಅಂಬವರ್ಹಾಂಗ ಆಡ್ತೀಯಲ್ಲ ಸಂಗೀತಾ! ದುಡ್ಡು ಇದ್ದದ್ದರಿಂದ ನಾ ದೇವರಾಗಲಿಲ್ಲ. ಖರೆ. ಆದರ ಕೊನೇಪಕ್ಷ ಮನುಷ್ಯ ಅಂತೂ ಹೌದೊ ? ಮನುಷ್ಯ ಆಗಿ ನಿಮ್ಮ ಆಟ ಮೆಚ್ಚಿಕೊಂಡದ್ದೂ ತಪ್ಪೇನು ?

ಶಾರಿ : ನಿಮಗೂ ಮನಶೇರಂದರ ಹೆಂಗರಿ ಸಾವ್ಕಾರ್ರ ಽ ? ನಿಮ್ಮ ಕೈಯಾಗ ಒಂದ ಮಂತ್ರ ಐತಿ. ಬೇಕಾದ ಗಂಡಹೆಣ್ಣೆರಲಿ, ಅವರ ಹೊಟ್ಟೀಮ್ಯಾಲ ಹಿಂಗ ನೀವು ಮಂತ್ರ ಹಾಕಿದರ ಸಾಕು,-ಅವರೆಲ್ಲ ನಾಯಿಗಳಾಗತಾರ.

(ನಾಯೀಮಗನನ್ನು ತೋರಿಸಿ)

ಅವ ಹಸಿವಿನಿಂದ ನಿಮ್ಮ ನಾಯಿ ಆಗ್ಯಾನ. ನಾವೂ ಆದಿವಿ. ನಿಮ್ಮಂಥವರ ಕೈಯಿಂದ ಮಂತ್ರ ಹಾಕಿಸಿಕೊಳ್ಳುವವರು ನಾವು ಮನುಷ್ಯರು. ನೀವಲ್ಲರಿ.

ಸೋಮಣ್ಣ : ನಾ ಮನುಷ್ಯನೂ ಅಲ್ಲಂತೀಯೇನು ?

ಶಾರಿ : ಅಥವಾ ನಿಮ್ಮದ s ಬ್ಯಾರೇ ಜಾತಿ ಇದ್ದೀತು. ಅದಲ್ಲದಿದ್ದರೂ ನೀವು ಶ್ರೀಮಂತರಂತೂ ಹೌಂದ ? ನಮ್ಮಂಥಾ ಬಡವರಿಗೂ ನಿಮಗೂ ಯಾ ಊರ ಹಾದಿ ?

ಸೋಮಣ್ಣ : ಹುಚ್ಚಹುಡಿಗಿ, ನನ್ನನ್ನ ಭಾಳ ತಪ್ಪ ತಿಳಿಕೊಂಡೀದಿ ನೀನು. ಈ ದುಡ್ಡಿನಿಂದಾಗಿ ನಾ ನಿಮಗಿಂತ ಬ್ಯಾರೇ ಆಗಿದ್ದರ ಆ ದುಡ್ಡ ನನಗ ಬ್ಯಾಡ s ಬ್ಯಾಡ, ಇಕಾ ತಗೊಳ್ರಿ ಎಸೀತೀನಿ...
(ಎನ್ನುತ್ತ  ತನ್ನ ಬಳಿಯ ದುಡ್ಡನ್ನು ಎಸೆಯತೊಡಗುತ್ತಾನೆ. ಈ ಮೂಲಕ ಶಾರಿಗೆ ತನ್ನ ಧಾರಾಳತನ, ತ್ಯಾಗಗಳನ್ನು ಮನದಟ್ಟು ಮಾಡಿಕೊಡುವುದು ಅವನ ಉದ್ದೇಶವಾಗಿತ್ತು. ಆದರೆ ಅದಕ್ಕೆ ದಾಸ ಬಲಿಯಾಗುತ್ತಾನೆ. ಶಾರಿ ಇನ್ನೂ ಹೇಸಿಕೊಳ್ಳುತ್ತಾಳೆ. ದಾಸ ಆಸೆಬುರುಕತನದಿಂದ ಮಂಡೆಗಾಲೂರಿ ನೋಟುಗಳನ್ನು ಆರಿಸಿಕೊಳ್ಳತೊಡಗುವನು.)

ದಾಸ : ಛೇ ಛೇ, ಸಂಗೀತಾ, ಈಗಲಾದರೂ ತಿಳಕೊ ಸಾವ್ಕಾರ್ರು ಎಂಥಾ ದಿಲ್ ದಾರಂತ!

ಶಾರಿ : ಆ ರೊಕ್ಕಾ ಮುಟ್ಟಬ್ಯಾಡ ಅಂದೆ.

ದಾಸ : ಛೇಛೇ ಆರಿಸಿ ತಿರುಗಿ ಸಾವಕಾರ್ರಿಗೇ ಕೊಡತೀನಿ.
(ಸಾವಂತ್ರಿ ಓಡಿಬರುವಳು. 'ಅಯ್ ಶಿವನ!' ಎನ್ನುತ್ತ ಅವಳೂ ಹಣ ಆರಿಸಿಕೊಳ್ಳತೊಡಗುವಳು. ತಕ್ಷಣ ದಾಸ ರೇಗುವನು. ಇಬ್ಬರೂ ನಾಯಿಗಳ ಹಾಗೆ ವಿಕಾರವಾಗಿ ಎದುರಾಗುವರು.)

ಶಾರಿ : (ಕಿರುಚಿ) ಆ ಹಣ ಮುಟ್ಟಬ್ಯಾಡ್ರಿ ಅಂದೆ.

ಸಾವಂತ್ರಿ : ಏನಮಾತು ! ಬಡವರು ತಗೊಳ್ಲಿ ಅಂತ ಸಾವ್ಕಾರ್ರು ತೂರ್ಯಾರ. ತಗೋ ಬ್ಯಾಡಂದರ ?

ದಾಸ : ನೀ ಹಿಡದರ ನಿನ್ನ ಒದೀತೀನಿ.

ಸಾವಂತ್ರಿ : ಮತ್ತ ನೀಯಾಕ ಆರಿಸಿಕೊಳ್ತೀಯೊ ಭಾಡ್ಯಾ? ಸಾವ್ಕಾರ್ರು ಎಲ್ಲರಿಗೂ ಎಸದ್ದಾರ, ನಿನಗೊಬ್ಬಗ ಽ ಅಲ್ಲ.

ದಾಸ : ಏ, ಮ್ಯಾಳದ ಯಜಮಾನ ನಾನು! ಸಂಗೀತಳ ತಂದಿ ನಾನು!

ಸಾವಂತ್ರಿ : ಸಂಗೀತಳ ತಾಯಿ ನಾನು.

ದಾಸ : ನಾ ಆರಿಸಿ ತಿರಿಗಿ ಸಾವ್ಕಾರಿಗೇ ಕೊಡತೀನಿ.

ಸಾವಂತ್ರಿ : ನಾನೂ ಕೊಡತೀನಿ.

ಶಾರಿ : (ಸೋತು) ಆ ಹಣ ಇಲ್ಲಿ ಕೊಡ್ರೀ ಅಂದೆ.
(ಅವಳನ್ನು ನೋಡಿ ದಾಸ, ಸಾವಂತ್ರಿ ಇಬ್ಬರೂ ಗಾಬರಿಯಾಗುವರು. ಶಾರಿ ಹೋಗಿ ಅವರ ಕೈಯಲ್ಲಿಯ ದುಡ್ಡನ್ನು ಕಸಿದುಕೊಂಡು ಸೋಮಣ್ಣನಿಗೆ ಕೊಡ ಹೋಗುವಳು. ಆತ ಸುಮ್ಮನೇ ನಿಂತುದಕ್ಕೆ ಅಲ್ಲೇ ಪಕ್ಕದಲ್ಲಿ ಅದನ್ನು ಚೆಲ್ಲುವಳು.)

ಶಾರಿ : ನಾಟಕ ಭಾಳ ಚಂದ ಮಾಡಿದಿರಿ ಸಾವ್ಕಾರ್ರ ಽ. ಎಷ್ಟ ಚಂದ ಮಂತ್ರ ಹಾಕಿದಿರಿ! ಎಂಥಾ ಮೋಡಿಕಾರರು ನೀವು! ನಾ ಹೇಳಿದ್ದಿಲ್ಲಾ, ನೀವು ಮನುಷ್ಯರಲ್ಲಂತ! ನಾ ಇನ್ನ ಇಲ್ಲಿ ಖಂಡಿತ ಇರೋದಿಲ್ಲ.
(ಹೊರಡುವಳು. ಅವಳೆದುರಿಗೆ ಸೋಮಣ್ಣ ಅಡ್ಡ ಬಂದು)

ಸೋಮಣ್ಣ : ಇನ್ನ ಽ ಇಬ್ಬರ ಪರಿಚಯ ಮಾಡಿಕೊಡಬೇಕು. ಅದಷ್ಟಾದರ ನೀ ಹೋಗಬಹುದು. ಒಬ್ಬ ನಾನು. ಸಾವ್ಕಾರ ಸೋಮಣ್ಣ ಅಂತ ನನ್ನ ಹೆಸರು. ನೀರಿನಾಗಿನ ನೆರಳ ನೋಡಿ ಹಾರೋ ಹಕ್ಕೀ ಹೊಡೆದ-ಅಂತ ನನ್ನ ಖ್ಯಾತಿ. ಇನ್ನೊಂದು ನನ್ನ ನಾಯಿ.
(ನಾಯೀಮಗನನ್ನು ತೋರಿಸಿ)

ಇದ ಽ ನನ್ನ ನಾಯಿ. ಕಚ್ಚಂದರ ಕಚ್ಚತೈತಿ. ಬೊಗಳಂದರ ಬೊಗಳತೈತಿ. ಅಷ್ಟ ಅಲ್ಲ, ಒಮ್ಮೊಮ್ಮಿ ಹಾಡತೈತಿ. ನಿನ್ನಷ್ಟ ಚೆಲೋ ಅಲ್ಲ. ಆದರೂ ಅದರ ಜಾತಿಗಿ ಅದ ಹೆಚ್ಚ ಽ ಅನ್ನಬೇಕು. ಎಂಥೆಂಥಾ ಬ್ಯಾಟೀನ ಹೆಂಗೆಂಗ ಹಾರಿ ಹಿಡದೈತಿ ಗೊತ್ತಾ? ಇಡೀ ತಗ್ಗಿನಾಗ ಇಂಥಾ ಜಾತಿವಂತ ನಾಯಿ ಹುಡುಕಿದರೂ ಸಿಕ್ಕೋದಿಲ್ಲ. ಇದು ಯಾವತ್ತೂ ಲೋಡ ಮಾಡಿದ ಬಂದೂಕಿನ್ಹಾಂಗ. ಈಗ ನೀ ಒಂದ ಹೆಜ್ಜೀ ಮುಂದಿಟ್ಟರೂ ಹಾರಿ ನಿನ್ನ ಗಂಟಲ ಹಿಡೀತೈತಿ.

ಶಾರಿ : ನಿಮ್ಮ ನಾಯೀ ಆಟ ನನ್ನ ಮುಂದ ನಡೆಯೋದಿಲ್ಲ.

ಸೋಮಣ್ಣ : ತೋರಿಸಂಧ್ಯೇನು ? ಏ ನಾಯಿ,-
(ತಕ್ಷಣ ನಾಯೀಮಗ ಹೋಗಿ ಬಾಗಿಲಿಗಡ್ಡ ನಿಲ್ಲುವನು. ಶಾರಿ ಧೈರ್ಯದಿಂದ ಮುನ್ನಗ್ಗಬೇಕೆಂದಾಗ ನಾಯೀಮಗ ಅವಳನ್ನು ಹಿಂದೆ ದಬ್ಬುತ್ತಾನೆ. ಶಾರಿ ಕೆಳಕ್ಕೆ ಬಿದ್ದು ಕಿರಚಬೇಕೆಂಬಷ್ಟರಲ್ಲಿ ಸೋಮಣ್ಣ ಅವಳ ಬಳಿ ಕುಳಿತು ಪ್ರೀತಿಯಿಂದೆಂಬಂತೆ ಅವಳ ಗದ್ದ ಹಿಡಿದು)

ಇನ್ನಮ್ಯಾಲ ಈ ನಾಯೀ ಕಾಲಿನಾಗ ಽ ನೀ ಬಿದ್ದಿರತಿ, ನನಗ ಒಳಗಾಗೋ ತನಕ. ಏ ನಾಯೇ ಈಕಿನ್ನ ಹೊರಗ ಬಿಡಬ್ಯಾಡೋ.
(ಧಿಮಾಕಿನಿಂದ ದಾಸನ ಕಡೆ ನೋಡುವನು. ಅವರು ಗಾಬರಿಯಲ್ಲಿದ್ದಾರೆ.)

ಏನ ಮಾವಾ, ಬರೋಬರೀನ ?
(ಏನು ಹೇಳಲೂ ತೋಚದೆ ದಾಸ ಕತ್ತು ಹಾಕುವನು. ಸೋಮಣ್ಣ ಶಾರಿಯ ಕಡೆಗೊಂದು ಮುದ್ದು ತೂರುವನು. ಅವಳು ಥೂ ಎಂದು ಉಗುಳಿದೊಡನೆ ಸರ‍್ರನೆ ಹೋಗುವನು.)

(ಮೇಳದವರು ನರ್ತಿಸುತ್ತ ಬರುತ್ತಾರೆ.)

ಮೇಳ : ದುಡ್ಡಿದ್ದವ ದೊಡ್ಡವಲ್ಲವೆ
ಹೇಳೆನ್ನಗುರುವೆ
ದುಡ್ಡಿದ್ದವ ದೊಡ್ಡಲ್ಲವೇ ||

ಕಾಸಿದ್ದರ ಕೈಲಾಸಲ್ಲವೇ
ಹೇಳೆನ್ನ ಗುರುವೆ
ಕಾಸಿದ್ದರ ಕೈಲಾಸಲ್ಲವೇ ||

(ಮೇಳ ಕುಣಿಯುತ್ತ ಸರಿದಂತೆ ಹಿಂದಿನ ದೃಶ್ಯವೇ ಈಗಲೂ ಕಾಣಿಸುತ್ತದೆ. ನಾಯೀಮಗ ಬಾಗಿಲಲ್ಲಿ ಕೂತು ಕಾಯುತ್ತಿದ್ದಾನೆ. ಶಾರಿ ಒಳಗಡೆ ಮಲಗಿರುವುದರಿಂದ ಸಧ್ಯ ನಮಗೆ ಕಾಣಿಸುವುದಿಲ್ಲ. ದಾಸ ಮತ್ತು ಸಾವಂತ್ರಿ ಹಾಲಿನಲ್ಲಿ ಮಲಗಲು ಸಿದ್ಧರಾಗಿದ್ದಾರೆ.)

ದಾಸ : ದಾಸರ ಹೆಂಗಸರು ಗರತೀರಾದರ ಆಯ್ತು. ಗಂಡಸರೆಲ್ಲಾ ಹುಲ್ಲು ಮೇಯಬೇಕಷ್ಟ. ನೀ ಹೆಂಗ ಹೇಳಿದೆಯೋ ಏನೋ; ಅದಕ್ಕ ಽ ಆಕಿ ಮೊಂಡತನ ಮಾಡಿದಳು, ಇಂಥಾ ಸಾವ್ಕಾರು ನಮ್ಮಂಥಾ ದಾಸರಿಗಿ ಸಿಕ್ಕಾರೇನ ಹೇಳು,-

ಸಾವಂತ್ರಿ : ದಾಸ ಸುಮ್ಮನS ಬಿದ್ದಕೊಬಾರದ?

ದಾಸ : ನನಗ ಈಗೂ ಅನಸತೈತಿ, ಹೇಳೋ ನಮನಿ ಹೇಳಿದರ ಸಂಗೀತಾ ಹೂ ಅಂದಾಳು ಅಂತ.

ಸಾವಂತ್ರಿ : ಅದ್ಯಾವ ನಮೂನಿ ಹೇಳತೀಯೋ ನೀನS ಹೇಳಿಕೊ.

ದಾಸ : ಇಂಥಾ ಮಾತ ತಾಯಿ ಹೇಳಬೇಕೋ? ತಂದಿ ಹೇಳಬೇಕೊ?

ಸಾವಂತ್ರಿ : ನಾಳಿ ನೋಡೂಣಂತ ಬಿದ್ದಕೊ. ಮನಸಿಗಿ ಭಾಳ ತ್ರಾಸ ಮಾಡಿಕೊಂಡಾಳ. ಮತ್ತ ಏನೋ ಹೋಗಿ ಇನ್ನೇನೋ ಆದೀತು. ಆ ನಾಗ್ಯಾ ಹೋದಾವ ಇನ್ನS ಬರSಲಿಲ್ಲ. ಈ ಸಲ ಬರ್ತಾನೋ ಇಲ್ಲೊ!

ದಾಸ : ಆಕಿ ನಾಗ್ಯಾನ ಮಾತ ಕೇಳತಾಳ ಖರೆ. ಆದರ ಆ ಸೂಳೀಮಗ ತಿರಿಗಿ ಬರ್ತಾನೋ ಇಲ್ಲೊ. ಬಂದಾ ಅಂತ ತಿಳಿ, ಹೇಳಬೇಕಲ್ಲ, ಯಾಕ ಹೇಳ್ಯಾನ ಹೇಳು; ದಿನಾ ಎರಡ ಹೊತ್ತ ಭಕ್ಕಳ ಕೂಳ ಬೀಳತೈತಿ, ರಾತ್ರಿ ಬೆಚ್ಚಗ ನೀ ಸಿಗತಿ.

ಸಾವಂತ್ರಿ : ದಾಸಾ, ಮಲಕ್ಕೊ ಅಂತ ಹೇಳಲಿಲ್ಲಾ?

ದಾಸ : ಹೌಂದಲ್ಲ, ಯಾಕ ಹಾಂಗ ಹೇಳಿದಿ?

ಸಾವಂತ್ರಿ : ಯಾಕಂದರ ನೀ ಮಲಗಬೇಕನಿಸ್ತು ಅದಕ್ಕ.

ದಾಸ : ನಾಗ್ಯಾ ಸೆಟಗೊಂಡ ಹೋಗಿದ್ದರ ಅದಕ್ಕ ನಾ ಅಲ್ಲ, ಇನ್ನ ಮಗಳು ಕಾರಣ.

ಸಾವಂತ್ರಿ : ಅವ ತಿರಿಗಿ ಬರದಿದ್ದರ ನಿನ್ನ ಮ್ಯಾಳ ಎಲ್ಲಿರತೈತಿ, ಅದನ್ನ ನೋಡಿಕೊ.

ದಾಸ : ಆ ಜವಾಬ್ದಾರೀನೂ ನಿಂದS. ದಿನಕೊಮ್ಮಿ ಓಡಿಹೋಗತಾನ. ಅವನ್ನ ಮ್ಯಾಳದಾಗ ಹಿಡಿದಿಟ್ಟಕೊಳ್ಳಲೆಂತS ಅಲ್ಲೇನು ನಿನ್ನ ಬಿಟ್ಟದ್ದು? ಈಗ ಎಲ್ಲ ನನ್ನ ತಲೀಗೆ ಕಟ್ಟಿದರ?

ಸಾವಂತ್ರಿ : ಅದಕ್ಕS ಬಡಕೊಂಡೆ; ಒಂದ ಹೊಸಾ ಸೀರೀ ತಂದಕೊಡೋ ಮುದೋಡ್ಯಾ, ನಾಗ್ಯಾ ನನ್ನ ಕಡೆ ನೋಡೋದS ಬಿಟ್ಟಾನS ಅಂತ. ಹೋಗಲಿ ಈಗಾದರೂ ಒಂದ ಸಿಗರೇಟ ಕೊಡು.
(ಸಿಗರೇಟು ಕೊಡವನು. ಏನೋ ಯೋಚಿಸುತ್ತ ಸಿಗರೇಟು ಹೊತ್ತಿಸಿ ಸೇದ ತೊಡಗುವಳು)

ಇನ್ನS ಏನೇನ ಹೊಯ್ಯಾ ನೋಡಬೇಕಾಗೇತ್ಯೋ! ಮಗಳು ದೊಡ್ಡಾಕ್ಯಾದ್ಲು. ದೊಡ್ಡ ಸಾವ್ಕಾರ್ನ ಹಿಡಿದ ನಮ್ಮನ್ನ ಸಾಕತಾಳ ಅಂದರ, ಆಕಿ ಗರತಿ ಆಗತಾಳಂತ! ಈ ನಾಗ್ಯಾ ಎಲ್ಲಿ ಹೋದ್ನೊ! ಅಲ್ಲಾ ಸಾವ್ಕಾರ್ನ ಹಿಡೀಬೇಕಾದರ ಮೊದಲು ಅವನ ನಾಯೀನ ರೂಢಿ ಮಾಡಿಕೋಬೇಕಂತ...

ದಾಸ : ಸಾವ್ಕಾರ್ನ ಹಿಡೀಬೇಕಾದ್ದಿಲ್ಲವೇ, ಆಗಲೆ ಸಿಕ್ಕರ; ಮಗಳ್ನ ಹಿಡಿದ ಹಾಕಬೇಕಷ್ಟS. ನಿನಗೆ ನಾಯೀಮಗನ ಮ್ಯಾಲ ಆಸೇ ಆಯ್ತೇನೋ...
(ಥಟ್ಟನೇ ಅವಳ ಮನಸ್ಸನ್ನರಿತು ತನ್ನ ಹಾಸಿಗೆ ಸಮೇತ ಇನ್ನೊಂದು ರೂಮಿಗೆ ಹೋಗುವನು. ಸಾವಂತ್ರಿ ನಾಯೀಮಗನ ಕಡೆಗೆ ನೋಡುವಳು. ಆತ ವಿಚಾರ ಮಗ್ನನಾಗಿದ್ದಾನೆ)

ಸಾವಂತ್ರಿ : ಅಲ್ಲಿ ಯಾಕ ಕುಂತಿ, ಒಳಾಕ ಬಾರೋ ಹುಡುಗಾ. ಯಾಕ? ತಪ್ಪಿಸಿಕೊಂಡ ಹೋದೇವಂತೀಯೇನು ? ಬೇಡಿ ಬಂದೀವಿ, ಬಿಟ್ಟ ಯಾಕ ಹೋದೇವೋ ಮಾರಾಯಾ! ಒಳಾಕ ಬಾ.
(ನಾಯೀಮಗ ತುಸು ಒಳಬಂದು ಕೂರುವನು)

ನಂಬಿಕಿಲ್ಲದಿದ್ದರ ಬಾಗಲಿಗಿ ಕೀಲೀ ಜಡಿಯೋ ನಮ್ಮಪ್ಪ. ಹಂಗ್ಯಾಕ ಮೋತೀ ಬಿಗಿ ಹಿಡದ್ದಿ, ನನ್ನ ನೋಡಿ ಖುಶಿ ಆಗಲಿಲ್ಲೇನು ?
(ಅವನ ಸಮೀಪ ಹೋಗಿ ಕೂರುವಳು. ಆತ ಮುಖ ಆ ಕಡೆ ಮಾಡುವನು)

ನಾಯೀಮಗ : ನಾಯೀಮಗ.

ಸಾವಂತ್ರಿ : (ಕುಸುಕುಸು ನಗುತ್ತ)

ಇದ್ಯಾವ ಸೀಮೀ ಹೆಸರಪ! ಖರೇನS ನಿನ್ನ ಹೆಸರ ನಾಯೀ ಮಗಾನ?

ನಾಯೀಮಗ : ಹೂ.

ಸಾವಂತ್ರಿ : ಮದಿವ್ಯಾಗೇತೇನು ?

ನಾಯೀಮಗ : ಇಲ್ಲ.

ಸಾವಂತ್ರಿ : ದಿನಾ ಒಬ್ಬನ ಽ ಮಲಗತಿ, ರಾತ್ರಿ ಥಂಡಿ ಹತ್ತೂದಿಲ್ಲಾ ?

ನಾಯೀಮಗ : ಇಲ್ಲ.

ಸಾವಂತ್ರಿ : ಅಯ್ ಮೂಳಾ, ನನ್ನ ಯಾಕ ಹಾಂಗ ನೋಡ್ತಿ ? ನಾ ಅಷ್ಟ ಚಂದ ಕಾಣ್ತೇನೇನು ?

ನಾಯೀಮಗ : ಇಲ್ಲ.

ಸಾವಂತ್ರಿ : ಕಣ್ಣಾಗ ಹೂ ಅಂತಿ, ಬಾಯಾಗ ಇಲ್ಲಂತಿ, ಹೆಂಗ ನಂಬಲೊ ಹುಡುಗಾ ? ಯಾಕ ಮುದುಡ್ಯಾಗೀಯಲ್ಲ, ಥಂಡಿ ಭಾಳ ಹತ್ತೇತೇನು ? ಬೇಕಂದರ ನನ್ನ ಹಂತ್ಯಾಕೊಂದ ಕೋಟ ಐತಿ. ಈ ಕೋಟಿಂದೂ ಒಂದ ಕತೀನ ಅಂತಿಟ್ಟಕ. ನನ್ನ ಹರೆದಾಗ ಒಬ್ಬ ಗೌಡನ್ನ ಕೂಡಿದೆ. ಬಾಳ ಚಂದ ಇದ್ದ. ಇವ ಯಾಕಿಷ್ಟ ಚಂದ ಅದಾನಂತ ಕಾರಣ ಹುಡಿಕೇ ಹುಡಿಕಿದೆ. ಕಡೀಕಂದರ ಗೊತ್ತಾತು; ಯಾಕಂದರ ಅವ ಕೋಟ ಹಾಕತಿದ್ದ, ಅದಕ್ಕ. ಆಯ್ತು ಭಾಳ ದಿನಾ ನಡೀಲಿಲ್ಲ. ಕೋಟ ಬಿಟ್ಟ ಸತ್ತುಹೋದ. ಅವ ಹೋದಾಗಿನಿಂದ ಈ ಕೋಟ ಎಷ್ಟ ಮಂದಿಗಿ ಹಾಕಿ ನೋಡಿದೆ. ಯಾರೂ ಅವನ್ಹಾಂಗ ಕಾಣೇಸಲೇ ಇಲ್ಲ. ಬೇಕಾದರ, ಹೆಂಗೂ ಥಂಡಿ ಐತಿ, ನೀವೊಮ್ಮಿ ಹಾಕಿ ನೋಡ್ತೀಯೇನು ? (ಈ ಮಾತು ಹೇಳಹೇಳುತ್ತ ಅವನಿಗೆ ಅಗ್ಗದೀ ಸಮೀಪ ಹೋಗಿದ್ದಾಳೆ. ನಾಯೀ ಮಗ ಅವಳ ಇಂಗಿತ ಅರಿತು ಖೆಕ್ಕರಿಸಿ ನೋಡುತ್ತ ಎದ್ದು ಮುಂಚಿನ ಸ್ಥಳಕ್ಕೆ ಹೋಗುತ್ತಾನೆ. ಸಾವಂತ್ರಿಗೆ ನಿರಾಸೆಯಾಗುತ್ತದೆ. ನನ್ನ ಹಾಟ್ಯಾ ನಾಗ್ಯಾ ಬರಲಿಲ್ಲ ಎನ್ನತ್ತ ಒರಗುವಳು. ತುಸು ಹೊತ್ತು ನೀರವ. ಆಮೇಲೆ ನಾಯೀಮಗ ಬಾಗಿಲು ಮುಂದೆ ಮಾಡಿಕೊಂಡು ತನ್ನ ಪಾಡಿಗೆ ತಾನು,)

ಯಾರೋ | ಯಾರೊ ಬಂದವರಾ<br>
ಯಾರೋ ಬಂದಾರೊ ಗುರುತಿಲ್ಲದವರಾ ||<br>
(ಎಂದು ಹಾಡಿಕೊಳ್ಳುತ್ತಾನೆ. ಹಾಡು ಕೇಳಿ ಶಾರಿ ಆಶ್ಚರ್ಯದಿಂದ ಹೊರಗೆ ಬರುವಳು. ತಕ್ಷಣ ನಾಯೀಮಗ ಹಾಡು ನಿಲ್ಲಿಸುವನು)

ಶಾರಿ : ಯಾಕ ನಿಲ್ಲಿಸಿದಿ ? ಹಾಡಲ್ಲ.<br>
(ಸಾವಂತ್ರಿಗಿನ್ನೂ ಎಚ್ಚರವಿದೆ. ಹಾಗೇ ಮೊಳಕೈಯೂರಿ ಒರಗಿದ್ದಾಳೆ.)

ಇನ್ನೊಮ್ಮಿ ಹಾಡಪಾ....ಕೇಳಿದೇನ ಽ ಎವ್ವಾ ?

ಸಾವಂತ್ರಿ : ಕೇಳಿದೆ.

ಶಾರಿ : ಒಳಗ ಎಂಥಾ ಹಾಡ ಇಟಕೊಂಡಾನಲ್ಲಾ ?

ಸಾವಂತ್ರಿ : ಹೌಂದ ಖರೆ, ನಾಯೀ ಹಾಲ ಕುಡ್ಯಾಕಾದೀತ?

ಶಾರಿ : ಇನ್ನಷ್ಟು ಹಾಡಪಾ...
(ನಾಯೀಮಗ ಹೊರಗೆ ಹೋಗಿ ಬಾಗಿಲಿಕ್ಕಿಕೊಳ್ಳುವನು.)

ಸಾವಂತ್ರಿ : ನೋಡಿದಿಲ್ಲೊ ಹೆಂಗ ಬಾಗಲಾ ಹಾಕ್ಕೊಂಡ?

ಶಾರಿ : ಓಡಿಹೋಗತೀವಂದಕೊಂಡನೋ ಎನೋ! ಅವನ ಹಾಡ ಕೇಳತಿದ್ದರ ಯಾರೋ ಶಾಪದಾಗಿರೋ ದೇವರು ನನ್ನ ಶಾಪಾ ಹರೀಯೋರ್ ಅಂತ ಅತ್ಹಾಂಗಿತ್ತು.

ಸಾವಂತ್ರಿ : ನಿನಗ ಅಷ್ಟೆಲ್ಲಾ ಕೇಳಿಸ್ತ? ನನಗೇನೋ ನಾಯಿ ಅತ್ಹಾಂಗ ಕೇಳಿಸ್ತವಾ. ನಾಳಿ ಬೆಳಗಾಗಲಿ, ಹಾಡಿಸೀಯಂತ.

ಶಾರಿ : ನಾ ಕೇಳಿದರ ಹಾಡೂದಽ ಇಲ್ಲ ಅವ.

ಸಾವಂತ್ರಿ : ಸಾವ್ಕಾರಿಗಿ ಹೇಳು, ಅವರು ಹುಬ್ಬ ಹಾರಿಸಿದರ ಸಾಕು, ತಲ್ಯಾಗಿನ ಎಲ್ಲಾ ಹಾಡ ಉದರಸ್ತಾನ.

ಶಾರಿ : (ಅರಿವಿಗೆ ಬಂದು)

ನಾಳೆ ಇಲ್ಲಿಂದ ಹೊಂಡಾಕಽ ಬೇಕು. ನೀವು ಬರ್ರಿ, ಬ್ಯಾಡಾದ್ರ ಇಲ್ಲೇ ಇರ್ರಿ, ನಾ ಅಂತೂ ಹೋಗವಾಕಿ.
(ಒಳಗ ಹೋಗುವಳು, ಮೇಳ ಹಾಡುತ್ತ ಬರುವುದು.)

ಮೇಳ : ಯಾರೋ | ಬಂದವರಾ |
ಯಾರೋ ಬಂದಾರೋ ಗುರುತಿಲ್ಲದವರಾ ||

ನಗಿಯೊಳಗ ತುಳುಕ್ಯಾರೊ
ಬೆಳಕಿನ ದಿಗರಾ |
ದೊಡ್ಡ ಬಂಡಿಯ ಎದಿಯ
ಗುಟ್ಟ ಬಲ್ಲವರಾ ||

ಸಿಡಿಲು ಗುಡುಗಿನ ಜೋಡಿ
ಮಾತಾಡಿದವರಾ |
ನಾ ನೀ ದೇವರನೆಲ್ಲಾ
ಪಳಗಿಸಿದವರಾ ||

(ಹಾಡುತ್ತಿರುವಾಗಲೇ ಬಾಗಿಲು ಬಡಿದ ಸಪ್ಪಳವಾಗುತ್ತದೆ. ಅದನ್ನು ಕೇಳಿ ಮೇಳದವರು ಚದುರುತ್ತಾರೆ. ಸಪ್ಪಳ ಕೇಳಿ ದಾಸ, ಸಾವಂತ್ರಿ ಹಾಗೂ ಶಾರಿ ಬಂದು ಬಾಗಿಲು ತೆರೆಯುವರು. ಹಿಂಗಟ್ಟು ನಾಯೀಮಗನನ್ನು ನಾಗ್ಯಾ ಒಳಕ್ಕೆ ದೂಡಿಕೊಂಡು ಬರುತ್ತಾನೆ. ನಾಯೀಮಗ ಬೀಳುತ್ತಾನೆ.)

ನಾಗ : ಹೂ. ಲಗು ಎಳ್ಕಿನ್ನ. ಗದ್ದಲಾ ಮಾಡಿದರ ಮತ್ತಿನ್ನೇನಾರ ಆದೀತು.

ದಾಸ : ಹೆಂಗ ಹಿಡದಿ ಇವನ್ನ?

ನಾಗ : ಹಾಡತಾ ಹಾಡತಾ ಹಾಂಗS ಮಲಗಿದ್ದ. ಹೋಗಿ ಕೈ ಕಟ್ಟಿದೆ. ಲಗು ಏಳಂದರ ಇದೇನ ಕೇಳತಾ ಕೂತನೋ ಇವ! (ಎಂದು ಹೇಳಿ ತನ್ನ ಸಾಮಾನು ತರಹೋಗುವನು ಶಾರಿ ಆಗಲೇ ಒಳಗೆ ಹೋಗಿದ್ದಾಳೆ. ಆದರೆ ದಾಸ ಮತ್ತು ಸಾವಂತ್ರಿಗೆ ಉತ್ಸಾಹವಿಲ್ಲ.)

ನಾಯೀಮಗ : ಹೊರಗ ಕಾಲಿಟ್ಟರ ನೆಟ್ಟಗಾಗಾಣೆಲ್ಲ, ಹೇಳಿರತೀನಿ.

ನಾಗ : (ಹೊರಬಂದು)

ಕೈಕಾಲ ಕಟ್ಟಿದರೂ ಇಷ್ಟ ಒದರ್ತೀಯೇನೊ? ಏ ಸಾವಂತ್ರೀ, ಏನಾಗೇತಿ ನಿನಗ? ಲಗೂನS ಬರಬಾರದ?

ನಾಯೀಮಗ : ಮಲಗಿದಾಗ ಕಟ್ಟಿಹಾಕಿ ಗಂಡಸ್ತನ ಮಾತಾಡ್ತೀಯೇನೊ?

ನಾಗ : ಹುಚ್ಚನಾಯೀನ್ನ ಹಿಡೀಬೇಕಾದರ ಹಿಂಗS ಮಾಡಬೇಕು. ಲೆಕ್ಕಲೆ ನೋಡಿದರ ನಿನ್ನನ್ನ ಗೋಣೀ ಚೀಲದಾಗ ಹಾಕಿ ಕಟ್ಟಬೇಕಾಗಿತ್ತು. ಮಾತಾಡ್ತೀಯಲ್ಲ. ಮನಶೇರ್ಹಾಂಗಿದ್ದೀ ಅಂತ ಸುಮ್ಕಿದೀನಿ.
(ದಾಸನಿಗೆ)

ಯಾಕೊ? ನೀ ಬರಾಣಿಲ್ಲೇನು? ಇಲ್ಲೇ ಬಿದ್ದಕೋ ಹಂಗಾದರ. ನಾನೂ ಶಾರಿ ಹೋಗತೀವಿ. ಯಾಕ ಸಾವಂತ್ರೀ ನೀ ಬರಾಣಿಲ್ಲಾ?

ಸಾವಂತ್ರಿ : ಹಂಗಲ್ಲ ನಾಗೂ, ನೀನS ವಿಚಾರ ಮಾಡು....

ನಾಯೀಮಗ : ಹೊರಗ ಕಾಲಿಟ್ಟರ ಒದರತೀನಿ. ಆಮ್ಯಾಲ ಸಾವ್ಕಾರ ಬಂದ ನಿಮ್ಮ ಕಾಲ ಮುರದ ಕೈಯಾಗ ಕೊಡತಾರ, ಹುಶಾರ್!

ನಾಗ : ಬಾಯಿಗಿ ಅರಿವೀ ಹಾಕಿ ಕಟ್ಟಲಿಲ್ಲ. ಅದಕ್ಕS ಇಷ್ಟ ಜೋರ ಮಾಡ್ತಿಯೇನೊ? ಸಾವಂತ್ರೀ, ಒಂದ ಅರಿವೀ ಕೊಡು. ಈ ನಾಯೀಮಗನ ಬಾಯಿ ಬಂದ ಮಾಡ್ತೀನಿ

ದಾಸ : ಹಿಂಗ ಮಾಡಿದರ ಹೆಂಗೋ ನಾಗಣ್ಣಾ?

ನಾಗ : ನೀ ಬರಾವೋ, ಇಲ್ಲೇ ಸಾಯಾವೊ?

ಶಾರಿ : (ಸಿದ್ಧಳಾಗಿ ಬಂದು)

ಯಾಕ, ನೀವು ಬರಾಣಿಲ್ಲಾ? ಸಾವ್ಕಾರಗ ಅಲ್ಲಾಬೆಲ್ಲಾ ಕೊಟ್ಟ ಬರತೀರೇನೊ! ನಡಿ ನಾಗಣ್ಣಾ.

ನಾಯೀಮಗ : ಸಂಗೀತಾ ಹೋಗಬ್ಯಾಡ.

ಶಾರಿ : ಹೋದರ?

ನಾಯೀಮಗ : ಬ್ಯಾಡವಾ.

ಶಾರಿ : ಒಪ್ಪಿದೆ. ನೀ ಭಾಳಂದರ ಭಾಳ ಖರೇತನದ ನಾಯಿ. ಮುಂದ ಯಾವಾಗಾದರೂ ನಿನ್ನ ಸಾವ್ಕಾರ ಭೇಟಿ ಆದಂದರ ನಿನ್ನ ಬಗ್ಗೆ ಶಿಫಾರಸ ಮಾಡ್ತೀನಾಯ್ತು? ನನ್ನ ಶಿಫಾರಸ ಕೇಳಿ, ಸಾವ್ಕಾರ ನಿನಗೊಂದ ಚರ್ಮದ ಪಟ್ಟಿ ಬಹುಮಾನ ಕೊಡತಾನ!

ನಾಗ : ಹೆಂಗ ಬಿದ್ದಾನ್ನೋಡು, ಇವನವ್ವನ!...
(ಹೋಗಿ ಒದೆಯುವನು.)

ಶಾರೀ, ನಡೀ ಹೋಗೋಣು.

ದಾಸ : ನನ್ನ ಮಾತ ಕೇಳು ಸಂಗೀತಾ...

ಶಾರಿ : ನನ್ನ ಮಾರಾಕ ಬಂದಿದ್ದಿರಿ,ಸಂಚಕಾರ ತಗೊಂಡೀರೇನೋ! ಬೇಕಾದರ ನೀವ ತೀರಿಸಿ ಬರ್ರಿ, ನಾ ಹೋಗತೀನಿ.

ನಾಗ : ನಿನ್ನ ಹೊಟ್ಟ್ಯಾಗ ಕರುಳಿಲ್ಲೋ ದಾಸ, ಸಿಂದೀ ನುಲಿ ತುಂಬ್ಯಾವ. ಸಾವಂತ್ರೀ ಇಂದ ನಿನ್ನ ಖರೇ ಬಣ್ಣ ತೋರಿಸಿದಿ. ನಡಿ ಶಾರಿ.

ಶಾರಿ : ಇಲ್ಲೇ ಸಾಯಿರಿಬ್ಬರೂ.
(ಹೊರಡುವರು. ನಾಯೀಮಗ ಆರ್ತನಾಗಿ ಕೂಗುವನು.)

ನಾಯೀಮಗ : ಹೋಗಬ್ಯಾಡ ಸಂಗೀತಾ, ನೀ ತಪ್ಪಸಿಕೊಂಡ ಹೋದರ ನಾಳಿ ಸಾವ್ಕಾರ ನನ್ನ ಕೊಲ್ಲತಾರ! ಬಂದೂಕಲೆ ಸುಡತಾರ.

ನಾಗ : ಚೆಲೋ ಆಯ್ತು. ನೀ ಏನೂ ಕಾಳಜಿ ಮಾಡಬ್ಯಾಡ. ನೀ ಸತ್ತರೂ ನಾಯೀ ಸಂತಾನ ಜಗತ್ತಿನಾಗ ಇನ್ನS ಬೇಕಾದಷ್ಟು ತುಂಬೇತಿ. ಸಂತೋಷದಿಂದ. ಆಗಳೆ ಹಾಡಿದೆಲ್ಲ, ಆ ಹಾಡ ಹೇಳಿಕೊಂಡ ಸತ್ತಹೋಗು. ಬಾ ಶಾರೀ.
(ಹೋಗುವನು.)

ಶಾರಿ : ನಾಗಣ್ಣಾ, ಸಾವ್ಕಾರ ಇವನ್ನ ಕೊಲ್ಲತಾನಂತಲ್ಲ ?

ನಾಗ : (ಹೊರಗಿನಿಂದ) ಅವನ ಮ್ಯಾಲ ಕರುಣಾ ಬಂತ ?

ದಾಸ : ಅದS ಅಂತೀನ್ನಾನೂ. ಪಾಪ ನಮ್ಮ ಸಲುವಾಗಿ ಯಾರೋ ಯಾಕ ಜೀವಾ ಕೊಡಬೇಕು ? ಅವ ಎಷ್ಟಂದರೂ ಆಳಮಗ. ನಾವೇನು, ಇಂದ ಇದ್ದೇವು, ನಾಳಿ ಹೋದೇವು. ಅವ ದಿನ ಬೆಳಗಾದರ ಸಾವ್ಕಾರ್ರ ಊಳಿಗ ಮಾಡಬೇಕು. ಅವನ ಬಾಳ್ವೆ ಹೆಂಗಂತ ?

ಸಾವಂತ್ರಿ : ಅವ ಎಷ್ಟಂದರೂ ಕಾವಲಿದ್ದಾವ. ಕಾವಲಿಗಿಟ್ಟಾವ ಸಾವ್ಕಾರ. ಸಾವ್ಕಾರಗ ಹೇಳಿಕೇಳಿ ನಾಳಿ ರೋಬರೋಬ ಹೋಗೋಣಲ್ಲ. ಬಿಡಾಣೆಲ್ಲಂದರ, ಯಾಕ ಬಿಡಾಣೆಲ್ಲ ? ಪೊಲೀಸ ಪೋಜದಾರ ಸತ್ತಾರೇನು ?

ದಾಸ : ದುಡಕಬ್ಯಾಡ ಮಗಳS. ಸಾವ್ಕಾರ ನಿನ್ನ ಪ್ರೀತಿ ಮಾಡ್ತೀನಿ ಅಂದ. ನೀ ಒಲ್ಲೆ ಅಂದಿ. ಅಲ್ಲಿಗಿ ಆ ಮಾತ ಮುಗೀತು. ಕಟ್ಟಿಹಾಕಿ ಪ್ರೀತಿ ಮಾಡಾಕ ಆಗತೈತೇನು ? ನೀ ದನಾನ ? ಅಷ್ಟೂ ಮೀರಿ ಕಟ್ಟಿಹಾಕಿದರ ನಾವಿಲ್ಲೇನು ? ಕಾಯ್ದೆ ಕಾನೂನು ಇಲ್ಲೇನು ?

ಶಾರಿ : ಏನಪಾ, ನಾ ಹೋದರ ಸವ್ಕಾರ ನಿನ್ನ ಕೊಲ್ಲತಾನಂತಿ. ಹಂಗಿದ್ದರ ನೀನೂ ನಮ್ಮ ಜೋಡೀ ಬರ್ತೀಯೇನು ? ನಮ್ಮ ಮ್ಯಾಳದಾಗಿದ್ದೀಯಂತ...

ನಾಗ : (ಹೊರಗಿನಿಂದ) ಏ ಶಾರೀ....

ನಾಯೀಮಗ : ಬರತೀನಿ. ನಾನೂ ನಿಮ್ಮ ಜೋಡೀ ಬರತೀನ್ರೆವಾ.

ಶಾರಿ : ಈ ಮಾತ ನಂಬಲಿ ?

ನಾಯೀಮಗ : ನನ್ನಾಣಿ, ನಮ್ಮವ್ವಾಣಿ, ನಂಬವಾ.
(ಲಗುಬಗೆಯಿಂದ ಶಾರಿ ಅವನ ಕಟ್ಟು ಬಿಚ್ಚತೊಡುಗುವಳು. ದಾಸ, ಸಾವಂತ್ರಿ ಅವಳಿಗೆ ಸಹಾಯ ಮಾಡುವರು. ಬಿಚ್ಚಿದ ತಕ್ಷಣ ನಾಯೀಮಗ ನೆಗೆದು ಬಾಗಿಲಿಗಡ್ಡ ಕಟ್ಟಿ ನಿಲ್ಲುವನು.)

ನಾಯೀಮಗ : ಖಬರದಾರ್! ಆ ಸೂಳೀಮಗನ್ನ ಆಮ್ಯಾಲ ನೋಡಿಕೊಳ್ತೀನಿ. ನೀವು ಯಾರಾದರೂ ಹೊರಗ ಕಾಲಿಟ್ಟರ ಕಾಲ ಮುರೀತೀನಿ!
(ಎಲ್ಲರಿಗೂ ಅನಿರೀಕ್ಷಿತ ಆಘಾತವಾಗುತ್ತದೆ. ಬಾಗಿಲಲ್ಲಿ ನಾಗ ಬಂದು ಹಣಿಕಿ ಹಾಕುತ್ತಲೂ ನಾಯೀಮಗ ಅವನನ್ನು ಗಮನಿಸಿ ಖೆಕ್ಕರಿಸಿ ನೋಡುತ್ತಾನೆ. ನಾಗನಿಗೆ ಪರಿಸ್ಥಿತಿಯ ಅರಿವಾಗಿ ಹೊರಗೇ ಹೋಗುತ್ತಾನೆ. ಮೇಳ ಪ್ರವೇಶಿಸುತ್ತದೆ.)

ಮೇಳ : ಪ್ರೀತಿ ಎಂದರ್ಯಾಕೆ ನಕ್ಕಿ
ಹೊತ್ತಿ ಉರಿವ ಎದಿಯ ಬೆಂಕಿ
ಬೆಳಕಿನಾಗ ಏನ ಕಂಡಿವೋ |

ಏನ ಬಯಸಿ ಏನಪಡದಿ
ಬಂದರ್ಯಾರು ಯಾರ ಕರದಿ
ಹಣ್ಣ ಹರಿದರ್ಯಾರು ತಿಂದರೋ || ಹಾ ರಾಮ ರಾಮ

ತಿಂದರೋ ತಿಂದರೋ ಹಣ್ಣ ತಿಂದರೋ ||

(ಮೇಳ ಮರೆಯಾಗುವುದು. ಸೋಮಣ್ಣನ ಮನೆ. ತಾಯಿ ಯಥಾಪ್ರಕಾರ ಹಾಸಿಗೆಯಲ್ಲಿದ್ದಾಳೆ. ಲಕ್ಷ್ಮಿ-ಅವನ ಹೆಂಡತಿ ಹಾಗೂ ರಾಮಣ್ಣ-ಅವಳ ತಂದೆ ಇದ್ದಾರೆ. ಸೋಮಣ್ಣ ಸಂಗೀತಾ ಎಂಬೂದು ನಮ್ಮ ಹೆಸರಾ ಎಂದು ಕುಡಿದ ಗುಂಗಿನಲ್ಲಿ ಹಾಡುತ್ತ ಪ್ರವೇಶಿಸುತ್ತಾನೆ.)

ತಾಯಿ : ಅಕಾ ಬಂದ, ನೀ ಆದರೂ ಬುದ್ಧೀರೀತಿ ಹೇಳಿ ದಾರಿಗಿ ತರತೀಯೋ, ಇಲ್ಲಾ ಹೀಂಗ ಽ ಹಾಳಾಗಲೆಂತ ಬಿಟ್ಟಹೋಗತೀಯೋ ನೋಡು.

ರಾಮಣ್ಣ : ನಮಸ್ಕಾರಪ.

ಸೋಮಣ್ಣ : ನಮಸ್ಕಾರ.

ತಾಯಿ : ಯಾರಂತ ಗುರುತು ಸಿಕ್ಕಿತೊ?

ಸೋಮಣ್ಣ : ಇದರ ಕಣ್ಣೀಗೆ ಕಾಣಸಾಕ ಹತ್ಯಾರ.

ತಾಯಿ : ಲಕ್ಷ್ಮೀನ ಕರ್ಯಾಕ ಹೋಗತೇನಂದಾವ ಅವರೂರಿಗಿ ಹೋಗಲಿಲ್ಲಂತ ನೀನು?

ಸೋಮಣ್ಣ : ಅರೆ ಹೌಂದಲ್ಲ! ನನ್ನ ಮನ್ಯಾಗ ಬೇಕಾದಷ್ಟು ಲಕ್ಷ್ಮೀ ಬಿದ್ದೈತಿ, ಮತ್ತ್ಯಾಕ ಅವಳು ಅಂತ ಸುಮ್ಮನಾದೆ. (ರಾಮಣ್ಣನಿಗೆ ಹೇಸಿಕೆಯಾಗಿ ಚಡಪಡಿಸುತ್ತಿದ್ದಾನೆ.)

ತಾಯಿ : ನೀನು ದಾಸೀನ ಕರತಂದು ತೋಟದ ಮನ್ಯಾಗಿಟ್ಟದ್ದು ಆಕಿಗೂ ಗೊತ್ತಾಗೇತಿ.

ಸೋಮಣ್ಣ : ಆಯ್ತಲ್ಲ, ನಾನ ಽ ಹೇಳಬೇಕಂತಿದ್ದೆ. ಇನ್ನ ಹೇಳಬೇಕಾದ್ದ ಏನಿಲ್ಲ ಅಂಧಂಗಾಯ್ತು.

ತಾಯಿ : ಹಿಂಗಂದರ ಹೆಂಗೋ ತಮ್ಮ? ಇದನ್ನ ಕೇಳಿ, ಬಂದ ಗಾಡ್ಯಾಗ ತಂದೀಕೂಡ ತಿರಿಗಿ ಹೊಂಟಾಳ ಆಗಲೇ.

ಸೋಮಣ್ಣ : ಹೋಗನ್ನು. ಬೇಕಾದಾಗ ನಾನ ಽ ಹೋಗಿ ಕರಕೊಂಬರತೀನಿ. ನನ್ನ ಕೇಳಿದರ ಹೇಳದ ಽ ಕೇಳದ ಽ ಬಂದದ್ದ ಽ ತಪ್ಪು.

ರಾಮಣ್ಣ : ಆಯ್ತಲ್ಲವಾ, ದೊಡ್ಡ ಮನಿಶಾ ಅಪ್ಪಣೆ ಕೊಟ್ಟ. ಲಕ್ಷ್ಮೀ, ಬಾ ಹೋಗೋಣು.

ತಾಯಿ : ಏನ ಮಾತಾಡ್ತೀಯೋ ಸೋಮೂ ? ಹೇಳಾವರ ಕೇಳಾವರ ಯಾರಿಲ್ಲೇನ ನಿನಗ ?

ಸೋಮಣ್ಣ : ನೀ ಇದ್ದೀಯಲ್ಲಬೆ, ನನ್ನ ಪಾಪ ತೊಂಬತ್ತೊಂಬತ್ತಾಗಿದ್ದವು. ಇದೊಂದ ಆದರ ಪೂರ ನೂರ ಆಗತಾವ. ಆಮ್ಯಾಲ ಎಲ್ಲಾ ಬಿಟ್ಟು ಹೇಂತಿಗಿ ಗಂಡಾಗಿ, ನಿನಗ ಮಗಾ ಆಗಿ, ಊರಿಗಿ ಸಜ್ಜನ ಆಗಿ ಬದಕ್ತೀನಂತ. ಆಯ್ತು ? ಅಲ್ಲೀತನಕಾ ಕಸೂತಿ ಬಿಡಸ್ತಾ, ಗುಲಾಬಿ ಕನಸ ಕಾಣತಾ ತೌರಿನಾಗ ಬಿದ್ದಕೊಂಡಿರಲಿ.
(ರಾಮಣ್ಣನಿಗೆ)

ನಾ ಹೇಳಿದ್ದ ತಮಗೂ ತಿಳೀತಲ್ಲ ?

ರಾಮಣ್ಣ : ಸೋಮೂ, ನೀನು ಶ್ರೀಮಂತ. ಹಣದಿಂದ ಏನ ಬೇಕಾದ್ದನ್ನ ಕೊಳ್ಳಬಲ್ಲಿಯಪ್ಪ, ಹೊಸಾ ಹೆಂತೀನ್ನ ಕೂಡ. ಈಗ ಲಕ್ಷ್ಮಿ ನಿನಗ ಬೇಕಿಲ್ಲ ಅಂಥಂಗಾಯ್ತು. ಲಕ್ಷ್ಮೀ, ಬಾರವಾ.

ಲಕ್ಷ್ಮಿ : ಅತ್ತೀ ಮೈಯಾಗ ಆರಾಮಿಲ್ಲ, ಅವರನ್ನ ಯಾರ ನೋಡಿಕೊಳ್ತಾರಪ ?

ತಾಯಿ : ಏನ ರಾಮಣ್ಣ. ಹಿಂಗ ಮಾಡತೀ, ನಿನಗೂ ಸಮ ಬುದ್ಧಿ ಇಲ್ಲಂದರ ಹೆಂಗ ?

ರಾಮಣ್ಣ : ಇನ್ನ ಈ ಮನ್ಯಾಗ ಒಂದ ಗಳಿಗಿ ಇರಾಕ ಶಕ್ಯ ಇಲ್ಲಬೇ. ಲಕ್ಷ್ಮೀ ಇರೋದಾದರ ಇದ್ದಕೊ. ಆದರ ಇಂದಿನಿಂದ ನಿನ್ನ ಪಾಲಿಗಿ ತಂದೀತಾಯೀ ಸತ್ತರಂತ ತಿಳಕೊ.
(ರಭಸದಿಂದ ಹೋಗುವನು. ಲಕ್ಷ್ಮಿ ಅಳುವಳು.)

ತಾಯಿ : ರಾಮಣ್ಣಾ, ರಾಮಣ್ಣಾ ನನ್ನ ಮಾತು ಕೇಳು....
(ರಾಮಣ್ಣ ಮರೆಯಾದೊಡನೆ ತಾಯಿಗೆ ನಿರಾಸೆಯಾಗಿದೆ.)

ಸೋಮಣ್ಣ : ಯಾರಲೇ ಅಲ್ಲಿ ?
(ಮಾರುತಿ ಬರುವನು.)

ಅಂಥಾಂಗ ನಿನ್ನ ಸೊಸೀಗಿ ಇವನ ಪರಿಚಯ ಮಾಡಿಕೊಡ್ಲಿಲ್ಲ. ಅಲ್ಲ ? ನೋಡ ಽ ಇವ ಽ ಚೆಲಿವೀಗಂಡ. ಚೆಲಿವೀನ ಕೆಡಿಸಿ

ನಾನS ಕೊಂದೆ ಅಂತ ಅವ್ವಗ ಸಂಶೆ. ಏನಪಾ, ಚೆಲಿವೀ ಸಾವಿಗಿ ನಾ ಏನೊ ಕಾರಣ? ಅಂಥಾ ಬದ್ಮಾಸನS ನಾನು?

ಮಾರುತಿ : ಛೇಛೇ ಅಲ್ಲ ತಗೀರಿ.

ಸೋಮಣ್ಣ : ಏನ ಅಲ್ಲರೀ ಅಂತೀಯೋ ಬೋಳೀಮಗನ? ಚೆಲಿವೀನ ಕೆಡಿಸಿದ್ದೂ ನಾನS, ಅವಳು ಸಾಯೋದಕ್ಕೂ ನಾನS ಕಾರಣ. ಅದS ನನ್ನ ತೊಂಬತ್ತೊಂಬತ್ತನೇ ಪಾಪ. ಮೋತೀ ಹಂಗ ಮಾಡಬ್ಯಾಡ, ಹೊಟ್ಟೀಮ್ಯಾಲ ಒದೀತೀನಿ... ಹಾಂಗ ಬಾ ಹಾದಿಗೆ. ಹೊರ ಹೋಗಿ ಯಾರೋ ಬಂದಾರ ನೋಡ ಹೋಗು.
(ಮಾರುತಿ ಹೋಗಿ ದಾಸನನ್ನು ಕರೆತರುವನು. ಅವನನ್ನು ಗಮನಿಸಿ ಲಕ್ಷ್ಮೀ, ತಾಯಿ ಮರೆಯಾಗುವರು. ಸೋಮಣ್ಣನ ವ್ಯಂಗ್ಯವೀಗ ಇನ್ನೂ ಮೊನೆಯಾಗುತ್ತದೆ.)

ಸೋಮಣ್ಣ : ಬಾ ಮಾವಾ, ಸಂಗೀತಾ ಸಂತೋಷವಾಗಿದ್ದಾಳಾ?

ದಾಸ : (ಏನು ಹೇಳಬೇಕೆಂದು ತೋಚದೆ) ಹೂನ್ರಿ.

ಸೋಮಣ್ಣ : ಸಂಗೀತಾ ಆನಂದವಾಗಿದ್ದಾಳಾ?

ದಾಸ : ಹೂನ್ರಿ.

ಸೋಮಣ್ಣ : ಇನ್ನಮ್ಯಾಲೆ ಮಾವ ಅಳಿಯಾ ಸೇರಿಕೊಂಡು ಮೀನ ಹಿಡಿಯೋದರ ಬಗ್ಗೆ ಮಾತಾಡೋಣ : ಮಾವಾ, ಈ ಕೋಟ ಹಾಕ್ಕೊಂಡ ಗಾಳಾ ಹಾಕಿದರ ಮೀನ ಸಿಕ್ಕಾವೇನು?

ದಾಸ : ಈ ಕೋಟ ನಿಮಗ ಭಾಳ ಚಂದ ಕಾಣತೈತ್ರಿ ಖರೆ ಹೇಳತೀನಿ, ನೀವು ಈ ಕೋಟ ಹಾಕಿದಾಗ ಥೇಟ ಕಾಮಣ್ಣನ್ಹಾಂಗ ಕಾಣತೀರಿ. ಚಿನ್ನದವೇನ್ರಿ ಇದರ ಗುಂಡಿ?

ಸೋಮಣ್ಣ : ನಿನಗ ಚಂದ ಕಂಡರ ಏನ ಬಂತೋ ಮಾವ? ನಿನ್ನ ಮಗಳಿಗಿ ಕಾಣಬೇಕಲ್ಲ!

ದಾಸ : ಬೆಂಕೀ ಹಂತ್ಯಾಕ ಬೆಣ್ಣಿ ಇದ್ದರ ಎಷ್ಟ ದಿನ ಕರಗದS ಇದ್ದೀತ್ರಿ? ಸಾವ್ಕಾರ್ರ. ಇಚೀಚೇ ಪವಾಡ ಕಮ್ಮೀ ಆಗ್ಯಾವ. ಇಲ್ಲದಿದ್ದರ ನಾನS ಒಂದ ಪವಾಡ ಮಾಡಿ ನನ್ನ ಮಗಳು ಸಂಗೀತಾ ನಿಮ್ಮ ಬೆನ್ನ ಹತ್ತಿ ಮಾವಾ ಮಾವಾ ಅನ್ನೋ ಹಾಂಗ ಮಾಡತಿದ್ದೆ.

ಸೋಮಣ್ಣ : ಮಾವಾ, ಮೀನಿನಾಗ ಮೀನು ಯಾವುದು ಶ್ರೇಷ್ಠ?

ದಾಸ : ನಾ ಬರೀ ಕೆರ್ಯಾಗನ ಮೀನ ತಿಂದಿದೀನ್ರಿ; ಅಷ್ಟ ಮಾಹಿತಿ ಇಲ್ಲ.

ಸೋಮಣ್ಣ : ನಾನS ಹೇಳತೀನಿ; ಮೀನಿನಾಗ ಅಗ್ಗದೀ ರುಚಿಕಟ್ಟಾದ ಮೀನು ಯಾವುದಪಾ ಅಂದರ ಕೈಯಿಂದ ತಪ್ಪಿಸಿಕೊಂಡ ಹೋಗತದಲ್ಲಾ-ಅದು. ತಪ್ಪಿಸಿಕೊಂಡಷ್ಟೂ ಅದನ್ನ ಬಿಡಬಾರದಂತ ಹಟ ಬರತದ.
(ತಕ್ಷಣ ನಾಟಕವಾಡುವುದನ್ನು ಬಿಟ್ಟು ದಾಸನ ತೋಳು ಹಿಡಿದುಕೊಳ್ಳುವನು. ಮಾರುತಿ ಇದ್ದುದು ಗಮನಕ್ಕೆ ಬರುತ್ತದೆ. ಅವನಿಗೆ ಹೊರಗಡೆ ಹೋಗುವುದಕ್ಕೆ ಸೂಚಿಸುವನು, ಅವನು ಹೋಗುವನು.)

ಖರೆ ಹೇಳೊ ದಾಸ, ನನ್ನಲ್ಲೇನ ಕಮ್ಮಿ ಐತಿ?

ದಾಸ : (ಸಾವರಿಸಿಕೊಳ್ಳುತ್ತ)
ಕಮ್ಮಿ? ಏನ್ರಿ ಸಾವ್ಕಾರ ಹಿಂಗಂತೀರಿ? ಮನೀ ತುಂಬ ರೊಕ್ಕೇನು! ಊರ ತುಂಬ ಆಸ್ತಿಯೇನು! ಬೇಕಂದರ ಸರ್ಕಾರ ಕೊಳ್ಳತೀರಿ, ಮಾರತೀರಿ!

ಸೋಮಣ್ಣ : ನನ್ನ ಐಸಿರಿಯೆಲ್ಲಾ ವ್ಯರ್ಥ ಅಂದಳಲ್ಲೊ ನಿನ್ನ ಮಗಳು!
(ದೂಡುವನು, ದಾಸ ಬಿದ್ದು ಸಾವರಿಸಿಕೊಳ್ಳುತ್ತ ಏಳುವನು.)

ದಾಸ : ಏಪಾ, ಹರೇದಾಗ ತಿಳಿವಳಿಕಿ ಇರಾಣೆಲ್ಲರೀ. ಯಾವುದರ ಹರೇದ ಹುಡಿಗೀನ್ನ ಏನಾರ ಕೇಳ್ರಿ, ಅದು ಮೊದಲ ಮಾಡೋ ಕೆಲಸ ಏನ ಗೊತ್ತೈತ್ರಿ? – ಮಡಿಪಕ್ಕಿ ಕೆರಕೊಳ್ಳೋದು.

ಸೋಮಣ್ಣ : ಖರೆ ಹೇಳು. ನನಗ ವಯಸ್ಸಾಗೇತೇನು?

ದಾಸ : ಛೇಛೇ ಸಾವ್ಕಾರ್ರಿಗಿ ವಯಸ್ಸಾಗೋದಂದರೇನ್ರಿ! ಕುಸ್ತೀ ಹುಡುಗನ್ಹಾಂಗ ಕಾಣತೀರಿ!

ಸೋಮಣ್ಣ : ಬಯಲಾಟದ ಬಣ್ಣಾ ಅಳಿಸೋದS ಇಲ್ಲ ನೀನು. ರೊಕ್ಕದಾಸೇಕಾಗಿ ಏನೇನೋ ಬೊಗಳ್ತಿ. ನಿಮ್ಮ ಜಾತ್ಯಾಗ ಹುಟ್ಟೋ ಹುಡುಗೀನS ಅಲ್ಲೊ ಅವಳು. ಯಾವಳೋ ರಾಜಕುಮಾರಿ ನಿನಗ ತಪ್ಪಿ ಸಿಕ್ಕಾಳ.

ದಾಸ : ಅದS ಅಂತೇನ್ರಿ ನಾನೂ, ಯಾವ ಕೆಟ್ಟ ಮುಹೂರ್ತದಾಗ ಹುಟ್ಯಾಳೊ, ಗರತಿ ಗಂಗವ್ವ ಆಗತೇನಂತಾಳ! ದಾಸರ ಜಾತ್ಯಾಗ ಗರತೇರಿದ್ದದ್ದನ್ನ ಹಿಂದ ಮುಂದ ಎಂದಾದರೂ ಕೇಳೀರೇನ್ರಿ?

ಸೋಮಣ್ಣ : (ಖೇದದಿಂದ) ಬುದ್ಧಿಗಲಿತಾಗಿನಿಂದ ನೋಡತೇನು : ಹೆಂಗಸು ಗಂಡಸು, ಯಾವುದೂ ನನ್ನ ಎದರ ನಿಂತಿರಲಿಲ್ಲ. ಎಲ್ಲಾರೂ ನನಗ s ದೇವರಂತಿದ್ದರು. ಸುಳ್ಳ ಹೇಳಿದರೋ ಏನೊ. ಯಕ್ಕಶ್ಚಿತ್ ಒಂದ ದಾಸರ ಹುಡುಗಿ ಎದರ ನಿಂತ ಖರೆ ಹೇಳಿದಳಲ್ಲೊ !

ದಾಸ : ಏನಂತರಿ ?

ಸೋಮಣ್ಣ : ನಾ ಕೊಳಕ ಅಂತ.

ದಾಸ : ಛೇ ಛೇ...

ಸೋಮಣ್ಣ : ನನ್ನ ನೋಡಿದಾಗೆಲ್ಲಾ ಆಕೀ ಕಣ್ಣ ಅದನ್ನ s ಹೇಳತಾವ! ಆದರ ನಾ ಸೋಲೋದಿಲ್ಲಂತ ಆಕಿಗಿ ಹೇಳು.

ದಾಸ : ಖರೇ ಹೇಳತೇನ್ರಿ ಸಾವ್ಕಾರ s, ನನಗೆಷ್ಟ ಸಾಧ್ಯ ಐತಿ ಅಷ್ಟ ಕೆಡಕನ್ನಿಸ್ತು. ಬೇಕಾದರ, ನಿರಾಸೆ ಬಗ್ಗೆ ಒಂದ ಪದ ಐತಿ, ಹಾಡಲೇನ್ರಿ ?
(ಸೋಮಣ್ಣನ ಮೇಲೆ ತನ್ನ ಮಾತಿ ಪ್ರಭಾವ ಏನೇನೂ ಆಗದೇ ಇರುವುದನ್ನು ಗಮನಿಸಿ)

ಒರಟ ಹುಡಿಗಿ, ಭಾಳ ಒರಟ ಹುಡುಗಿ. ನಿನ್ನಿ ನನಗ s ನಾಯಿ ಅಂದ್ಲು ! ಬೇಕಾದರ ಹಿಂಗ ಮಾಡೋಣೇನ್ರಿ ? ಸಂಗೀತಾ ಹಾದಿಗಿ ಬರೂತನಕ ಸಾವಂತ್ರೀಬಾಯೀನ್ನ ನೋಡತೀರೇನು ? ಹೊಸಾ ಸೀರಿ ಉಟ್ಟಾಗ ಆಕೀನೂ ಚಂದ ಕಾಣತಾಳ. ಹೊಟ್ಟೀಕಿಚ್ಚಿನಿಂದ ಸಂಗೀತಾ ಲಗು ಹಾದಿಗೆ ಬಂದರೂ ಬಂದಾಳು...

ಸೋಮಣ್ಣ : ನಿನಗೂ ನಾಯಿ ಅಂದಳಲ್ಲ,-ಅದ ಬರೋಬರಿ. ಹೆಚ್ಚ ಮಾತಾಡಬ್ಯಾಡ, ನಿನಗೀಗ ಎಷ್ಟ ರೊಕ್ಕ ಬೇಕು ? ತಗೊ.
(ಹಣ ಕೊಡುವನು. ದಾಸ ತಗೊಂಡು ಹಾಗೇ ನಿಲ್ಲುವನು.)

ಮತ್ತೇನು ?

ದಾಸ : ನಾವು ಕಲಾವಿದರು....

ಸೋಮಣ್ಣ : ಕಲಾವಿದರಿಗಿನ್ನೇನಾಗಬೇಕು ?

ದಾಸ : ಈ ಕೋಟ ಒಂದ ಕೊಟ್ಟರ...

ಯಾಕಂದರ, ಸಾಪ್ಕಾರರ ಮಾವ ಅಂದಮ್ಯಾಲ ಒಂದ ಕೋಟ ಇದ್ದರ ಚೆಲೋ ಅಂತ.....
(ಸೋಮಣ್ಣ ತಕ್ಷಣ ಕಳಚಿ ಕೋಟು ಕೊಡುವನು.)

ಸೋಮಣ್ಣ : ಇನ್ನ ಹೊರಡು.
(ದಾಸ ಆನಂದದಿಂದ ಹೋಗುವನು. ಮೇಳ ರಂಗವನ್ನಾಕ್ರಮಿಸುವುದು.)

ಮೇಳ : ಒಂದಾನೊಂದೂರಾಗ ರಾಜಕುಮಾರಿ
ಮದುವೆಯಾದಳು ಒಂದು ಪ್ರಾಣಿಯ ಜೋಡಿ |
ಮೈತುಂಬ ಕೂದಲು ಕಣ್ಣಾಗ ಪಿಸರಾ
ಹೇಸಿ ಇಟ್ಟಾಳದಕ ಕರಡಿಯ ಹೆಸರಾ ||

ಕಥೆಗಾರ : ನೋಡ್ರಿ ಶಿವಾ, ಈಗೊಂದು ಅಡ್ಡಕತಿ ಹೇಳತೇವ್ರಿ,

ಒಂದಾನೊಂದೂರಾಗ ಒಬ್ಬ ರಾಜಕುಮಾರಿ ಇದ್ದಳು.

ದೊಡ್ಡವಳಾದಳು. ಮದಿವೀ ವಯಸ್ಸಿಗಿ ಬಂದಳು.

ಎಷ್ಟೋ ಮಂದಿ ರಾಜಕುಮಾರರು ಆಕೀನ್ನ ನೋಡಿ

ನಿಟ್ಟುಸಿರ ಬಿಡತಾರರಿ.

ಹಿಮ್ಮೇಳ : ನಿದ್ಯಾಗ ಒದ್ದಿ ಆಗತಾರರಿ.

ಕಥೆಗಾರ : ಆದರ ಆಕಿ ಯಾರನ್ನೂ ಮದಿವ್ಯಾಗಲಿಲ್ಲ. ಅವ್ವ ಅಪ್ಪಗ ಚಿಂತಿ ಆಯ್ತು. ಬೆಳದ ಮಗಳ ಗತಿ ಹೆಂಗಪಾ...? ಅಂದರು. ರಾಜ್ಯೇಕ ಇನ್ನೇನ ದಿಕ್ಕಪ ಅಂದರು. ಪರಿಪರಿಯಿಂದ ಮಗಳ ಮನಸ್ಸು ಒಲಿಸಾಕ ಪ್ರಯತ್ನ ಮಾಡಿದರೂ ಮಗಳು, ಶಿವಾ ಒಪ್ಪಲಿಲ್ಲ. ಯಾರನ್ನ ತೋರಿಸಿದರೂ,-

ಎಪಾ, ಇವ ಮೂಗ ಸುದ್ದಿಲ್ಲಾ, ನೆಗಡ್ಯಾಗ್ಯಾವ. ಎಪಾ, ಇವನ ಕಾಲ ಸಮ ಇಲ್ಲಾ ಕುಂಟ ಇದ್ದಾನ – ಅಂತ ಹೇಳತಿದ್ದಳು. ಕಡೀಕಂದರ ಅವ್ವಾ, ಅಪ್ಪಾ ಬ್ಯಾಸತ್ತರು.

"ಥೂ ನಿನ್ನ ಕರಡಿ ಒಯ್ಯಲಿ" ಅಂತ ಶಾಪ ಹಾಕಿದರು. ಆಗ ನೋಡ್ರಿ ಶಿವಾ, ಚಮತ್ಕಾರ ನಡೀತು : ಏಕದಂ ಒಂದ ದೊಡ್ಡ ಕರಡಿ ನೆಲಕ್ಕ ಮುಗಿಲಿಗೆ ಏಕಾಗಿ ಎದರ ನಿಂತು ಆಕೀನ ಹೊತ್ತುಕೊಂಡ ಹೋಯ್ತು! ತನ್ನ ಗವೀಗಿ ಎತ್ತಿಕೊಂಡ್ಹೋಗಿ ಮದಿವೀ ಮಾಡಿಕೊಂಡಿತು! ಆಯ್ತಲ್ಲ, ಮಂಗಳಸೂತ್ರ ಕರಡಿ ಕಟ್ಟಿದರೂ ಒಂದS. ಮನಿಶ್ಯಾ ಕಟ್ಟಿದರೂ ಒಂದ. ಕಡೀಕಂದರ ಕರಡೀನS ಗಂಡ ಅಂತ ಒಪ್ಪಿಕೋಬೇಕಾತರಿ. ಶಿವಾ,-

ಮೊದಲನೇ ರಾತ್ರಿ ಹಾಸಿಗ್ಯಾಗ ಕುಂತು ವಿಚಾರ ಮಾಡತಾಳ; ಶಿವನ ಎಂಥಾ ಗಂಡನ್ನ ಕೊಟ್ಟೆಪ! ನಾ ಎಂಥಾ ಧಿಮಾಕಿನಾಕಿ. ಇಷ್ಟ ಮಂದಿ ನಾ ನೀ ಅನ್ನೋವಂಥಾ ಧೀಮಂತ ರಾಜಕುಮಾರರಿಗೆ ಹುಚ್ಚ ಹಚ್ಚಿದಾಕಿ. ಮೆಚ್ಚಿ ಬಂದ ದೇವತೆಗಳಿಗೆ ಮೂಗು ಮುರಿದಾಕಿ. ಅಂಥಾಕೀ ಸೊಕ್ಕ ಮುರ್ಯಾಕ ದೇವರS ಹಿಂಗ ಮಾಡಿದ್ಯಾ? ನಾ ಸರಿಕರೊಳಗ ಮೋತೀ ಹೆಂಗ ತೋರಿಸಲೊ ಶಿವನS? ಅವ್ವಾ ಅಪ್ಪಗ ಏನಂತ ಹೇಳಲೊ ಶಿವನ? ಅಂತ ಭಾರೀ ದೊಡ್ಡ ದುಃಖ ಮಾಡಿದಳು.

ಆ ಟೈಂದಲ್ಲಿ ಶಿವಾ ಪಾರೋತಿ ಆಕಾಶ ಗಮನ ಮಾಡ್ತಿರೋಣ, ಅವರ ಕಿವಿಗೆ ಈಕೀ ಬೀಳೋಣ. ಶಿವಾ ಅಲ್ಲಿಂದಲೇ ಆಕಾಶವಾಣಿ ಗುಡುಗಿದ. ಏನಂತ?

ಮಗಳೇ, ಜಗತ್ತಿನಾಗ ಪ್ರೀತಿ ಪ್ರೇಮಾ ಅಂದರ ಐತಿ ಭಾಳ ಮಹಿಮಾ! ನಿನ್ನ ಪ್ರೀತಿ ಪ್ರೇಮದಿಂದ ಬಂದಂಥಾ ದುಃಖ ದೂರ ಮಾಡಿಕೋಬೇಕವಾ. ಎಲಾ ಶಿವನ! ಹೌಂದಲ್ಲ!- ಅಂದ್ಲು. ಎದ್ಯಾಗ ಪ್ರೇಮಾ ಪ್ರೀತಿಯ ಬೆಂಕೀ ಹೊತ್ತಿಸಿಕೊಂಡಳು. ಪತಿದೇವರಾದಂಥಾ ಕರಡಿಯನ್ನ ಪ್ರದಕ್ಷಿಣೆ ಹಾಕಿದಳು. ಆಗ ನೋಡ್ರಿ ಶಿವಾ,-

ಮೇಳ : ಪ್ರೀತಿಯೆಂಬ ಬೆಂಕಯೆದುರಿಗೆ
ನೋಡೆನ್ನ ಶಿವನೆ
ಕರಡಿರೂಪ ಕರಗಿ ಹೋದವೇ ||

ಒಳಗ ಒಬ್ಬ ರಾಜಕುವರನೇ
ನೋಡೆನ್ನ ಶಿವನೆ
ಇವಳ ಧ್ಯಾನ ಮಾಡುತಿರುವನೇ ||

ಪ್ರೀತಿ ಪ್ರೇಮ ದೊಡ್ಡದಲ್ಲವೆ
ಹೇಳೆನ್ನ ಗುರುವೆ

ಪ್ರೀತಿ ಪ್ರೇಮ ದೊಡ್ಡದಲ್ಲವೇ
ಹೇಳೆನ್ನ ಗುರುವೆ
ಪ್ರೀತಿ ಪ್ರೇಮ ದೊಡ್ಡದಲ್ಲವೇ ||

(ಮೇಲಿನ ಅಡ್ಡಕತೆಯನ್ನು ಸೂತ್ರಧಾರ ಹೇಳುತ್ತಿದ್ದಂತೆ ಮೇಳದವರು ಅಭಿನಯಿಸುವರು.)
(ಮೇಳ ಸರಿದಾಗ ತೋಟದ ಮನೆಯಲ್ಲಿ ಸಾವಂತ್ರಿ ಮತ್ತು ನಾಯೀಮಗ ಕೂತಿದ್ದಾರೆ. ದಾಸ ಬರುವನು.)

ಸಾವಂತ್ರಿ : ಕೋಟ ಯಾರದು ?

ದಾಸ : ಸಾವಂತ್ರೀಬಾಯಿ ತುಸು ಮರ್ಯಾದಿ ಕೊಟ್ಟ ಮಾತಾಡು.

ಸಾವಂತ್ರಿ : ನಿನಗೂ ಮರ್ಯಾದೀನಾ ?

ದಾಸ : ನಾ ಅಂದರ ಏನಂದುಕೊಂಡಿ ? ನಾ ಯಾವಾಗಲೂ ಮರ್ಯಾದಸ್ಥ. ನಿನ್ನ ಮದವೀ ಮಾಡಿಕೊಂಡ ಮ್ಯಾಲ ತುಸು ಕಮ್ಮಿ ಆಯ್ತಷ್ಟ. ಈ ಕೋಟ ಹಾಕ್ಕೊಂಡ ಊರಾಗ ಬಂದರ ಮೂರ್‍ನಾಲ್ಕು ಮಂದಿ ನಮಸ್ಕಾರ ಮಾಡಿದರು, ಗೊತ್ತಾ ?

ಸಾವಂತ್ರಿ : ಖರೇ ಹೇಳ ಆ ಕೋಟ ಹೆಂಗ ಸಿಕ್ಕಿತು ?

ದಾಸ : ಛೇ ಮತ್ತ ಕೇಳ್ತಾಳಲ್ಲೊ ! ಸಾವ್ಕಾರ ಹಾಕ್ಕೊಂಡಿದ್ದರು. ಏನ ಛೆಲೋ ಐತಿರಿ ಇದು ! ನನ್ನ ಹಂತ್ಯಾಕ ಈ ಕೋಟ ಇದ್ದಿದ್ದರ ಉಸರಿಗೊಮ್ಮಿ ನಿಮ್ಮ ಹೆಸರ ಹೇಳತಿದ್ದೆ-ಅಂದೆ. ಕೊಟ್ಟರು.

ಸಾವಂತ್ರಿ : ಹಂಗಾದರ ನಾ ಹೇಳಿದ್ದ ಕೇಳಿಲ್ಲ ಅಂಥಂಗಾಯ್ತು.

ದಾಸ : ಹೇಳತೇನ ಸಮಾಧಾನ ತಾಳು. ಹೋಗಿ ಮೊದಲ ಗಲಾಸ ತಗೊಂಬಾ. ಅಪ್ಪಾ ನಾಯಪ್ಪಾ, ನಿನಗಷ್ಟ ಬೇಕೇನು ? ಬೇಕಿದ್ದರ ಮುಂದ ಬಾ...
(ಸಾವಂತ್ರಿ ಒಳಗೆ ಹೋಗಿ ಮೂರು ಲೋಟ ತರುವಳು. ದಾಸ ತನ್ನ ಕೋಟಿನ ಜೇಬಿನಿಂದ ಸೆರೆಯ ಬಾಟ್ಲಿ ತೆಗೆದು ಮೂರಕ್ಕೂ ಸುರಿಯುವನು.)

ಇಬ್ಬರೂ ನನ್ನ ಹೆಸರ ಹೇಳಿ ಕುಡೀರಿ.
(ಮೂವರೂ ಕುಡಿಯತೊಡಗುವರು. ಆಗಾಗ ದಾಸ ಭರ್ತಿ ಮಾಡುವನು.)

ಸಾವಂತ್ರಿ : ಸಾವ್ಕಾರನ್ನ ಕೇಳಿದೇನ ?

ದಾಸ : ಕೇಳಿದೆ. ಅದಕ್ಕ ಈ ಕೋಟ ಕೊಟ್ಟ ಹೊರಬೀಳು ಅಂದರು.

ಸಾವಂತ್ರಿ : ಥೂ ನೀ ಬರೋಬರಿ ಕೇಳಿಲ್ಲ.

ದಾಸ : ಪ್ರಿಯೆ...

ಸಾವಂತ್ರಿ : ಇನ್ನೊಮ್ಮಿ ಹಂಗದರ ಈ ಕೋಟ ಕಸೀತೀನಿ ಅಷ್ಟ.

ದಾಸ : ನಿನ್ನ ಹಂತ್ಯಾಕಿನ ಕೋಟೂ ಕೊಡೋದಿಲ್ಲಂತಿ. ಇದನ್ನೂ ಕಸೀತೀನಿ ಅಂತಿ, ಥಂಡಿ ಹತ್ತಿ ನಾ ಸತ್ತಹೋಗಲೆಂತೀ ಏನು ?
(ಈಗ ಇಬ್ಬರೂ ಪರಸ್ಪರ ಹಿಂಸಿಸುವ ಆಟಕ್ಕೆ ತೊಡಗುವರು.)

ಸಾವಂತ್ರಿ : ಅವ್ ನನ ಗಂಡಾ! ನಿನ್ನ ಮ್ಯಾಲ ನಾ ಭಾಳ ಪಿರೂತಿ. ಎಷ್ಟ ಪಿರೂತಿ ಅಂದರ ನಾಕೈದ ಬರೆ ನನ್ನ ಕನಸಿನಾಗ ಬಂದಿದ್ದಿ, ಆದರ ನಾಕೈದ ಬರೇನೂ ಸತ್ತಿದ್ದಿ.
(ಗಹಗಹಿಸಿ ನಗುವಳು.)

ದಾಸ : ನಾ ಕುಡದಾಗ ಪ್ರತಿಯೊಬ್ಬರನ್ನ ಅವರ ನಿಜವಾದ ಹೆಸರಿನಿಂದ  ಕರೀತೀನಿ. ಯಾರೂ ಸಿಟ್ಟಾಗಬಾರದು. ಸಾವಂತ್ರೀಬಾಯೀ, ನಿನ್ನ ಹೆಸರ ಹೇಳಲಿ ?-ಚರಂಡಿ! ಹೆ ಹೆ ಹೆ...
(ಇವನೂ ಗಹಗಹಿಸಿ ನಗುವನು. ಆಟಬಿಟ್ಟು.)

ಸಾವಂತ್ರಿ : ನೀ ಸಾವ್ಕಾರನ್ನ ಕೇಳೇ ಇಲ್ಲ.

ದಾಸ : ಕೇಳೀನಿ ಅಂದರ.

ಸಾವಂತ್ರಿ : ಸುಳ್ಳ ಯಾಕ ಹೇಳ್ತಿಯೋ ಭಾಡ್ಯಾ.

ದಾಸ : ಭಾಡ್ಯಾ, ಅದನ್ನ ನೂರ ಬರೆ ಹೇಳೀದಿ. ಬ್ಯಾರೇ ಏನಾದರೂ ಇದ್ದರ ಬೊಗಳು.

ಸಾವಂತ್ರಿ : ಲುಚ್ಚಾ.

ದಾಸ : ಇದನ್ನೂ ಸಾವಿರ ಬರೆ ಹೇಳೇದಿ.

ಸಾವಂತ್ರಿ : ಸುಳ್ಳ.

ದಾಸ : ಸುಳ್ಳ? ಏನಪಾ ನಾಯಪ್ಪಾ, ನನ್ನ ಮಾತು ಕೇಳಿ ನಿನಗ ನೆಗಡಿ ಆದರೂ ಅಡ್ಡೀಯಿಲ್ಲ. ಒಂದ ಮಾತ ಕೇಳ್ತೀನಿ-ಸಾವ್ಕಾರಗ ಈಕಿಗೆ-ಜೋಡೀಯೇನಪ? ಈಕೀ ವಯಸ್ಸೇನು? ಮಾತೇನು? ಸಾವ್ಕಾರ ಬೇಕಂತಾಳ, ಒಪ್ಪಕೊಂಡಾರ ಽ ಹೆಂಗ, ನೀನ ಽ ಹೇಳಪಾ. ನೀ ಒಬ್ಬ, ಆ ನಾಗ್ಯಾ ಓಡಿಸಿದಿ. ಈಗ ತಗೊಳ್ಳಪಾ....

ಸಾವಂತ್ರಿ : ಇನ್ನಷ್ಟ ಸುರಿಯೋ ಭಾಡ್ಯಾ.

ದಾಸ : ಏ ಚರಂಡಿ, ನನ್ನಂಥಾ ಇಸ್ವಾಸಿಕ ಗಂಡ ನಿನಗ ಹುಡಿಕ್ಯಾಡಿದರೂ ಸಿಕ್ಕಾನೇನ? ಹೋಗಲಿ ಬಾ, ಆಮ್ಯಾಲ ಹೇಳತೇನಂತ. ಸಂಗೀತಾ ಉಂಡಳೇನ?

ಸಾವಂತ್ರಿ : ಹರ್ಯಾಗಿಂದ ಉಂಡ ಽ ಇಲ್ಲ. ಒಂದ ಸವನ ಮಂಡ ಹಟ ಹಿಡದ್ದಾಳ.

ದಾಸ : ಏಳ ಏಳು. ಹಸಿವಾಗೇತಿ ನನಗ, ಊಟಕ್ಕ ಹಾಕೇಳು. ನಾಯಪ್ಪಾ ನಾಳಿ ಮುಂಜಾನಿ ಭೇಟಿ ಆಗಪಾ.

ನಾಯೀಮಗ : ಯಾಕ?

ದಾಸ : ಯಾಕಂದರ ಒಂದ ಚಂದ ಗುಡ್ ಮಾರ್ಲಿಂಗ್ ಹೇಳತೀನಿ.
(ಹೆಹೆಹೇ ಎಂದು ನಗುತ್ತ ಹೋಗುವನು. ಸಾವಂತ್ರಿಯೂ ಹೋಗುವಳು. ತುಸು ಸಮಯ ನಾಯೀಮಗ ಹಾಗೇ ಕೂತಿದ್ದು ಬಾಟ್ಲಿಯಲ್ಲಿ ದಾಸ ಬಿಟ್ಟುಹೋದ ಸೆರೆಯನ್ನೂ ಗಟಗಟ ಕುಡಿಯುವನು. ಮತ್ತು ನೆತ್ತಿಗೇರಿದ ಬೆರಗಿನಲ್ಲಿ ಹಾಗೇ ಕೂತಿದ್ದಾಗ ಸಾವಂತ್ರಿ ಬಂದು ಅವನಿಗೆ ಊಟಕ್ಕೆ ಹಾಕುವಳು.)

ಸಾವಂತ್ರಿ : ನೀನೂ ಊಟಾ ಮಾಡ ಬಾ ಮಗಳ ಽ.

ಶಾರಿ : (ಒಳಗಿನಿಂದ)

ನನಗ ಬ್ಯಾಡ. ಕೂತಾನಲ್ಲ, ಅವನಿಗೇ ಇನ್ನಷ್ಟ ಹಾಕು. ಯಾಕಂದರ ಪಾಪ, ಹೊಟ್ಟೀ ಸಲುವಾಗಿ ನಾಯಿ ಆಗ್ಯಾನ ನೋಡು.
(ಈ ಮಾತಿನಿಂದ ನೋವಾಗಿ ನಾಯೀಮಗ ಊಟ ಮಾಡದೇ ಹಾಗೇ ಎಲೆ ಎತ್ತಿಕೊಂಡು ಹೊರಗೆ ಹೋಗುವನು.)

ಸಾವಂತ್ರಿ : ಇಬ್ಬರಿಗೂ ಏನಾಗೇತಿ ? ಹರ್ಯಾಗಿಂದ ಊಟ ಬಿಟ್ಟದೀರಿ.
(ಎನ್ನುತ್ತ ಒಳಗೆ ಗಂಡನಲ್ಲಿಗೆ ಹೋಗುವಳು. ನಾಯೀಮಗ ಎಲೆ ಎಸೆದು ಒಳ ಬರುವನು. ಶಾರಿಯೂ ಬರುತ್ತಾಳೆ.)

ಸಾವಂತ್ರಿ : ನೀ ಯಾಕ ಬಿಟ್ಟಿ ?

ನಾಯೀಮಗ : ನೀನೂ ಊಟಾ ಮಾಡ ಹಂಗಾದರ.

ಶಾರಿ : ನಾ ನಿನ್ಹಾಂಗ ಹೊಟ್ಟೀ ಮಾರಿಕೊಂಡಿಲ್ಲ. ನಿಂದೆಲ್ಲಾ ನೋಡೇನಿ. ಉಣ್ಣತಿದ್ದರು ಉಣ್ಣು, ಇಲ್ಲದಿದ್ದರ ಬಿದ್ದಕೊ.

ನಾಯೀಮಗ : ನಾ ಸಾಯತೀನಿ.

ಶಾರಿ : ಏನಂದಿ ?

ನಾಯೀಮಗ : ಸಾವ್ಕರ ನನ್ನ ಕೊಂದರ ಕೊಲ್ಲಲಿ. ನೀ ಪಾರಾಗಿ ಹೋಗು.
(ಶಾರಿಯ ಮನಸ್ಸು ಕರಗುತ್ತದೆ)

ಶಾರಿ : ಬಾ ಇಲ್ಲಿ. (ಬಂದು ನಿಲ್ಲುವನು.)

ಕುಂತಕೊ. (ಕೂರುವನು)

ನಿನ್ನ ಹೆಸರೇನಂದಿ ?

ನಾಯೀಮಗ : ನಾಯೀಮಗ! ನಮ್ಮ ಸಾವ್ಕಾರ ಏ ನಾಯೀ ಅಂತ ಕರೀತಾರ.

ಶಾರಿ : ನಾಯೀಮಗ! ಮನಸೇರಿಗಿ ನಾಯೀ ಹೆಸರ ಇಡಾಕ ಶಕ್ಯ ಽ ಇಲ್ಲ. ಖರೇನ ಽ ನೀ ನಾಯೀಮಗಾನ ?
(ಅಲ್ಲವೆಂಬಂತೆ ಕತ್ತು ಹಾಕುವನು.)

ಮತ್ತ ನಾಯೇ ಅಂತ ಕರದಾಗ ಯಾಕ ಓ ಅಂತಿ ? ನನ್ನ ಹೆಸರೇನ ಹೇಳು.

ನಾಯೀಮಗ : ಸಂಗೀತಾ.

ಶಾರಿ : ಅಲ್ಲ, ಶಾರಿ. ಅದು ಬಯಲಾಟದಾಗಿನ ಹೆಸರು. ನಿನ್ನ ಸಾವ್ಕಾರ ಹಾಂಗಂತ ಕರೀತಾನ. ನಿನ್ನ ಸಾವ್ಕಾರಗ ಎರಡ ಕಣ್ಣದಾವ ಖರೆ. ಆದರ ಅವು ಬರೋಬರಿ ಕಾಣಸೂದ ಽ ಇಲ್ಲ. ಅದಕ್ಕ ಽ ಅವಗ ಮನಶೇರು ನಾಯೀಹಾಂಗ ಕಾಣಸ್ತಾರ. ನಾ ಸಂಗೀತಾನ ಹಾಂಗ ಕಾಣಸ್ತೀನಿ. ನಾ ಅಂತೀನಿ : ನೀ ಮನಶಾ ಅಂತ. ಹಾಂಗಿದ್ದರ ನಿನ್ನ ಹೆಸರು ಸಿದ್ದು. ಸಿದ್ಧರಾಮಾ-ಹೀಂಗೇನೋ ಇರಬೇಕು. ಒಪ್ಪತೀಯೇನು ?

ನಾಯೀಮಗ : ನೀ ಹೆಂಗ ಕರದರೂ ಓ ಅಂತೀನಿ.

ಶಾರಿ : ಹೆಂಗ ಕರದರೂ ಅಂದರ ? ಹಂದೇ ಅಂತ ಕರೀತೀನಿ. ಓ ಅಂತಿ ?

ನಾಯೀಮಗ : ಊಹೂ, ಸಿದ್ದೂ ಸಿದ್ದರಾಮಾ-ಹೆಂಗಂದರೂ.

ಶಾರಿ : ನಾನ ಽ ನಿನ್ನ ಸಾವ್ಕಾರಂತ ತಿಳಕೊ. ನಾ ಬಂದ ಕರೀತೀನಿ : ಏ ನಾಯೇ.

ನಾಯೀಮಗ : ಓ ಎಪಾ.

ಶಾರಿ : ಥೂ, ಓ ಅನ್ನೋದಿಲ್ಲ ಅಂದಿದ್ದಿ ?

ನಾಯೀಮಗ : ರೂಢಿ ತಪ್ಪವೊಲ್ದು.
(ಸಮೀಪ ಬಂದು ಅವನ ಬೆನ್ನಮೇಲೆ ಕೈ ಇಡುವಳು. ಆಮೆಯಂತೆ ಸಂಕೋಚಗೊಳ್ಳುವನು)

ಈ ಅಂಗಿ ಹೊಲಸೈತಿ.

ಶಾರಿ : ಹೌಂದು.

ನಾಯೀಮಗ : ಥೇಟ ನಾಯೀಚರ್ಮಧಾಂಗ ಽ ಐತಿ.

(ಎಂದು ಹೇಳಿ ಅವಳನ್ನು ನಗಿಸಲು ಪ್ರಯತ್ನಿಸುವನು. ಅವಳು ಮಂದಹಾಸ ಬೀರಿದೊಡನೆ ತುಂಬ ಖುಶಿಯಾಗುವನು.)

ಇದು ಇರೋತನಕ ನಾ ನಾಯೀ.... ಖೆ ಖೆ ಖೆ...

ಶಾರಿ : ನಿನಗ ರಾಜಕುಮಾರಿ ಮತ್ತ ಕರಡೀ ಕತಿ ಗೊತ್ತೈತೇನು ?

ನಾಯೀಮಗ : ಓಹೊ...

ಶಾರಿ : ಯಾವುದು ಹೇಳು.

ನಾಯೀಮಗ : ಅದ s. ರಾಜಕುಮಾರಿ ಕರಡೀನ ಮದಿವ್ಯಾಗಿ ಅತ್ತಗೊಂತ ಕುಂತ್ಲು. ಶಿವಾ ಬಂದ ಬುದ್ಧಿ ಹೇಳಿದ. ಹೇಳಾನಾ ಆಕಿ ಪ್ರೀತಿ ಹೊತ್ತಿಸಿದ್ಲು. ಕರಡೀ ಮೈ ಕರಗಿ ಅದರಾಗಿಂದ ಒಬ್ಬ ರಾಜಕುಮಾರ ಬಂದ...

ಶಾರಿ : ಕರಡೀ ಮೈ ಹೆಂಗ, ಹಿಂಗ ಕರಗಿತೇನ ?
(ಎನ್ನುತ್ತ ಅವನ ಅಂಗಿ ಹರಿಯುವಳು. ಇವನು ಅವಳು ಖುಶಿಗಾಗೆ ಹರಿಯುತ್ತಿರುವಳೆಂದು ಭಾವಿಸಿ ಖೆ ಖೆ ಖೆ ಎಂದು ನಗುತ್ತ ಎದ್ದು ಮೈ ಮುರಿದಾಡುತ್ತಾನೆ. ಅವಳೂ ನಗುತ್ತ ಪೂರ್ತಿ ಹರಿಯುತ್ತಾಳೆ. ಅವಳನ್ನು ಸಮೀಪದಿಂದ ನೋಡಿದೊಡನೆ ನಾಯೀಮಗ ತುಂಬ ಭಾವುಕನಾಗುತ್ತಾನೆ. ಜೊತೆಗೆ ಕುಡಿದುದೂ ನೆತ್ತಗೇರಿದೆ.)

ಶಾರಿ : ಮುಂದೇನಾಯ್ತು ?

ನಾಯೀಮಗ : ಗೊತ್ತಿಲ್ಲ.

ಶಾರಿ : ನಾ ಹೇಳಲಾ ? ರಾಜಕುಮಾರ ಹಾಡಿದ.

ನಾಯೀಮಗ : ನಾನೂ ಹಾಡತೀನಿ.

ಶಾರಿ : ರಾಜಕುಮಾರ ಕುಣಿದ.

ನಾಯೀಮಗ : ನಾನೂ ಕುಣೀತೀನಿ.
(ಕಳ್ಳೆಮಳ್ಳೆ ಆಡತೊಡಗುವನು)

ಸಂಗೀತಾ ಸಂಗೀತಾ....ನನಗ ಅಂಜಿಕಿ ಬರತೈತಿ. ನಿನ್ನ ಬಿಟ್ಟ ದೂರ ಹೋಗತೇನಿ.

ಶಾರಿ : ನಿಲ್ಲಿಸು ನಿಲ್ಲಿಸಂದರ.

ನಾಯೀಮಗ : ಸಂಗೀತಾ ಮಂದಿ ನನ್ನ ಜೋಡೀ ಬರಾಕ ಹತ್ಯಾರ!

ಶಾರಿ : ಹೌಂದ? ಯಾರ್ಯಾರು? ಗುರುತ ಹಿಡಿ.

ನಾಯೀಮಗ : ಎಲ್ಲಾರು ಹರಕ ಅಂಗಿ ಹಾಕ್ಯಾರ. ಹಸದ್ದಾರ. ಆದರ ಎಲ್ಲಾರು ನಗಾಕ ಹತ್ಯಾರ.

ಶಾರಿ : ಯಾಕಂತ?

ನಾಯೀಮಗ : ಹಾಡಾಕ ಹತ್ಯಾರ.

ಶಾರಿ : ಏನಂತ?

ನಾಯೀಮಗ : ನಾವು ನಾಯಿಗಳಲ್ರೆಪೋ ಅಂತ.

ಶಾರಿ : ಎಲ್ಲಾರು ಕೂಡಿ ಹಾಡಿಕೋತ ಎಲ್ಲಿಗಿ ಹೊಂಟೀರಿ?

ನಾಯೀಮಗ : ನಿನ್ನ ಹಂತ್ಯಾಕ.

ಶಾರಿ : ಹೌಂದ? ನೀ ನನ್ನ ಬಿಟ್ಟ ದೂರ ಹೋಗಾಕ ಆಗೂದಽ ಇಲ್ಲ. ಮತ್ತ ನನ್ನ ಹಂತ್ಯಾಕಽ ಬಂದಿ!
(ನಿಲ್ಲಿಸಿ ನೋಡುವನು.)

ನಾಯೀಮಗ : ಹೌಂದಲ್ಲ!

ಶಾರಿ : ನೀ ಎಷ್ಟ ಚಂದ ಕಾಣತಿ ಗೊತ್ತೈತಿ?

ನಾಯೀಮಗ : ಹೌಂದ? ನನ್ನ ತಲಿ ತಿರಗೇತಿ, ನನಗ ಗೊತ್ತಾಗೂದ s ಇಲ್ಲ. ಸಂಗೀತಾ ಕುಡದಾಗ ತಲೀ ತಿರಗತೈತಿ ಅಂತಾರ ಸುಳ್ಳಲ್ಲ ನೋಡು.

ಶಾರಿ : ನೀ ಎಷ್ಟ ಚಂದ ಕಾಣತಿ ಗೊತ್ತೈತಿ?

ನಾಯೀಮಗ : ಹೌಂದಲ್ಲ!

ಶಾರಿ : ನೀ ಎಷ್ಟ ಚಂದ ಕಾಣತಿ ಗೊತ್ತೈತಿ?

ನಾಯೀಮಗ : ಹೌಂದ? ನನ್ನ ತಲಿ ತಿರಗೇತಿ, ನನಗ ಗೊತ್ತಾಗೂದ ಇಲ್ಲ. ಸಂಗೀತಾ ಕುಡದಾಗ ತಲೀ ತಿರಗತೈತಿ ಅಂತಾರ ಸುಳ್ಳಲ್ಲ ನೋಡು.

ಶಾರಿ : ಯಾಕ?

ನಾಯೀಮಗ : ನನಗೀಗ ನನ್ನ ಬೆನ್ನ ಕಾಣಸಾಕ ಹತ್ತೇತಿ.

ಶಾರಿ : ಯಾಕ?

ನಾಯೀಮಗ : ನನಗೀಗ ನನ್ನ ಬೆನ್ನ ಕಾಣಸಾಕ ಹತ್ತೇತಿ.

ಶಾರಿ : ಹೌಂದ? ಬೆನ್ನ ಮ್ಯಾಲ ಎನ್ನೈತಿ?

ನಾಯೀಮಗ : ಸಾವ್ಕಾರ ಕುಂತಾನ.

ಶಾರಿ : ಕೆಳಗ ಎಸೀಬಾರದ?

ನಾಯೀಮಗ : ಅವ ಭಾಳ ಎತ್ತರಾಗ್ಯಾನ. ಅವನ ಜೋಡೀ ಮಾತಾಡಬೇಕಾದರ ನಾ ಒದರಿ ಒದರಿ ಮಾತಾಡತೀನಿ. ಅವ ಹಂಗ್ಯಾಕ ನಾಯೀಹಾಂಗ ಒದರ್ತೀಯೋ ಅಂತಾನ.

ಶಾರಿ : ನಾಯಿ ನಾ ಅಲ್ಲ, ನೀ ಅಂತ್ಹೇಳು.

ನಾಯೀಮಗ : ಓಡಿಹೋದ.

ಶಾರಿ : ಬೆನ್ನಹತ್ತಿ ಬ್ಯಾಟೀ ಆಡು.

ನಾಯೀಮಗ : ಏಏಏ ಽ...ಯಾರಾದರೂ ಆ ದೊಡ್ಡ ನಾಯೀ ನೋಡೀರೇನ್ರೆಪೊ ? ಕರ್ರಗೈತಿ, ಎತ್ತರೈತಿ ನೆತ್ತ್ಯಾಗ ಕಣ್ಣದಾವ. ಮಾತಿಗೊಮ್ಮೆ ಏ ನಾಯೀಮಗನ ಽ ಅಂತಿರತೈತಿ. ಸಿಕ್ಕರ ನನಗಷ್ಟ ಲಗೂನ ಹೇಳಿಕಳಸರಿ. ನನ್ನ ವಿಳಾಸ ಸಿದ್ದರಾಮ ಉರ್ಫ್ ನಾಯೀಮಗ. ಮುಕ್ಕಾಂ ಪೋಸ್ಟ್ ಶಿವಾಪುರ ಜಿಲ್ಲಾ ಬೆಳಗಾವಿ.
(ಹೀಗೆಯೇ ನಶೆಯಲ್ಲಿ ಹೇಳುತ್ತ ತೇಲಾಡುತ್ತ ಕೈಗೊಂದು ಕುಡುಗೋಲು ತಗೊಂಡಿದ್ದಾನೆ. ಸಿಕ್ಕಿತು ಸಿಕ್ಕಿತು ಎನ್ನುತ್ತ ಕುಡುಗೋಲು ಎಸೆಯುತ್ತಾನೆ. ಅದು ದೂರದ ಯಾವದೊ ನಾಯಿಗೆ ಹತ್ತಿ ಒದರುತ್ತದೆ. ನಾಯೀಮಗ ಗಾಬರಿ ಆಗುತ್ತಾನೆ.)

ಸಂಗೀತಾ, ನಾಯೀನ್ನ ಕೊಂದೆ! ಇನ್ನ ನನ್ನ ಜೇಲಿನಾಗ ಇಡತಾರೋ ಏನೊ! ಇಟ್ಟರ ಇಡಲಿ. ಜೇಲ ಽ ಬರೋಬರಿ ನನಗ!
(ಅವನ ಹುಚ್ಚಾಟ ನೋಡಿ ಶಾರಿ ನಗುತ್ತಿರುವಂತೆ ಮೇಳ ಬಂದು ರಂಗವನ್ನಾಕ್ರಮಿಸುವುದು.)

ಮೇಳ : ಪ್ರೀತಿಯೆಂಬ ಬೆಂಕಿಯೆದುರಿಗೆ
ನೋಡೆನ್ನ ಶಿವನೆ
ಕರಡಿರೂಪ ಕರಗಿ ಹೋದವೇ ||

ಪ್ರೀತಿ ಪ್ರೇಮ ದೊಡ್ಡದಲ್ಲವೇ
ಹೇಳೆನ್ನ ಶಿವನೆ
ಪ್ರೀತಿ ಪ್ರೇಮ ದೊಡ್ಡದಲ್ಲವೇ ||

(ಮೇಳ ಸರಿಯುತ್ತದೆ. ಸೋಮಣ್ಣ ತನ್ನ ಮನೆಯಲ್ಲಿ ಶಿಂಗಾರವಾಗುತ್ತಿದ್ದಾನೆ. ಪಕ್ಕದಲ್ಲಿ ದಾಸ ನಿಂತಿದ್ದಾನೆ. ತಾಯಿ ನಿಂತಿರಲಾರದೆ ನಿಂತು ಮಾತಾಡಲಿಕ್ಕೆ ಪ್ರಯತ್ನಿಸುತ್ತಿದ್ದಾಳೆ.)

ತಾಯಿ : ಮನೀಕಡೆ ಹಿಂಗ ನಿಷ್ಕಾಳಜಿ ಇದ್ದರ ಹೆಂಗೋ ಮಗನ ? ರಾತ್ರಿ ಯಾರೋ ಮನ್ಯಾಗ ಪಿಸಗುಟ್ಟಿಧಾಂಗ ಕೇಳಸತೈತಿ. ಗಂಡಸಿಂದು ಹೆಂಗಸಿಂದು ದನಿ ಕೇಳತೈತಿ, ಚೆಲಿವಿ ದೆವ್ವಾಗಿ ಮಾರ್ಯಾನ ಅಟ್ಟಿಸಿಕೊಂಡ ಬರ್ತಾಳಂತ ಹೇಳತಾರು. ನಿನ್ನ ಹೇಂತಿ ಹೆದರತಾಳು. ನಿನ್ನ ನೋಡಿದರ ಬರೀ ತೋಟದ ಮನ್ಯಾಗ ಹೋಗಿ ಕುಂತಿರತಿ, ಏನ್ಹೇಳಲಿ...

ಸೋಮಣ್ಣ : ಆಯ್ತುಬೇ. ಇಂದ ಕಡೀ ದಿನ. ಏ ದಾಸಾ, ಇನ್ನ ತಡ್ಯಾಕಾಗೋದಿಲ್ಲಾ ಅಂದೆ.

ದಾಸ : ಇನ್ನS ಹಾದಿಗಿ ಬಂದಿಲ್ಲರೀ.

ಸೋಮಣ್ಣ : ಬರದಿದ್ದರ ನನ್ನ ಹಾದಿ ನನಗ. ನನ್ನ ನೂರ ಪಾಪ ಇಂದಿಗೇ ಮುಗ್ಯಾಕಬೇಕು. ಇಷ್ಟ ದಿನ ಆದರೂ ಒಂದ ಪಾಪ ಮಾಡಾಕ ಆಗಲಿಲ್ಲಂದರ ದೇವರೆಲ್ಲಾ ನನ್ನ ನೋಡಿ ನಗತಾರ, ಗೊತ್ತದೇನು ? ಇಷ್ಟ ದಿವಸ ನಾ ತಡದದ್ದ S ಹೆಚ್ಚು. ನಾ ಯಾರನ್ನೂ ಎರಡ ಸಲ ಕ್ಷಮಿಸೋದಿಲ್ಲ. ಹೋಗಿ ನಾಯೀಮಗನಿಗ್ಹೇಳು : ಇಂದ ಸಂಜಿಕ ಸಂಗೀತಾನ್ನ ಕರಕೊಂಡು ಊರ ಹೊರಗಿನ ಹಾಳ ಮಠಕ್ಕ ಬಾ ಅಂತ. ಮುಂದಿಂದೆಲ್ಲಾ ಅವನಿಗೇ ಗೊತ್ತದ.

ದಾಸ : ಹಾಳ ಮಠದಾಗ ಯಾಕ್ರಿ ? ಅಲ್ಲೇನೈತಿ ?

ಸೋಮಣ್ಣ : ನಿನ್ನ ಮಗಳಂದರ ಹಲಸಿನ ಹಣ್ಣ ಇದ್ದಾಂಗ. ಅಲ್ಲಿ ನಿನ್ನ ಮಗಳ ಗಂಡ ಕುಂತಿರತಾನ. ಹಣ್ಣ ಸುಲದು ಆಕೀ ಮೈಯಾಗಿನ ತೊಳೆ ಬಿಡಿಸಿ ಬಿಡಿಸಿ ತಿಂತಾನ!

ದಾಸ : ಅವಸರ ಬ್ಯಾಡ್ರೀ, ಇನ್ನೆರಡ ದಿನ  ಬುದ್ಧೀರೀತಿ ಹೇಳೋಣು.

ಸೋಮಣ್ಣ : ಯಾಕ ? ನನಗ ವಯಸ್ಸಾಗೇತೇನು ? ಹಾದರ ಮಾಡಾಕ ಒಲ್ಲೆ ಅಂದರ ಮದಿವಿಯಾಗತೀನಿ ಅಂತ ಹೇಳು.

ದಾಸ : ಮದಿವ್ಯಾಗೂದ ಖರೆ ಏನ್ರಿ ?

ಸೋಮಣ್ಣ : ಯಾಕ ನನ್ನ ಮಾತಿನಾಗ ನಂಬಿಕಿಲ್ಲಾ ?
(ಒಳಗಿನ ಹೆಂಡತಿಗೆ)

ಏ ಕೇಳಿದೇನ ? ನಾನು ಆ ದಾಸರ ಹುಡಿಗಿ ಸಂಗೀತಾನ್ನ ಮದಿವೀ ಮಾಡಿಕೊಳ್ತೀನಿ. ಪರವಾನಿಗಿ ಕೊಟ್ಟಿದೀನಂತ ನನ್ನ ಮಾವಗ ಹೇಳು.
(ಒಳಗೆ ಲಕ್ಷ್ಮಿ ಬಿಕ್ಕುತ್ತಾಳೆ. ತಾಯಿ ಮರೆಯಾಗುತ್ತಾಳೆ.)

ಕೇಳಿದೇನಪ. ಕಬೂಲಿ ಅದಾಳಂತ. ಏ ಮಾರ್ಯಾ.
(ಮಾರುತಿ ಬರುವನು.)

ಆಕಿಗಿ ಔಷಧ ತಂದಕೊಟ್ಟೇನೊ ?

ಮಾರುತಿ : ಅವರಿಗೇನೂ ರೋಗ ಇಲ್ಲಂತ ಹೇಳ್ಯರ್ರೀ ಡಾಕ್ಟರು.

ಸೋಮಣ್ಣ : ಏನ ಆಲಸೀ ಡಾಕ್ಟರಪಾ! ಹೊಸ ಹೊಸ ರೋಗ ಕಂಡ ಹಿಡ್ಯಾಕ ಆಗೂದ ಇಲ್ಲ., ಹೋಗು ಕಣ್ಣೀರ ಬರದಂಥಾ ಔಷಧ ಇದ್ದರ ಕೊಡಂತ ಹೇಳು. ಹೋಗು.
(ಮಾರುತಿ ಹೋಗುವನು.)

ಏನ ಮಾವಾ, ಈ ಡ್ರೆಸ್ ನಿಮ್ಮ ಮಗಳು ಒಪ್ಯಾಳೇನು ?

ದಾಸ : ಹೂನ್ರಿ.

ಸೋಮಣ್ಣ : ನಿನ್ನ ಮಗಳು ಮೆಚ್ಚುವಂಥಾದ್ದು ಇನ್ನೇನಾದರೂ ಸ್ಪೆಶಲ್ ಇದ್ದರ ಹೇಳು. ಅದನ್ನೂ ಮಾಡಿಕೊಳ್ತೀನಿ.

ದಾಸ : ಇನ್ನೇನಿಲ್ಲರಿ.

ಸೋಮಣ್ಣ : ಮತ್ತ ಯಾಕ ಕಣ್ಣ ಬಿಟ್ಟ ಹೆಣಧಾಂಗ ನನ್ನ ನೋಡತಾ ನಿಂತಿ ? ಹೋಗಿ ಮಗಳ್ನ ರೆಡಿ ಮಾಡಬಾರದ ?

ದಾಸ : ಮದಿವೀ ಮಾತಾದರ ಹೊರಗಿನ ಮಠಕ್ಕ ಯಾಕ ಹೋಗಬೇಕ್ರಿ ? ತೋಟದಾಗಿನ ಮನ್ಯಾಗS ಮಾತಾಡಬಹುದಲ್ಲ ?

ಸೋಮಣ್ಣ : ನಿನ್ನ ಮಗಳು ಮೊದಲಗಿತ್ತಿ. ಮೊದಲನೇ ರಾತ್ರಿ ಗುದಮುರಿಗಿ ಜಾಸ್ತಿ. ಆಸಪಾಸ ಯಾರೂ ಇರದಿದ್ದರ ಅನುಕೂಲ. ಹೌಂದಲ್ಲ ? ಇದು ನಿನಗೂ ಗೊತ್ತದS ಅಂತ ತಿಳಿದಿದ್ದೆ.

ದಾಸ : ಬೇಕಾದರ ನಾವಿಬ್ಬರೂ ಗಂಡಹೆಂಡತಿ ಹೊರಗ ಹೋಗತೀವಿ. ತೋಟದ ಮನ್ಯಾಗS....

ಸೋಮಣ್ಣ : ಆಜೂಬಾಜೂ ಮಂದಿ ಹಾದಾಡತಾರ. ಮಠದೊಳಗಾದರ ಎಷ್ಟ ಕಿರಚಾಡಿದರೂ ಕೇಳಿಸೋದಿಲ್ಲ. ಅಲ್ಲದ ನಾ ಸತ್ಕಾರ್ಯ ಮಾಡೋದೆಲ್ಲ ಅದS ಜಾಗದಾಗ. ತಿಳೀತಲ್ಲ ? ತಗೊ.

(ಹಣ ಎಸೆಯುವನು. ದಾಸ ತಗೊಳ್ಳುವನು.)

ದಾಸ : ಏನೊ ಕಲಾವಿದರು...

ಸೋಮಣ್ಣ : ಅದಕ್ಕ ಕೊಟ್ಟೇನಿ. ಇದರಾಗೇನಾದರೂ ಹೆಚ್ಚು ಕಮ್ಮಿ ಆದರ ನೀನು ಈ ತನಕ ತಗೊಂಡದ್ದನ್ನೆಲ್ಲಾ ಕಕ್ಕಬೇಕಾಗತದ. ನಿನ್ನ ಮಗಳಿಗಿ ಇದನ್ನು ಬರೋಬರಿ ತಿಳಸು. ಯಾಕಂದರ ಅದರ ಪರೀಕ್ಷೆ ನಡೆಯೋದು ಇಂದ ಽ. ಇನ್ನ ಹೋಗಿ ಮಗಳ್ನ ರೆಡಿ ಮಾಡ್ತೀಯಲ್ಲಾ ?

(ದಾಸ ಗಾಬರಿಯಿಂದ ಕತ್ತು ಹಾಕುತ್ತ ಹೋಗುವನು. ಮೇಳ ಬಂದು ರಂಗವನ್ನಾಕ್ರಮಿಸುವುದು.)

ಮೇಳ : ಕರಡೀ ಮದುವೆಗೆ ಬನ್ನಿರೇ | ರಾಜನ
ಮಗಳ ಮದುವೆಗೆ ಬನ್ನಿರೇ
ತುಂಬು ಹೃದಯಗಳಿಂದ ವಧೂವರರ ಹರಸೀರೆ
ಸೋ ಎನ್ನಿ ಶುಭವೆನ್ನಿರೇ | ಶಿವಶಿವ
ಸೋಬಾನವೆನ್ನಿರೇ || ಸೋ ||

ಗರತಿಗೆ ಜಯವೆನ್ನಿರೇ | ಗರತಿಯ
ಪತಿಗೆಂಟು ಜಯವೆನ್ನಿರೇ
ಸುಂದರ ಮುಖದಿಂದ ಶುಭವಾಕ್ಯ ನುಡಿಯಿರೆ
ಸೋ ಎನ್ನಿ ಶುಭವೆನ್ನಿರೇ || ಹರ ಹರ
ಸೋಬಾನವೆನ್ನಿರೇ|| ಸೋ ||

(ಮೇಲಿನ ಹಾಡು ನಡೆದಾಗ ಶಾರಿ ಶಿಂಗಾರಾಗುತ್ತಿರುವಳು. ಹಾಡು ಮುಗಿಯತ್ತಲೂ ಮುಂದಿನ ಶಿಂಗಾರಕ್ಕೆ ಒಳಕ್ಕೆ ಹೋಗುವಳು. ಮೇಳ ಮರೆಯಾಗಿ ದಾಸ ಮತ್ತು ಸಾವಂತ್ರಿ ಇಬ್ಬರೂ ಸಾಮಾನು ಸಮೇತ ಓಡಿಹೋಗುವ ತರಾತುರಿಯಲ್ಲಿ ಬರುವರು.)

ಸಾವಂತ್ರಿ : ಹೋಗೇಬಿಡೂಣಂದಿ ?

ದಾಸ : ಒಂದ ಽ ಮಿನಿಟ ತಡ ಮಾಡಿದರೂ ಮಸೋತಿ ಕೊರಳಿಗಿ ಬೀಳತೈತಿ. ಸಾವ್ಕಾರನ ಮಾತ ಕೇಳಿದ್ದರ ನೀ ಒಂದ ಅರಗಳಿಗಿ ಈ ಮನ್ಯಾಗ ಇರತಿರಲಿಲ್ಲ.

ಸಾವಂತ್ರಿ : ಶಾರಿಗಿ ಎಲ್ಲಾ ಹೇಳಿದಿ ?

ದಾಸ : ಎಲ್ಲಾ ಹೇಳೇನಿ. ಅಷ್ಟ ಽ ಅಲ್ಲ ಆಕಿ ಸಂತೋಷದಿಂದ ಕುಣಿದಾಡಾಕ ಹತ್ಯಾಳ.

ಸಾವಂತ್ರಿ : ಹಾಗಿದ್ದರ ಎಲ್ಲಾ ಸುರಳೀತ ಆಗತೈತಿ ಮತ್ತು ಯಾಕ ಹೋಗೋದು ?

ದಾಸ : ಆಕಿ ಏನ ತಿಳಕೊಂಡಳೋ! ಸಾವ್ಕಾರ ಏನ ತಿಳಿಕೊಂಡನೊ! ಅವರವರ ಶಿಂಗಾರ ನೋಡಿದರ ನನಗ್ಯಕೋ ಅಂಜಿಕಿ ಬರತೈತಿ. ನಾವು ಹೆಂಗೂ ಪಾರಾಗಿ ಹೋಗೂಣು. ಮುಂದ ಇಬ್ಬರೂ ಚೆಲೋ ಇದ್ದರ, ತಿರಿಗಿ ಬರೂಣಂತ. ಇಲ್ಲದಿದ್ದರ ಆಕೀ ಹಾದಿ ಆಕಿಗೆ, ನಮ್ಮ ಹಾದಿ ನಮಗ.

ಸಾವಂತ್ರಿ : ಆಕಿ ಶಿಂಗಾರಾಗೋದನ್ನ ನೋಡಿದರ ಸುಖರೂಪ ಮುಗಿದೀತಂತ ಅನ್ನಿಸೋದಿಲ್ಲಾ ?

ದಾಸ : ಈಗೇನು, ನೀ ಬರತೀಯೊ ಇಲ್ಲೊ ? ಅಕಾ ಬಂದರು.
(ದಾಸ ಹೊರಡುವನು. ಸಾವಂತ್ರಿಯೂ ಬೆನ್ನು ಹತ್ತುವಳು. ಶಾರಿ ಹೊಸ ಸೀರೆ ಉಟ್ಟುಕೊಂಡು ಮದುಮಗಳಂತೆ ಶಿಂಗಾರಾಗಿ ಸಂಭ್ರಮಿಸುತ್ತ ಬರುತ್ತಾಳೆ. ನಿಧಾನವಾಗಿ ನಾಯೀಮಗನೂ ಬರುತ್ತಾನೆ. ಅವನು ಕುದಿಯುತ್ತಿದ್ದಾನೆ.)

ನಾಯೀಮಗ : ನೀ ಸಿಂಗಾರಾಗೋದ ನೋಡಿ ನನಗ ಅಂಜಿಕಿ ಬರಾಕ ಹತ್ತೇತಿ.

ಶಾರಿ : ಯಾಕ? ಇಂದ ನನಗ ಮದಿವೀ ಗಂಡ ಸಿಗತಾನ. ತಯಾರಾಗಬಾರದೇನು ? ನೀ ನನ್ನ ಗಂಡನ್ನ ನೋಡಾಕ ಬರೂದಿಲ್ಲಾ ?

ನಾಯೀಮಗ : ಬರತೀನಿ.

ಶಾರಿ : ತಯಾರಾಗ ಮತ್ತ.

ನಾಯೀಮಗ : ಸಂಗೀತಾ ಮಠಕ್ಕ ಹೋಗಬ್ಯಾಡ.

ಶಾರಿ : ಗಂಡಂದ ಮ್ಯಾಲ ಮಠ ಏನು ? ಮನೀ ಏನು ?

ನಾಯೀಮಗ : ಮದಿವೀ ಮಾತಾದರ ಇಲ್ಲೇ ಮಾತಾಡಲಿ.

ಶಾರಿ : ಮದಿವೀ ಮಾತ ನಾ ಎಲ್ಲಿ ಬೇಕಾದರೂ ಮಾತಾಡಾಕ ತಯ್ಯಾರ. ಇಲ್ಲಿ ಯಾರ್ಯಾರೋ ಇರತಾರ. ಮದಿವೀ ಮುಂಚಿ ಅವನು ನಾನು ಏಕಾಂತ ಮಾತಾಡಿದರ ಎಷ್ಟ ಚಂದ ಇರತೈತಿ! ತುರುಬ ಬರೋಬರಿ ಆಗತೇನ್ನೋಡು. ಯಾಕ

ಮಾತಾಡವೊಲ್ಲಿ ? ನಾ ಮದಿವ್ಯಾದರ ನಿನಗ ಆನಂದ ಆಗಲಿಲ್ಲಾ ?

ನಾಯೀಮಗ : ಇಲ್ಲ.

ಶಾರಿ : ಯಾಕ ? ನಾ ಚಂದ ಇಲ್ಲೇನು ?

ನಾಯೀಮಗ : ಮಠಕ್ಕ ಹೋಗಬ್ಯಾಡ ಸಂಗೀತಾ.

ಶಾರಿ : ನಾ ಗೊಂಬೀ ಹಾಂಗ ಕಾಣ್ತೇನಂತ, ಖರೆ ಏನು ?

ನಾಯೀಮಗ : ಖರೆ.

ಶಾರಿ : ಮತ್ತ ನೀ ಯಾಕ ಹಾಂಗನ್ನೋದಿಲ್ಲ ? ನಾ ಗೊಂಬೀ ಹಾಂಗಿಲ್ಲೇನು ?

ನಾಯೀಮಗ : ಸಾವ್ಕಾರಂದಾರಲ್ಲಾ.

ಶಾರಿ : ನೀ ಅಂದಾಗ ನಾಚಿಕಿ ಬರತೈತೇನಂತ ನೋಡತೀನಿ. ಅನ್ನಲ್ಲಾ.

ನಾಯೀಮಗ : ಏನೋ ಹೇಳಬೇಕಂತಿದ್ದೆ.

ಶಾರಿ : ಹೇಳಲ್ಲ.

ನಾಯೀಮಗ : ಅದು....

ಶಾರಿ : ಏನದು ? ಹೇಳಂದರ. ನನಗ ಆಗಲೇ ನಾಚಿಕಿ ಬರಾಕ ಹತ್ತೇತಿS.

ನಾಯೀಮಗ : ಅದಲ್ಲ.

ಶಾರಿ : ಮತ್ತೇನು ?

ನಾಯೀಮಗ : ನನಗ ಸಾಯಬೇಕನಸತೈತಿ.

ಶಾರಿ : ಥೂ, ನನಗ ಎಷ್ಟೊಂದ ಒಳ್ಳೆ ನಾಚಿಕಿ ಬರಾಕ ಹತ್ತಿತ್ತು. ನಿನ್ನ ನೋಡಿ ಎಲ್ಲಾ ಹೊಂಟ್ಹೋಯ್ತು. ಸಾಯೋದಾದರ ಈ ಹೊತ್ತು ಮಂಗಳವಾರ, ಬ್ಯಾಡ. ಮುಂದ ಒಂದ ಒಳ್ಳೆ ದಿನ ನೋಡಿ ಸತ್ತೀಯಂತ. ಇಂದ ನನ್ನ ಜೋಡೀ ಬಾ. ನೀ ಏನS ಅನ್ನು. ನನ್ನ ಗಂಡ ಭಾಳ ನಶೀಬವಂತ. ಯಾಕಂದರ ಅವನ ಜೋಡೀ ಸಾಯಾಕ ನನ್ನಂಥಾ ಹುಡುಗಿ ಸಿಗತಾಳ ನೋಡು. ಅಳೋವಾಗ ನಾ ಎಷ್ಟ ಚಂದ ಕಾಣ್ತೇನಂತ ಗೊತ್ತಾ ?

ನಾಯೀಮಗ : ನೀ ಅಲ್ಲಿಗಿ ಹೋಗಬ್ಯಾಡಾ ಅಂದೆ.

ಶಾರಿ : ಇಂದ ಏನಾಗೇತಿ ನಿನಗ ? ಮತಕ್ಕ ಕರಕೊಂಬಾ ಅಂತ ಸಾವ್ಕಾರ ನಿನಗ ಹೇಳಿ ಕಳಿಸ್ಯಾರ. ಹಾಂಗ ನೋಡಿದರ ನೀನS ಅವಸರ ಮಾಡ್ಬೇಕು. ಅದು ಬಿಟ್ಟು ನೀನS ಹೋಗಬ್ಯಾಡಂದರ ಈ ಸುದ್ದಿ ಸಾವ್ಕಾರಗ ಗೊತ್ತಾದರ ನಿನ್ನ ಗತಿ ಏನಾದೀತು ? ಅಲ್ಲಿ ಏನಾದರೂ ಎಡವಟ್ಟ ಆಯ್ತು ಅನ್ನು, ನನ್ನ ಕಾಪಾಡಾಕ ನೀ ಇದ್ದS ಇರತಿ. ನನಗೇನ ಕಾಳಜಿ ಹೇಳು. ಯಾಕ ನೀ ನನ್ನ ರಕ್ಷಣಾ ಮಾಡೋದಿಲ್ಲಾ ?

ನಾಯೀಮಗ : ಮಾಡತೀನಿ.

ಶಾರಿ : ಬಾ ಹಂಗಾದರ.
(ಹೊರಡುವರು. ಮೇಳ ಬಂದು ರಂಗವನ್ನಾಕ್ರಮಿಸುವುದು.)

ಮೇಳ : ಕಾಸು ಕಾಸೆಂದರೆ ಕಾಸೇನ ದೊಡ್ಡದೊ ?
ಕಾಸಿಗೆಲ್ಲಿಯ ಹೃದಯವ್ಪೋ | ಏನೆಂಬೆಯೊ
ಕಾಸು ಕಂಡರೆ ಹೂವು ಹಸಿರು
ಚಿಗರ್ಯಾವೇನು |

ಕಾಸು ಎಸೆದಾಗೊಮ್ಮೆ ಬಿಸಿಲು
ಬಿದ್ದಾವೇನು |

ಕೂಸಿನ ನಗೆಗೇಸು ಬೆಲೆಯೊ | ಏನೆಂಬೆಯೊ ||

ಕೊಂಬುದಲ್ಲದೆ ಕೊಡುವ ಘನತೆ ಕಾಸಿಗೆ ಉಂಟೆ |

ನೋಟನ ಗೊಂಬಿಗೆ ಕಣ್ಣೀರು
ಬಂದಾವೆ |
ಪ್ರೀತಿಯೆಂಬುದಕಿದು ಸಮವೇ | ಏನೆಂಬೆಯೊ ||

(ಮೇಳ ಸರಿಯುತ್ತಲೂ ಸಾವ್ಕಾರ ಸೋಮಣ್ಣ ಮಠದಲ್ಲಿ ಕಾಯುತ್ತಿರುವುದು ಕಾಣಿಸುತ್ತದೆ. ನಾಯೀಮಗ, ಶಾರಿ ಬರುತ್ತಾರೆ. ನೋಡಿ ಸೋಮಣ್ಣ ಉತ್ಸಾಹಿತನಾಗುತ್ತಾನೆ.)

ಸೋಮಣ್ಣ : ಭೇಶ್ ನಾಯೀಮಗನ ಽ ಭೇಶ್! ತಗೊ ನಿನ್ನ ಬಹುಮಾನ.
(ಒಂದು ನಾಣ್ಯ ಎಸೆಯುವನು. ನಾಯೀಮಗ ಹಿಡಿದುಕೊಳ್ಳುವನು.)

ಬಾ ಸಂಗೀತಾ, ನಮ್ಮ ನಾಯಿ ಹೇಳಿದ ಕೆಲಸ ಯಾವುದೂ ಇಲ್ಲೀತನಕ ಹುಸಿಮಾಡಿಲ್ಲ. ಅದಕ್ಕ ಽ ಬಹುಮಾನ ಕೊಟ್ಟೆ. ಇಂಥಾ ಬಹುಮಾನ ಅವನ ಹಂತ್ಯಾಕ ತುಂಬ್ಯಾವ.

ಶಾರಿ : ಹೌಂದ್ರಿ ಭಾಳ ಖರೇತನದ ನಾಯಿ. ನೀವು ಕನಿಷ್ಠಂದರೂ ಅದರ ಕತ್ತಿಗೊಂದ ಚರ್ಮದ ಪಟ್ಟಿ ಬಹುಮಾನ ಕೊಡಬೇಕಿತ್ತರಿ.

ಸೋಮಣ್ಣ : (ದೊಡ್ಡದಾಗಿ ನಗುತ್ತ)
ಎಲಾ ಹುಡಿಗಿ! ಮಾತಿನಾಗ ನನ್ನ ಽ ಸೋಲಿಸಿದೆಲ್ಲ! ಎಷ್ಟಂದರೂ ಬಯಲಾಟದವಳು ನೋಡು. ಭೇಶ್! ಇಲ್ಲದಿದ್ದರ ನನ್ನಂಥವಗ ಇಷ್ಟ ಹುಚ್ಚ ಹತ್ತಿಸೋದು ಸಾಧ್ಯ ಇತ್ತೇನು ? ನಿಮ್ಮಪ್ಪ, ಅಂದರ ನನ್ನ ಮಾವ ಎಲ್ಲಾ ಹೇಳ್ಯಾನಂಥಾಂಗಾಯ್ತು.

ಶಾರಿ : ಎಲ್ಲಾ ಹೇಳ್ಯಾನ್ರಿ. ಅದಕ್ಕ ಽ ಇಷ್ಟ ಶಿಂಗಾರಾಗಿ ಬಂದೇನಿ.

ಸೋಮಣ್ಣ : ಎಷ್ಟ ದಿಗಲ ಹುಟ್ಟಿಸಿದಿ! ಹಗಲು ರಾತ್ರಿ ಎಷ್ಟ ಕಾಡಿದಿ! ಅದೆಲ್ಲ ಆಮ್ಯಾಲ ಹೇಳೇನಂತ. ಏ ನಾಯೇ ಹೊರಗ ನಡಿ.

ಶಾರಿ : ಅವ ಇಲ್ಲೇ ಇರಲಿ. ಯಾಕಂದರ ಅವನ ಮೂಗ ನೋಡಿದರ ನನಗ ನಗಿ ಬರತೈತಿ.

ಸೋಮಣ್ಣ : ಇನ್ನ ಮ್ಯಾಲ ಆ ತೋಟ ಇಂದು, ತೋಟದ ಮನೆ ನಿಂದು. ನಿನ್ನ ನಗಸಾಕ ಖಾಯಂ ಇವನ್ನ ನಿನ್ನ ಹಂತ್ಯಾಕ ಽ ಬಿಟ್ಟಿರತೀನಿ. ಆಯ್ತ? ನಾಯೇ, ಹೊರಗ ನಡಿ.

ಶಾರಿ : ಅವಯ್ಯಾ, ಅವನ್ನ ಬಿಟ್ಟ ನಾ ಹೆಂಗಿರಲಿ ?

ಸೋಮಣ್ಣ : ಯಾಕ ?

ಶಾರಿ : ಏನೊ ಸಾವ್ಕಾರ್ರು, ಮದಿವ್ಯಾಗಲಿ ಅಂತ ದೊಡ್ಡ ಮನಸ್ಸ ಮಾಡಿ ಹೇಳಿಕಳಿಸಿದಿರಂತ. ಅದಕ್ಕ ನಾನೂ ತಯಾರಾಗಿ ನನ್ನ ಗಂಡನ್ನ ನಾನS ಆರಿಸಿಕೊಂಡಬಿಟ್ಟೆ. ಇವನS ನನ್ನ ಗಂಡ. ಸಿದ್ದೂ, ಸಾವ್ಕರ್ರಿಗಿ ನಮಸ್ಕಾರ ಮಾಡು.
(ನಾಯೀಮಗ, ಸೋಮಣ್ಣ-ಇಬ್ಬರಿಗೂ ಆಘಾತವಾಗುತ್ತದೆ.)

ಸೋಮಣ್ಣ : ಏನ ಮಾತಾಡ್ತಿ ಅನೋದು ನಿನಗಾದರೂ ತಿಳದದ ಇಲ್ಲ ?

ಶಾರಿ : ತಿಳದS ಮಾತಾಡೇನಿ, ಇವು ಬಯಲಾಟದಾಗಿನ ಮಾತಲ್ಲ.

ಸೋಮಣ್ಣ : ಚಾಷ್ಟೀ ಮಾಡಬ್ಯಾಡ. ನನ್ನ ನಾಯಿ ಎಲ್ಲಿ ? ನಿನ್ನಂಥ ಬೆರಿಕಿ ಎಲ್ಲಿ ?

ಶಾರಿ : ಸೊಕ್ಕಿನಿಂದ ನಿಮ್ಮ ಕಣ್ಣು ನೆತ್ತ್ಯಾಗ ಹೋಗ್ಯಾವ ಸಾವ್ಕಾರರS. ಅದಕ್ಕ ನಿಮಗೆ ಮನಿಸೇರೆಲ್ಲಾ ನಾಯೀಹಂಗ ಕಾಣತಾರ. ಆಯ್ತು, ನಾಯೀಜೋಡಿ ಮದಿವ್ಯಾಗಾಕ ನಾನS ತಯಾರಾಗೇನಿ ಅಂದಮ್ಯಾಲೇನು ?

ಸೋಮಣ್ಣ : ಇನ್ನ ನಿನ್ನ ಧಿಮಾಕ ಇಳದಿಲ್ಲಂಥಾಂಗಾಯ್ತು. ಏ ನಾಯೇ, ಇದೆಲ್ಲಾ ಖರೆ ಏನೊ ?
(ನಾಯೀಮಗ ಸುಮ್ಮನಿರುವನು.)

ಆಯ್ತು. ಅದೇನಿದ್ದರೂ ಇಂದ ನೀ ನನ್ನ ಕೈಯಾಗಿಂದ ಪಾರಗೋದು ಶಕ್ಯS ಇಲ್ಲ. ಇದು ನಾಯಿಗೂ ಗೊತ್ತೈತಿ. ಬೇಕಾದರ ಕೇಳಿಕೊ. ನಿನಗ ಇಂದ ನನ್ನ. ನಾಯೀನೂ ತೋರಸ್ತೀನಿ. ಸಾವ್ಕಾರ ಸೋಮಣ್ಣ ಯಾರಂತ್ಲೂ ತೋರಸ್ತೀನಿ. ನನ್ನ ಜೋಡೀ ಚಾಷ್ಟೀ ಮಾಡ್ತೀಯೇನ ಭೋಸಡೆ...
(ಕೈ ಹಿಡಿದು ಎಳೆಯುವನು. ರಭಸಕ್ಕೆ ಶಾರಿ ಬೀಳುವಳು. ನಾಯೀಮಗ ಒಳಗೊಳಗೇ ಕುದಿಯುತ್ತಿದ್ದಾನೆ. ಆತ ಸುಮ್ಮನೇ ನಿಂತುದನ್ನು ಗಮನಿಸಿ ಶಾರಿಗೆ ನಿರಾಸೆಯಾಗಿ ಕೆಣಕುತ್ತಾಳೆ.)

ಶಾರಿ : ಥೂ ಹಲ್ಕಟ್ಟ, ನಾಲಾಯಖ, ನಾ ನಿನ್ನ ಹೇಂತಿ ಅಂತ ಹೇಳಲಿಲ್ಲಾ ? ನಿನ್ನ ಹೇಂತೀ ಮಾನ ನಿನ್ನ ಎದುರಿಗೇ ತಗೀತೇನಂತಾನ, ನಿನಗ ಒಂದೀಟಾದರೂ ಅಭಿಮಾನ ಇಲ್ಲಾ ? ನೀನೊಬ್ಬ ಗಂಡಸು ಅಂತ ತಿಳಿದಿದ್ದೆ, ಯಾವುದೋ ಶಾಪ ಹೊಂದಿದ ದೇವರೂ ಅಂತ ಅಂದ್ಕೊಂಡಿದ್ದೆ. ನನ್ನ ನಂಬಿಕಿ ಹುಸಿ ಮಾಡಿದೆಲ್ಲೊ ! ಬರೋವಾಗ ಏನ ಹೇಳಿದ್ದೀ ? ನನ್ನ ರಕ್ಷಣಾ ಮಾಡ್ತೀನಂತ ಹೇಳಿರಲಿಲ್ಲಾ ? ಇಷ್ಟ ಲಗು ಮರತಿ ?

ಸೋಮಣ್ಣ : ಎಷ್ಟ ಚಂದ ಆಟ ಆಡತಿ ? ಹಂಗೆಲ್ಲಾ ಹೇಳಿದ್ನ ಇವ ?
(ಗಹಗಹಿಸಿ ನಗುವನು.)

ನೀ ಭಾಳ ನಗಸ್ತಿ ನನ್ನ.

ಶಾರಿ : ಯಾಕ ?

ಸೋಮಣ್ಣ : ನಾಯೀ ಜೋಡಿ ಮದಿವ್ಯಾಗತೇನಂತೀ ನೋಡಲ್ಲ ! ಇಷ್ಟೊಂದ ಕತಿ ಕೇಳೇನಿ, ಒಬ್ಬ ಆಳು ರಾಜಕುಮಾರೀನ ಮದಿವ್ಯಾದದ್ದ ಕೇಳಿಲ್ಲ ತಗಿ. ಅಪಾ ರಾಜಕುಮಾರ, ನಿನ್ನ ರಾಜಕುಮಾರೀನ ಕಾಪಾಡಿಕೊ.
(ಶಾರಿಯ ಮೈಮೇಲೇರಿ ಹೋಗುವನು.)

ಶಾರಿ : ನನ್ನ ಮುಟ್ಟಿದರ ನೀ ಹಾಳಾಗಿ ಹೋಗ್ತಿ.

ಸೋಮಣ್ಣ : ಇಲ್ಲಿಗಿ ಬಂದ ಹುಡಿಗೇರೆಲ್ಲಾ ಮೊದಮೊದಲ ಹಿಂಗS ಹೇಳತಾರ. ಆಮ್ಯಾಲ ಅವರS ಸಾವ್ಕಾರ ಸೀರೀ ಕೊಡಸರಿ. ಕುಬಸಾ ಕೊಡಸರಿ ಅಂತಾರ. ಹೇಳತಾನ ಕೇಳ ನಾಯೀನ. ಯಾಕೋ ನಾಯೇ...
(ನಗುತ್ತ ನಿರ್ಲಕ್ಷ್ಯದಿಂದ ಅವಳ ಮೇಲೆ ಬೀಳಹೋಗುವನು. ಮಾತಿನ ಏಟುಗಳಿಂದ ನಾಯೀಮಗ ಈಗ ಒಂದು ನಿರ್ಧಾರಕ್ಕೆ ಬಂದವನು ಹಾರಿ ಸೋಮಣ್ಣನಿಗೆ ಏಟು ಹಾಕುವನು. ಸೋಮಣ್ಣ ಆಘಾತ ಮತ್ತು ಏಟಿನಿಂದ ತತ್ತರಿಸಿ ಬೀಳುವನು. ದನ ಬಡಿದಂತೆ ಇನ್ನೆರಡು ಏಟು ಹಾಕುವನು. ಕೊನೆಗೆ ಶಾರಿಯನ್ನು ಹಿಂದೆ ಹಾಕಿಕೊಂಡು ನಿಲ್ಲುವನು. ಶಾರಿಗೆ ಆನಂದ ಆಶ್ಚರ್ಯಗಳಾಗಿವೆ.)

ಸೋಮಣ್ಣ : ಯಾಕೋ ನಾಯೇ ?

ನಾಯೀಮಗ : ನಾಯಿ ಅಲ್ಲ ಮನಿಶ್ಯಾ ಅನ್ನರಿ, ಇಲ್ಲಾ ಸಿದ್ದರಾಮಾ ಅನ್ನರಿ.
(ಎನ್ನುತ್ತ ಅವನಿಂದ ತೆಗೆದುಕೊಂಡ ನಾಣ್ಯವನ್ನು ತಿರಿಗಿ ಎಸೆಯುವನು. ಸೋಮಣ್ಣ ಆಘಾತದಿಂದ ಚೇತರಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ.)

ಸೋಮಣ್ಣ : ಏನಿದರ ಅರ್ಥ ?

ನಾಯೀಮಗ : ಸಂಗೀತಾ ನನ್ನ ಹೇಂತಿ.

ಸೋಮಣ್ಣ : ಏನಲೇ, ನಿನಗ ಈಕೀನ್ನ ಮದಿವೀಮಾಡಿ ಮನರಂಜನೆ ಮಾಡಾಕ ನಾ ಸಾವ್ಕಾರಾದದ್ದು ?

ನಾಯೀಮಗ : ಎದಕ್ಕ ಆಗಿದ್ದೀರೊ. ಈಕೀ ಮೈಮಾಲ ಕೈಮಾಡಿದರ ನೀವು ಉಳಿಯೋದಿಲ್ಲ. ನಿಮ್ಮ ಒಳ್ಳೇದಕ್ಕ ಽ ಹೇಳತೇನಿ. ನೀವು ಈ ಜಾಗಾ ಬಿಡೋದ ಽ ಮೇಲು.
(ಸೋಮಣ್ಣನಿಗೆ ನಾಯೀಮಗನನ್ನು ಎದುರಿಸುವುದು ಅಸಾಧ್ಯವೆನ್ನಿಸಿ ಅವಮಾನಿತನಾಗಿ ಸೋತ ದನದಂತೆ ಹೊರಗೆ ಹೋಗುತ್ತಾನೆ. ಶಾರಿಗೆ ಅಭಿಮಾನ ತುಂಬುತ್ತದೆ. ಉತ್ಸಾಹದಿಂದ ಚಪ್ಪಾಳೆ ತಟ್ಟಿ ಅವನ ಸುತ್ತ ಕುಣಿಯತೊಡಗುತ್ತಾಳೆ. ಆದರೆ ನಾಯೀಮಗನಿಗೆ ಬಹುಬೇಗ ಪರಿಸ್ಥಿತಿಯ ಅರಿವಾಗುತ್ತದೆ.)

ಸಂಗೀತಾ ಇನ್ನೇನ ಮಾಡೋಣ ?

ಶಾರಿ : ಯಾಕ ಚಿಂತೀ ಮಾಡತಿ ? ಇಬ್ಬರೂ ತಪ್ಪಿಸಿಕೊಂಡ ಓಡಿ ಹೋಗೋಣು, ಮ್ಯಾಳ ಕಟ್ಟೋಣು. ನಾವಿಬ್ಬರೂ ಹೆಂಗ ಪ್ರೀತಿ ಮಾಡಿದಿವಿ, ಹೆಂಗ ಮದಿವ್ಯಾದಿವಿ ಅಂತ ಹಾಡ ಕಟ್ಟಿ ಬಯಲಾಟ ಮಾಡ್ತಾ ಊರೂರು ಅಡ್ಡಾಡೋಣು.

ನಾಯೀಮಗ : ಸಾವ್ಕಾರನ ಕೈ ನಿನಗ್ಗೊತ್ತಿಲ್ಲ, ಲಗು ಏಳು.

ಶಾರಿ : ಏ ನನ್ನ ಗಂಡಸ ಽ, ಇನ್ನ ಗುಡ್ಡ ಕೂಡಾ ನಮಗ ಅಡ್ಡ ಬರಾಣಿಲ್ಲ. ನಿನ್ನ ಕಣ್ಣಾಗಾಗಲೇ ನಾಳಿ ಮುಂಜಾನೆ ಬೆಳಕ ಮೂಡೇತಿ. ಈಗಾದರೂ ಹೇಳ್ತೀಯಿಲ್ಲೊ, ನಾ ಹೆಂಗ ಕಾಣ್ತೇನಂತ ?

ನಾಯೀಮಗ : ಚಂದ ಕಾಣತಿ. ಲಗು ಬಾ.
(ಹೊರಡುವರು. ಬಾಗಿಲು ಹಾಕಿದೆ ನಾಯೀಮಗನಿಗೆ ಇನ್ನಷ್ಟು ಆತಂಕವಾಗುತ್ತದೆ.)

ಘಾತ ಆತು, ಬಾಗಿಲಾ ಹಾಕ್ಕೊಂಡಾನ.

ಶಾರಿ : ಚೆಲೋ ಆಯ್ತು ಬಿಡು. ಊರ ಹೊರಗಿನ ಮಠ, ಹೊರಗ ಕತ್ತಲಿ, ನಿನ್ನಂಥಾ ಹರೇದ ಹುಡುಗನ ಜೋಡಿ ನಾ ಒಬ್ಬಾಕೀನ ಽ ಇರೂದಂದರ.... ಅಬ್ಬಾ ನನಗ ಅಂಜಿಕಿ ಬರತೈತಿ.

ನಾಯೀಮಗ : ಅಯ್ಯೋ ನಿನಗ ಹೆಂಗ ಹೇಳಲಿ ? ಇದು ಚಾಷ್ಟೀ ಮಾಡೋ ಹೊತ್ತಲ್ಲ. ಈಗ ಸಾವ್ಕಾರ ಕುಸ್ತಿ ಪೈಲವಾನರನ್ನ ಕರಕೊಂಬರತಾನ. ಅವರು ಬರೋದರೊಳಗ ಽ ಪಾರಾಗಬೇಕು. ಹಾ! ಈ ಮಠದಾಗೊಂದ ಸುರಂಗ ಮಾರ್ಗ ಐತಿ. ಮುಂದಿಂದ ಮುಂದ ನೋಡೋಣ, ಬಾ ಲಗು.

ಶಾರಿ : ನಡಿ ನಡಿ.

(ಹೊರಡುವರು, ಮೇಳದವರು ಬಂದು ರಂಗವನ್ನಾಕ್ರಮಿಸುವರು.)

ಕಥೆಗಾರ : ಮುಂದಿನ ಕತಿ ಕೇಳ್ರಿ ಶಿವಾ.

ಸಾವ್ಕಾರ ಸೋಮಣ್ಣನವರು ಹತ್ತೆಂಟ ಮಂದಿ |

ಕುಸ್ತಿಯವರನ್ನ ಕರೆಸಿ ಎಲ್ಲಾ ಬಂದೋಬಸ್ತ ಮಾಡಿದರು.

ಒಬ್ಬೊಬ್ಬರ ಕೈಯಾಗೂ ಲೋಡಮಾಡಿದ ಬಂದೂಕ

ಕೊಟ್ಟು | ಕಂಡಲ್ಲಿ ಗುಂಡ ಹಾರಸರಿ ಅಂತ ಅಪ್ಪಣಿ

ಕೊಟ್ಟರು | ಸ್ವಥಾ ತಾವೂ ಒಂದ ಬಂದೂಕ ಹಿಡಕೊಂಡು ||

ಹಾಳಮಠದ ಸುರಂಗ ದಾರಿ ಮುಗಿಯೋವಂಥಾ

ಆಯಕಟ್ಟಿನ ಜಾಗಾಕ್ಕ ಬಂದು ಕೂತರು |

ಹಿಮ್ಮೇಳ : ಇನ್ನೆಂಗ ಹೋಗತಾನ ಹೋಗಲಿ ಆ ನಾಯೀಮಗ.

ಕಥೆಗಾರ : ದಾರೀ ಕಾಯ್ತಾ ಕಾಯ್ತಾ| ಜಾಗರಣಿ ಮಾಡ್ತಾ ಮಾಡ್ತಾ|

ಬೆಳ್ಳೀ ಚಿಕ್ಕಿ ಮೂಡಿತು | ಮುಂಗೋಳಿ ಕೂಗಿ

ಮೂಡಣದಾಗ ಬಂಗಾರ ಬೆಳಕ ಮೂಡಿತು|

ಆಗ ನೋಡ್ರಿ ಶಿವಾ, ಖರೇ ಹೇಳಿದರ ಕೇಳತೀರಿ|

ಖೊಟ್ಟಿ ಹೇಳಿದರ ಕೇಳತೀರಿ| ಅಷ್ಟರಾಗ ಒಬ್ಬ

ಆಳಮಗ ಓಡಿಬಂದ,-

ಆಳಮಗ : ಸಾವ್ಕಾರ ಽ ಸಾವ್ಕಾರ ಽ

ಸೋಮಣ್ಣ : ಯಾಕೊ :

ಆಳಮಗ : ಘಾತ ಆತರಿ. ಮಾರ್ಯಾ ಇರಾಕಿಲ್ಲರಿ ?

ಸೋಮಣ್ಣ : ಯಾ ಮಾರ್ಯಾ ?

ಆಳಮಗ : ಅವನS ಆ ಚೆಲವೀಗಂಡ, ನಿಮ್ಮ ಮನ್ಯಾಗ ಚಾಕರ ಇದ್ದನಲ್ಲರಿ,-

ಸೋಮಣ್ಣ : ಮುಂದೇನಾಯ್ತು ಒದರು

ಆಳಮಗ : ಅವನ ನಿಮ್ಮ ಹೆಂಡರ್ನ ಓಡಿಸಿಕೊಂಡ ಹೋದ್ನಂತ.

ಸೋಮಣ್ಣ : ಖರೆ ಏನು ?

ಆಳಮಗ : ಹೂನ್ರಿ, ನಿಮ್ಮ ತಾಯಿ ಹೇಳಿ ಕಳಿಸಿದರು.

ಬಂಟ : ಸಾವ್ಕಾರ ಸಾವ್ಕಾರ, ನಾಯೀಮಗ ಸಂಗೀತಾ ಓಡಿ ಹೊಂಟಾರ...
(ಎಂದು ಓಡಿಹೋಗುತ್ತಿದ್ದ ನಾಯೀಮಗ ಶಾರಿಯನ್ನು ತೋರಿಸಿ ಬಂದೂಕು ರೆಡಿ ಮಾಡುವನು. ಸೋಮಣ್ಣ ಖಿನ್ನನಾಗಿ ಏನುಮಾಡಬೇಕೆಂದು ತೋಚದೆ, ಓಡುತ್ತಿರುವ ಜೋಡಿಯನ್ನೇ ಕ್ಷಣಹೊತ್ತು ನೋಡುತ್ತಾನೆ. ಬಂದೂಕು ಹಾರಿಸಕೂಡದೆಂದು ಎಲ್ಲರಿಗೂ ಸನ್ನೆ ಮಾಡಿ ಮೆಲ್ಲಗೆ ಮುಖ ತಿರುಗಿಸುತ್ತಾನೆ. ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಮೇಳ ಅವರನ್ನು ಮರೆಮಾಡುತ್ತದೆ.)

ಕಥೆಗಾರ : ನೋಡ್ರಿ ಶಿವಾ, ಇಲ್ಲಿಗೆ ಕತಿ ಸುರುವಾಯ್ತು,
ಪ್ರೀತಿ ಪ್ರೇಮಾ ಕಾಸಿಗಿಂತ ದೊಡ್ಡದಂತೆ, ದೊಡ್ಡ ದೊಡ್ಡದವರೆಲ್ಲಾ ಸಣ್ಣ ಮಂದಿಗಿ ತೋರಿಸಿಕೊಟ್ಟರು.
ಅದಕ್ಕ ನಾವೂ ಹಾಡತೇವ್ರಿ.

ಭೂಮಿ ತಿರಗತೈತಿ ಯಾತಕೆ
ಆ ರವಿಯ ಸುತ್ತ
ಪ್ರೀತಿ ಪ್ರೇಮದಿಂದ ಅಲ್ಲವೇ ||

ಸುರಿಯತಾವು ಮಳಿಗಳ್ಯಾತಕೆ
ಈ ನೆಲದ ಮ್ಯಾಲೆ
ಪ್ರೀತಿ ಪ್ರೇಮದಿಂದ ಅಲ್ಲವೇ ||

ಹುಟ್ಟತಾವು ಹಸುರು ಯಾತಕೆ
ಹೂ ನಗುವುದ್ಯಾಕೆ
ಪ್ರೀತಿ ಪ್ರೇಮದಿಂದ ಅಲ್ಲವೇ ||

ಮಂಗಳಂ